ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-07 • ಏಪ್ರಿಲ್ 2024




## ಚುನಾವಣಾ ಪರ್ವ
## ದೇಶದ ಗರ್ವ

ಲೋಕಸಭಾ ಚುನಾವಣೆ 2024

Downloaded From:www.kpscvaani.com



ಲೋಕಸಭಾ ಚುನಾವಣೆ–2024 ರ ವೇಳಾಪಟ್ಟಿ ಕುರಿತು ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಮಾತನಾಡಿದ ಸಂದರ್ಭ. ಈ ಸಂದರ್ಭದಲ್ಲಿ ಅಪರ ಮುಖ್ಯ ಚುನಾವಣಾಧಿಕಾರಿ ವೆಂಕಟೇಶ್ ಕುಮಾರ್ ಹಾಗೂ ಕೂರ್ಮ ರಾವ್ ಅವರು ಉಪಸ್ಥಿತರಿದ್ದರು.



ಲೋಕಸಭಾ ಚುನಾವಣೆ–2024 ರ ಅಂಗವಾಗಿ ಮಾರ್ಚ್ 20 ರಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಮುಖ್ಯ ಚುನಾವಣಾಧಿಕಾರಿಗಳ ಕಚೇರಿವತಿಯಿಂದ ಹಮ್ಮಿಕೊಳ್ಳಲಾಗಿದ್ದ "ಚುನಾವಣಾ ಸಮಯದಲ್ಲಿ ಮಾಧ್ಯಮ" ಕಾರ್ಯಗಾರದಲ್ಲಿ ವಾರ್ತಾ ಇಲಾಖೆಯ ಆಯುಕ್ತರಾದ ಹೇಮಂತ್ ಎಂ ನಿಂಬಾಳ್ಕರ್, ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಹಾಗೂ ಅಪರ ಮುಖ್ಯ ಚುನಾವಣಾಧಿಕಾರಿಗಳಾದ ವೆಂಕಟೇಶ್ ಕುಮಾರ್ ಅವರು ಮತದಾನದ ಸಮಯದಲ್ಲಿ ಶಾಯಿ ಹಾಕುವ ಬೆರಳನ್ನು ತೋರಿಸುತ್ತಿರುವುದು.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-07 • ಏಪ್ರಿಲ್ 2024



**06** ಆರಂಭಗೊಂಡ ಸಾರ್ವತ್ರಿಕ ಲೋಕಸಭಾ ಚುನಾವಣಾ ಪರ್ವ
• ಜಡಿಯಪ್ಪ ಗೆದ್ಲಗಟ್ಟ

**13** ಜನತಂತ್ರದ ಮಹಾಹಬ್ಬ
• ಮಾನಸಿ ಮಂಜುನಾಥ್

**17** ಮತದಾರ ಜಾಗೃತಿಗಾಗಿ ಹಾಟ್ ಏರ್ ಬಲೂನ್ ಹಾರಾಟ
• ಧನಂಜಯ.ಬಿ

**19** ಮಾಧ್ಯಮಗಳಿಗೆ ಚುನಾವಣಾ ಪೂರ್ವ ಕಾರ್ಯಾಗಾರ
• ಜಯಶ್ರೀ ನಾಡಿಗ್



**21** ಜಲಕ್ಷಾಮ: ಪಾಠ ಕಲಿತರಷ್ಟೇ ಸುಸ್ಥಿರ ಪರಿಹಾರ
• ಎಂ.ಎಚ್. ಭಾರತಿ ಗೌಡ

**24** ಭೂಮಿಯ ಸುಸ್ಥಿರ ಆರೋಗ್ಯ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ
• ಮಹಾಂತೇಶ ಅ. ಗುಡೋಡಗಿ

**26** ಅಂಬೇಡ್ಕರ್ ಮತ್ತು ಸಂವಿಧಾನ
• ಅರುಣ್ ಜೋಳದಕೂಡ್ಲಿಗಿ

**30** ತೊಂಬತ್ತು ವರ್ಷಗಳ ಕನ್ನಡ ಸಿನಿಮಾ – ಒಂದು ಅವಲೋಕನ
• ಡಾ.ಕೆ. ಪುಟ್ಟಸ್ವಾಮಿ

**35** ಬೇಸಿಗೆಯ ಬೇಗೆ ನೀಗುವ ಬಗೆ
• ಡಾ|| ಕರವೀರಪ್ರಭು ಕ್ಯಾಲಕೊಂಡ



**38** ಕನ್ನಡ ನಾಡಿನ ತಂಪಿನ ಅಂಗಳಗಳು
• ಪಿ.ಮಮತಾ

**41** ಚೈತ್ರದ ಚೈತನ್ಯ: ಯುಗಾದಿ
• ಡಾ. ಗುರುರಾಜ ಪೋಶೆಟ್ಟಿಹಳ್ಳಿ



**43** ಜಗತ್ತಿನ ಗಮನ ಸೆಳೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
• ಎನ್. ವಿದ್ಯಾಶಂಕರ್

**47** ಪುಸ್ತಕ ಸಂಸ್ಕೃತಿ: ಸುಂದರ ಬದುಕಿನ ಆಕೃತಿ
• ಸಂಗಮನಾಥ ರೇವತಗಾಂವ

**50** ಪದಬಂಧ-53

**ಪ್ರಧಾನ ಸಂಪಾದಕರು**
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಮಂಜುನಾಥ ಡಿ.ಡೊಳ್ಳಿನ
ಜಂಟಿ ನಿರ್ದೇಶಕರು (ಹೆ.ಪ್ರ)

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

'ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರಿದೆಯೇ?' ಜಡಿಯಪ್ಪ ಗೆದ್ಲಗಟ್ಟಿ ಅವರು ಬರೆದಿರುವ ಲೇಖನ ಸಮಗ್ರ ಮಾಹಿತಿಯನ್ನು ನೀಡಿತು. ಪಟ್ಟಿಯಲ್ಲಿ ಹೆಸರು ಪರಿಶೀಲಿಸುವ, ಸೇರ್ಪಡೆ, ತಿದ್ದುಪಡಿ ವರ್ಗಾವಣೆ... ಮುಂತಾದ ವಿಷಯಗಳು ಮತದಾರರಿಗೆ ಉಪಯುಕ್ತವಾಗಿದ್ದವು. ಹಾಗೂ ರಾಜ್ಯದ ಮತದಾರರ ಅಂಕಿ-ಅಂಶಗಳೂ ಕೂಡ ಜ್ಞಾನಾರ್ಜನೆಗೆ ಪೂರಕವಾಗಿವೆ.

**-ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

* * *

ಬಂಡೀಪುರ ಸಫಾರಿಗೆ ಹೋಗುವ ಪ್ರವಾಸಿಗರಿಗೆ ವಿಮಾ ಸೌಲಭ್ಯ ನೀಡುತ್ತಿರುವುದನ್ನು ಓದಿ ತುಂಬಾ ಸಂತಸವಾಯಿತು. ಬೆಂಗಳೂರು ಮತ್ತು ಮೈಸೂರಿನ ಸುತ್ತಮುತ್ತಲಿನ ಜನರಿಗೆ ಬಂಡೀಪುರವು ವಾರಾಂತ್ಯದ ವಿಹಾರ ತಾಣವಾಗಿದೆ. ಹುಲಿ ಸಂರಕ್ಷಿತ ಈ ಅರಣ್ಯದಲ್ಲಿ ಕೆಲವೊಮ್ಮೆ ಪ್ರಾಣಿಗಳು ಸಫಾರಿಗೆ ಬಂದವರ ಮೇಲೆ ಎರಗಿದ ಸಣ್ಣಪಟ್ಟ ಘಟನೆಗಳು ಸಂಭವಿಸಿವೆ.

ಹಾಗಾಗಿ ಸಫಾರಿಗೆ ಬಂದ ಪ್ರವಾಸಿಗರಿಗೆ ವಿಮಾ ಸೌಲಭ್ಯ ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯ ವಿಚಾರವಾಗಿದೆ. ಹಾಗೆಯೇ ಪ್ರಾಣಿಗಳ ಲಾಲನೆ-ಪಾಲನೆ ಮಾಡುವ ಸಿಬ್ಬಂದಿಗಳಿಗೂ ವಿಮಾ ಸೌಲಭ್ಯ ದೊರಕುವಂತೆ ಮಾಡಿರುವುದು ಸ್ವಾಗತಾರ್ಹ ಸಂಗತಿ.

**-ಕೇಶವ ಎನ್.ಕೆ, ನಂಜನಗೂಡು**

* * *

ಮಾರ್ಚ್ 2024 ರ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ "ಸಿದ್ದಿ ಮಹಿಳೆಯರ ಹೋಂ ಸ್ಟೇನಲ್ಲಿ ಅರಳಿರುವ ಗುರ್ಗೆಕಟ್ಟೆ ಹೂ" ಲೇಖನದಲ್ಲಿ ಸಿದ್ದಿ ಮಹಿಳೆಯರು ಹೋಂ ಸ್ಟೇ ನಡೆಸುವ ಮೂಲಕ ಸ್ವಾಭಿಮಾನದ ಬದುಕು ನಡೆಸುತ್ತಿರುವುದನ್ನು ತಿಳಿದು ಆಶ್ಚರ್ಯ ಮತ್ತು ಹೆಮ್ಮೆ ಎನಿಸಿತು. ಅಲ್ಲದೆ ಲೇಖನದಿಂದ ಹೋಂ ಸ್ಟೇ ನಲ್ಲಿ ಸಿಗುವ ಸೌಲಭ್ಯಗಳು ಮತ್ತು ಅವರು ತಯಾರಿಸುವ ಖಾದ್ಯಗಳ ಪರಿಚಯ ಸಿಕ್ಕಿತು. ಸಿದ್ದಿ ಜನಾಂಗದವರು ತಯಾರಿಸುವ ಕೆಂಪು ಇರುವೆಯ ಚಿಗಳಿ ಚಟ್ನಿಯ ಸವಿಯನ್ನು ಒಮ್ಮೆ ಸವಿಯಬೇಕು ಅನಿಸಿದೆ. ಇಂತಹ ಉಪಯುಕ್ತ ಲೇಖನ ಪ್ರಕಟಿಸಿದಕ್ಕೆ ಧನ್ಯವಾದಗಳು.

**-ಪ್ರಭುದೇವ ಎಂ. ಆರ್, ಮೈಸೂರು**

* * *

"ಮರಾಠಿ ಮಣ್ಣಿನಲ್ಲಿ ಶ್ರಮಿಕ ಮಕ್ಕಳ ಕನ್ನಡ ಶಾಲೆ" ಲೇಖನ ಅತ್ಯುತ್ತಮವಾಗಿತ್ತು. ಪುಣೆಯಲ್ಲಿ ನಮ್ಮ ರಾಜ್ಯದಿಂದ ಕೆಲಸ ಅರಸಿ ಪುಣೆಗೆ ವಲಸೆ ಹೋಗಿರುವ ಶ್ರಮಿಕ ವರ್ಗದ ಮಕ್ಕಳಿಗಾಗಿ ಕನ್ನಡ ಶಾಲೆಯನ್ನು ಸ್ವತಃ ತಾವೇ ಪ್ರಾರಂಭಿಸಿದ ಕಲ್ಮಾಡಿ ಶಾಮರಾವ್ ಅವರಿಗೆ ನನ್ನ ನಮನಗಳು. ಈಗಿನ ಕಾಲದಲ್ಲಿ ಕನ್ನಡ ಶಾಲೆಗಳು ಮುಚ್ಚಿಹೋಗುತ್ತಿರುವಾಗ ಇವರ ಶಾಲೆಯು ಇನ್ನೂ ನಡೆಯುತ್ತಿರುವುದನ್ನು ತಿಳಿದು ತುಂಬಾ ಖುಷಿಯಾಯಿತು.

ದೂರ ಊರಿಗೆ ಹೊಟ್ಟೆ ಪಾಡಿಗೆ ಹೋದ ಕಾರಣ, ಅಲ್ಲಿ ಕನ್ನಡ ಶಾಲೆ ಇಲ್ಲದರಿಂದ ಪಾಲಕರು ಮಾಡುವ ಕೆಲಸದ ಜಾಗದಲ್ಲೇ ಮಕ್ಕಳೂ ಕೂಡ ದುಡಿಯುತ್ತಾ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದರು. ಆದರೆ ಶಾಮರಾವ್ ಅವರು ಇಂತಹ ಮಕ್ಕಳಿಗಾಗಿಯೇ ಶಾಲೆ ತೆರೆದು ಅವರಿಗೆ ಅಕ್ಷರ ಜ್ಞಾನ ನೀಡಿರುವುದು ನಿಜಕ್ಕೂ ಹೆಮ್ಮೆಯ ವಿಚಾರ. ಈ ಕುರಿತು ನಮಗೆ ಮಾಹಿತಿ ಒದಗಿಸಿದ ಲೇಖಕ ಮಂಜುನಾಥ್ ಚಾಂದ್ ಅವರಿಗೆ ಧನ್ಯವಾದಗಳು.

**-ಶ್ರೀನಿವಾಸ್, ಕನಕಪುರ**

* * *

ಬೆಂಗಳೂರು ಇನ್ನು ಕೆಲವೇ ದಿನಗಳಲ್ಲಿ ಮುಂಬೈ ಆಗುವುದರಲ್ಲಿ ಸಂಶಯವಿಲ್ಲ. ಕಾರಣ ಪ್ರತಿ ಮನೆಯಲ್ಲೂ ಎರಡೆರಡು ಕಾರು, ಮೂರ್‍ನಾಲ್ಕು ಸ್ಕೂಟರ್‌ಗಳಿರುವುದು. ಒಂದು ಜಾಗಕ್ಕೆ ಹತ್ತು ನಿಮಿಷದಲ್ಲಿ ಕ್ರಮಿಸಬಹುದಾದು ಮೂವತ್ತು ನಿಮಿಷ ತೆಗೆದುಕೊಳ್ಳುತ್ತಿದೆ. ಇದಕ್ಕೆ ಕಾರಣ ಟ್ರಾಫಿಕ್ ಜಾಮ್. ಟ್ರಾಫಿಕ್ ಜಾಮ್‌ಗೆ ರಸ್ತೆ ಮೇಲೆ ಹೆಚ್ಚು ವಾಹನಗಳು ಚಲಿಸುತ್ತಿರುವುದು ಮಾತ್ರ ಕಾರಣವಾಗುವುದಿಲ್ಲ. ಅದಕ್ಕೆ ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳನ್ನು ಹೇಗೆಂದರೆಹಾಗೆ ಪಾರ್ಕಿಂಗ್ ಮಾಡುತ್ತಿರುವುದು ಪ್ರಮುಖ ಕಾರಣವಾಗಿದೆ. ಅದರಿಂದಾಗಿ ಬೆಂಗಳೂರು ನಗರದಲ್ಲಿ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ.

ಹಾಗಾಗಿ ಜನರಿಗೆ ವಾಹನ ಪಾರ್ಕಿಂಗ್ ಕುರಿತಂತೆ ಇರುವ ಕಾನೂನು ನಿಯಮಗಳ ಕುರಿತು ವಾರ್ತಾ ಜನಪದದಲ್ಲಿ ಲೇಖನ ಪ್ರಕಟಿಸಿರುವುದು ಸೂಕ್ತವಾಗಿದೆ. ಡಾ. ಅನಿಲ್ ಕುಮಾರ್ ಪಿ. ಗ್ರಾಮಪುರೋಹಿತ್ ಅವರು ವಿವರವಾಗಿ ಪಾರ್ಕಿಂಗ್ ಕುರಿತ ಕಾನೂನು ಮತ್ತು ನಿಯಮಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ವಾಹನ ಖರೀದಿಸುವ ಮೊದಲು ಜನರು ಪಾರ್ಕಿಂಗ್ ಕುರಿತ ಕಾನೂನುಗಳನ್ನು ತಿಳಿಯುವುದು ಒಳಿತು. ಆಗಲಾದರೂ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಕಡಿಮೆಯಾಗಬಹುದು.

**-ಪ್ರದೀಪ್ ಕುಮಾರ್, ಬೆಂಗಳೂರು**

ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಮಾರ್ಚ್ ಮಾಹೆಯ ವಾರ್ತಾ ಜನಪದ ಸಂಚಿಕೆಯಲ್ಲಿ ನಮ್ಮ ರಾಜ್ಯದ ಪ್ರಥಮ ಮಹಿಳಾ ಎಂಜಿನಿಯರ್ ಆದ ರಾಜೇಶ್ವರಿ ಚಟರ್ಜಿ ಅವರ ಪರಿಚಯ ಮಾಡಿಸಿರುವುದು ಅತ್ಯಂತ ಪ್ರಸ್ತುತ ಅನಿಸಿತು. ಈಗಿನ ಕಾಲದ ಮಕ್ಕಳಿಗೆ ಇವರ ಪರಿಚಯ ಇರುವುದಿಲ್ಲ. ಆಗಿನ ಕಾಲದಲ್ಲಿ ಮಹಿಳೆಯೊಬ್ಬರು ಎಂಜಿನಿಯರ್ ಆದುದ್ದು ಸಾಮಾನ್ಯ ಸಂಗತಿಯಲ್ಲ. ಸರ್. ಸಿ.ವಿ.ರಾಮನ್ ಅವರ ಕೈಕೆಳಗೆ ಇವರು ಕೆಲಸ ಮಾಡಿದ್ದರು ಎಂದು ತಿಳಿದು ಹೆಮ್ಮೆ ಆಯಿತು. ಲೇಖನದಲ್ಲಿ ರಾಜೇಶ್ವರಿ ಅವರು ಮಾಡಿರುವ ಸಾಧನೆಗಳನ್ನು ಲೇಖಕರು ಸಂಕ್ಷಿಪ್ತವಾಗಿ ತಿಳಿಸಿಕೊಟ್ಟಿದ್ದಾರೆ. ಈ ಲೇಖನ ಬರೆದಿರುವ ಲೇಖಕರಿಗೂ ಮತ್ತು ಸಂಪಾದಕ ಬಳಗದವರಿಗೂ ಅಭಿನಂದನೆಗಳು.

**-ಶಶಿರೇಖಾ ಸಿ.ಎಂ, ಚಾಮರಾಜನಗರ**

'ವಾರ್ತಾ ಜನಪದ' ಮಾಸಿಕ ಈಗ
**www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ರ ವೇಳಾಪಟ್ಟಿಯನ್ನು ಭಾರತ ಚುನಾವಣಾ ಆಯೋಗವು ಪ್ರಕಟಿಸಿದೆ. ನಮ್ಮ ರಾಜ್ಯದಲ್ಲಿ ಮೊದಲ ಹಂತದಲ್ಲಿ 14 ಲೋಕಸಭಾ ಕ್ಷೇತ್ರಗಳಲ್ಲಿ ಏಪ್ರಿಲ್ 26 ರಂದು, ಎರಡನೇ ಹಂತದಲ್ಲಿ 14 ಲೋಕಸಭಾ ಕ್ಷೇತ್ರಗಳಲ್ಲಿ ಹಾಗೂ ಶೋರಾಪೂರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಮೇ 7 ರಂದು ಜರುಗಲಿದೆ. ಈಗಾಗಲೇ ಮೊದಲ ಹಂತದ ಚುನಾವಣೆಗೆ ಅಧಿಸೂಚನೆ ಕೂಡ ಹೊರಡಿಸಲಾಗಿದ್ದು, ಎರಡುವರೆ ತಿಂಗಳ ಕಾಲ ಚುನಾವಣಾ ನೀತಿ ಸಂಹಿತೆ ಜಾರಿಯಾಗಿದೆ.

ದೇಶದಾದ್ಯಂತ ಏಳು ಹಂತದಲ್ಲಿ ಚುನಾವಣೆ ನಡೆಯಲಿದ್ದು, ಜೂನ್ 4 ರಂದು ಚುನಾವಣಾ ಫಲಿತಾಂಶ ಪ್ರಕಟಗೊಳ್ಳಲಿದೆ. ಚುನಾವಣಾ ನೀತಿ ಸಂಹಿತೆಯು ಜೂನ್ 6 ಕ್ಕೆ ಕೊನೆಗೊಳ್ಳಲಿದೆ. ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡಿರುವ ಹಿನ್ನೆಲೆಯಲ್ಲಿ ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯು ಚುನಾವಣಾ ಸಿದ್ಧತೆಯಲ್ಲಿ ತೊಡಗಿದೆ. ಜೊತೆಗೆ ಜನರಿಗೆ ಮತದಾನದ ಮಹತ್ವವನ್ನು ತಿಳಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ಜನತಂತ್ರಗಳ ಚುನಾವಣೆಯಲ್ಲಿ ಮತದಾನ ಪ್ರಮುಖ ಅಂಗ. ಮತದಾನ ಮಾಡುವುದು ಪ್ರತಿಯೊಬ್ಬ ಭಾರತೀಯರ ಹಕ್ಕು ಮತ್ತು ಕರ್ತವ್ಯ. ಜನರು ಪಾಲ್ಗೊಂಡರಷ್ಟೇ ಜನತಂತ್ರದ ಹಬ್ಬ ಯಶಸ್ವಿಯಾಗುವುದು. ಒಂದು ಸುಭದ್ರ ಸರ್ಕಾರ ರಚನೆಯಲ್ಲಿ ಮತದಾರರ ಪಾತ್ರ ನಿರ್ಣಾಯಕವಾದುದು. ಹಾಗಾಗಿ ಪ್ರತಿಯೊಬ್ಬರು ತಪ್ಪದೇ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸುವ ಮೂಲಕ ಸುಭದ್ರ ಸರ್ಕಾರವನ್ನು ರಚನೆ ಮಾಡಬೇಕು.

2019 ರ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮತದಾನದ ಪ್ರಮಾಣ ಗ್ರಾಮೀಣ ಭಾಗಕ್ಕಿಂತ ನಗರ ಪ್ರದೇಶಗಳಲ್ಲಿ ಕಡಿಮೆ ಇದ್ದುದ್ದು ನಿಜಕ್ಕೂ ಶೋಚನೀಯ ಸಂಗತಿ. ಮತದಾನದ ದಿನಾಂಕವನ್ನು ರಜಾದಿನದ ಹಿಂದು ಮುಂದು ನಡೆಸುವುದರಿಂದ ನಗರದ ಜನರು ತಮ್ಮ ಕರ್ತವ್ಯವನ್ನು ಮರೆತು ಪ್ರವಾಸ ಕೈಗೊಳ್ಳುತ್ತಾರೆ ಎಂಬುದನ್ನು ಮನಗಂಡಿರುವ ಚುನಾವಣಾ ಆಯೋಗವು ಈ ಬಾರಿ ಕೆಲಸದ ದಿನದಂದೇ ಮತದಾನದ ದಿನಾಂಕವನ್ನು ನಿಗದಿಪಡಿಸಿದೆ. ಇದು ಜನತಂತ್ರ ಹಬ್ಬದಂದು ಹೆಚ್ಚು ಜನರು ಮತ ಚಲಾಯಿಸುವಂತಾಗಬೇಕು ಎಂಬುದು ಚುನಾವಣಾ ಆಯೋಗದ ಕಳಕಳಿಯಾಗಿದೆ.

ಭಾರತ ಚುನಾವಣಾ ಆಯೋಗವು 18 ನೇ ಸಾರ್ವತ್ರಿಕ ಲೋಕಸಭಾ ಚುನಾವಣೆಯನ್ನು "ಚುನಾವಣಾ ಪರ್ವ–ದೇಶದ ಗರ್ವ" ಎಂಬ ಘೋಷವಾಕ್ಯದೊಂದಿಗೆ ನಡೆಸಲು ಉದ್ದೇಶಿಸಿದೆ. ಮತದಾದರರು ಮತದಾನದ ದಿನ ಪ್ರವಾಸಕ್ಕೆ ಹೋಗದೇ ಅಥವಾ ಮನೆಯಲ್ಲೇ ಆರಾಮ ಮಾಡುತ್ತಾ ಕೂರುವ ಬದಲು ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಲುವಾಗಿ ಮತದಾನದ ಹಕ್ಕನ್ನು ಚಲಾಯಿಸಬೇಕು. ಚುನಾವಣೆಗೆ ನಿಂತಿರುವವರಲ್ಲಿ ಯಾರೂ ಯೋಗ್ಯರಲ್ಲ ಎಂದು ಎನಿಸಿದಲ್ಲಿ, ಮತಗಟ್ಟೆಗೆ ಹೋಗಿ ನೋಟಾಗಾದರೂ ಮತ ಚಲಾಯಿಸಬೇಕು.

ಭಾರತವು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂದೆನಿಸಿರುವುದರಿಂದ ಈ ಚುನಾವಣೆಯನ್ನು ಇಡೀ ವಿಶ್ವವೇ ಕೂತೂಹಲದಿಂದ ನೋಡುತ್ತಿದೆ. ಚುನಾವಣೆಯಲ್ಲಿ ಭಾಗವಹಿಸುವುದಕ್ಕಿಂತ ಮಹತ್ವದ ಕೆಲಸ ಯಾವುದೂ ಇಲ್ಲ. ಹಾಗಾಗಿ ಪ್ರತಿಯೊಬ್ಬ ಮತದಾರರು ದೇಶದ ಭವಿಷ್ಯ ನಿರ್ಧರಿಸುವ ಈ ಪ್ರಜಾಪ್ರಭುತ್ವ ಹಬ್ಬದಲ್ಲಿ ಪಾಲ್ಗೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಚುನಾವಣಾ ನೀತಿ ಸಂಹಿತಿ ಇರುವ ಹಿನ್ನೆಲೆಯಲ್ಲಿ ಏಪ್ರಿಲ್‌ನ ವಾರ್ತಾ ಜನಪದ ಸಂಚಿಕೆಯಲ್ಲಿ ಚುನಾವಣೆಗೆ ಸಂಬಂಧಿಸಿದ, ನೀರಿನ ಉಳಿತಾಯದ ಅರಿವು, ಆರೋಗ್ಯ, ಪ್ರವಾಸ ಇವೇ ಮುಂತಾದ ವಿಷಯಗಳ ಮೇಲೆ ಲೇಖನಗಳನ್ನು ಪ್ರಕಟಿಸಲಾಗಿದೆ.

ಚೈತ್ರ ಮಾಸದಲ್ಲಿ ಪ್ರಕೃತಿಯು ಹೊಸತವನ್ನು ಪಡೆದು ಹಸಿರಿನಿಂದ ಕಂಗೊಳಿಸುತ್ತಾ ಯುಗಾದಿ ಹಬ್ಬವನ್ನು ಬರಮಾಡಿಕೊಳ್ಳುತ್ತಿದೆ. ಓದುಗರೆಲ್ಲರಿಗೂ ಯುಗಾದಿ ಹಬ್ಬವು ಸಂತೋಷ, ಸಮೃದ್ಧಿ ಮತ್ತು ನೆಮ್ಮದಿಯನ್ನು ನೀಡಲಿ ಎಂದು ಶುಭ ಕೋರುತ್ತೇನೆ.

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com




# ಆರಂಭಗೊಂಡ ಸಾರ್ವತ್ರಿಕ ಲೋಕಸಭಾ ಚುನಾವಣಾ ಪರ್ವ

**ಸಾರ್ವತ್ರಿಕ ಲೋಕಸಭಾ ಚುನಾವಣೆ-2024 ರ ವೇಳಾಪಟ್ಟಿಯು ಪ್ರಕಟವಾಗಿರುವುದರಿಂದ ರಾಜ್ಯದಲ್ಲಿ ಚುನಾವಣಾ ಪ್ರಕ್ರಿಯೆಗಳು ಆರಂಭಗೊಂಡಿದೆ.**

ಜಡಿಯಪ್ಪ ಗೆದ್ಲಗಟ್ಟಿ

ಸಾವಿರಾರು ವರ್ಷಗಳ ಕಾಲ ರಾಜ ಮಹಾರಾಜರ ಆಳ್ವಿಕೆ ಕಂಡ ಭಾರತ ದೇಶವನ್ನು ಬ್ರಿಟಿಷರು 300 ವರ್ಷಗಳ ಕಾಲ ಆಳಿದರು. 1947 ರಲ್ಲಿ ಭಾರತ ಬ್ರಿಟಿಷರಿಂದ ಸ್ವತಂತ್ರಗೊಂಡಾಗ 500 ಕ್ಕೂ ರಾಜಮನೆತನಗಳು ಪ್ರಜಾಪ್ರಭುತ್ವದ ಆಳ್ವಿಕೆಗೆ ಒಳಪಟ್ಟವು. ಭಾರತ ಸಂವಿಧಾನದ ಅಡಿಯಲ್ಲಿ 1950 ರಲ್ಲಿ ಭಾರತ ಚುನಾವಣಾ ಆಯೋಗ ಸ್ವಾಯತ್ತ ಸಂಸ್ಥೆಯಾಗಿ ಜಾರಿಗೆ ಬಂದ ನಂತರ ದೇಶದಲ್ಲಿ ಮೊದಲ ಬಾರಿಗೆ 489 ಲೋಕಸಭಾ ಸ್ಥಾನಗಳಿಗೆ 1951 ರ ಅಕ್ಟೋಬರ್ 25 ರಿಂದ 21 ಫೆಬ್ರವರಿ 1952 ರ ತನಕ ಒಟ್ಟು ನಾಲ್ಕು ತಿಂಗಳುಗಳ ಕಾಲ ನಡೆದ ಮೊದಲ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಒಟ್ಟು 17, 32, 12, 343 ಮತದಾರರು ನೋಂದಣಿ ಮಾಡಿಕೊಂಡಿದ್ದರು. ಪ್ರಜಾಪ್ರಭುತ್ವದ ಅಡಿಯಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಶೇ 44.87% ಮತದಾನ ಆಗಿತ್ತು.

ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶ ಎಂಬ ಮನ್ನಣೆಗೆ ಪಾತ್ರವಾಗಿರುವ ಭಾರತದ ಬೆನ್ನೆಲೆಬು ಭಾರತ ಚುನಾವಣಾ ಆಯೋಗ ಎಂದರೆ ಅತಿಶಯೋಕ್ತಿಯಾಗಲಾರದು. ಪ್ರಸ್ತುತ 75ನೇ ವರ್ಷಕ್ಕೆ ಕಾಲಿಟ್ಟಿರುವ ಭಾರತ ಚುನಾವಣಾ ಆಯೋಗ ದೇಶದಲ್ಲಿ ಈವರೆಗೆ 17 ಸಾರ್ವತ್ರಿಕ ಲೋಕಸಭಾ ಚುನಾವಣೆಗಳನ್ನು, 400ಕ್ಕೂ ಹೆಚ್ಚು ವಿಧಾನಸಭಾ ಚುನಾವಣೆಗಳು, 16 ರಾಷ್ಟ್ರಪತಿಗಳ ಹಾಗೂ 16 ಉಪ ರಾಷ್ಟ್ರಪತಿಗಳ ಚುನಾವಣೆಯನ್ನು ಶಾಂತಿಯುತವಾಗಿ ನಡೆಸುವ ಮೂಲಕ ಜಗತ್ತಿನ ಅತ್ಯಂತ ಪ್ರಬಲ ಪ್ರಜಾಪ್ರಭುತ್ವ ದೇಶದ ಮಾದರಿ ಸ್ವಾಯತ್ತ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.



Downloaded From:www.kpscvaani.com

# ಚುನಾವಣಾ ಪರ್ವ
# ದೇಶದ ಗರ್ವ
**ಲೋಕಸಭಾ ಚುನಾವಣೆ 2024**



ಪ್ರಸ್ತುತ ದೇಶದಲ್ಲಿ ನಡೆಯುತ್ತಿರುವುದು 18ನೇ ಸಾರ್ವತ್ರಿಕ ಲೋಕಸಭಾ ಚುನಾವಣೆಯಾಗಿದ್ದು, ಈಗ ದೇಶದಲ್ಲಿ 97 ಕೋಟಿ ನೋಂದಾಯಿತ ಮತದಾರರಿದ್ದಾರೆ. ಈ ಚುನಾವಣೆಯಲ್ಲಿ ದೇಶದಲ್ಲಿ ಒಟ್ಟು 10.5 ಲಕ್ಷ ಮತಗಟ್ಟೆಗಳನ್ನು ತೆರೆಯಲಾಗಿದ್ದು, ಚುನಾವಣೆಗಾಗಿ 1.5 ಕೋಟಿ ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸಲಿದ್ದಾರೆ. ಅದರಲ್ಲೂ 55 ಲಕ್ಷ ಮತ ಯಂತ್ರಗಳು ಹಾಗೂ 4 ಲಕ್ಷಕ್ಕೂ ಹೆಚ್ಚು ವಾಹನಗಳನ್ನು ಚುನಾವಣಾ ಕಾರ್ಯಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ.

ಪ್ರಸ್ತುತ ಚುನಾವಣೆಗಾಗಿ ದೇಶದಲ್ಲಿ ನೋಂದಾಯಿಸಿಕೊಂಡಿರುವ ಒಟ್ಟು 96.8 ಕೋಟಿ ಮತದಾರರಲ್ಲಿ 49.7 ಕೋಟಿ ಪುರುಷ ಹಾಗೂ 47.1 ಕೋಟಿ ಮಹಿಳಾ ಮತದಾರರಿದ್ದಾರೆ. ಇದರಲ್ಲಿ ಮುಖ್ಯವಾಗಿ 18 ರಿಂದ 19 ವರ್ಷದೊಳಗಿನ ಮೊದಲ ಬಾರಿ ಮತದಾನ ಮಾಡುತ್ತಿರುವ 1.8 ಕೋಟಿ ಮತದಾರರಿದ್ದು, 20 ರಿಂದ 29 ವಯಸ್ಸಿನ 19.74 ಕೋಟಿ ಯುವ ಮತದಾರರು, 85 ವರ್ಷ ಮೇಲ್ಪಟ್ಟ 82 ಲಕ್ಷ ಮತದಾರರು ಇದ್ದು, ಇದರಲ್ಲಿ ಮತಗಟ್ಟೆಗೆ ಹೋಗಲಾರದವರು ಹಾಗೂ ಅವಶ್ಯಕತೆ ಇದ್ದವರು ಮನೆಯಿಂದಲೇ ಮತ ಚಲಾಯಿಸುವ ಅವಕಾಶ ಪಡೆಯಲಿದ್ದಾರೆ. 48,000 ತೃತೀಯ ಲಿಂಗಿಗಳು ಮತದಾರರಾಗಿ ನೋಂದಾಯಿಸಿಕೊಂಡಿದ್ದು, 88.4 ಲಕ್ಷ ದಿವ್ಯಾಂಗ ಮತದಾರರು, 19.1 ಲಕ್ಷ ಸೇವಾ ಮತದಾರರು, 2.18 ಲಕ್ಷ ಶತಾಯುಷಿಗಳು ಮತ ಚಲಾಯಿಸಲಿದ್ದಾರೆ.

"ಚುನಾವಣಾ ಪರ್ವ–ದೇಶದ ಗರ್ವ" ಎಂಬ ಘೋಷವಾಕ್ಯದಡಿಯಲ್ಲಿ 18ನೇ ಸಾರ್ವತ್ರಿಕ ಲೋಕಸಭಾ ಚುನಾವಣೆಯನ್ನು ನಡೆಸಲು ವೇಳಾಪಟ್ಟಿಯನ್ನು ಭಾರತ ಚುನಾವಣಾ ಆಯೋಗವು 2024 ರ ಮಾರ್ಚ್ 16 ರಂದು ಪ್ರಕಟಿಸಿದ್ದು 544 ಸ್ಥಾನಗಳಿಗೆ ಒಟ್ಟು ಏಳು ಹಂತಗಳಲ್ಲಿ ಮತದಾನ ನಡೆಯಲಿದ್ದು ಏಪ್ರಿಲ್ 19 ಮತ್ತು 26, ಮೇ 07, 13, 20 ಮತ್ತು 25 ಹಾಗೂ ಜೂನ್ 1 ಸೇರಿದಂತೆ ನಡೆದ ಮತದಾನದ ನಂತರ ಜೂನ್ 4 ರಂದು ಏಕ ಕಾಲದಲ್ಲಿ ದೇಶದ್ಯಾಂತ ಮತ ಎಣಿಕೆ ನಡೆಯಲಿದ್ದು ಜೂನ್ 6, 2024 ರಂದು ಮಾದರಿ ನೀತಿ ಸಂಹಿತೆ ಮುಕ್ತಾಯವಾಗಲಿದೆ. ಕರ್ನಾಟಕ ರಾಜ್ಯದ 28 ಲೋಕಸಭಾ ಕ್ಷೇತ್ರಗಳಿಗೆ ಒಟ್ಟು ಎರಡು ಹಂತದಲ್ಲಿ ಏಪ್ರಿಲ್ 26 ಮತ್ತು ಮೇ 7 ರಂದು ಮತದಾನ ನಡೆಯಲಿದ್ದು, ಜೂನ್ ನಾಲ್ಕರಂದು ಮತ ಎಣಿಕೆ ನಡೆಯಲಿದೆ.

ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ 5,42,54,500 ಮತದಾರರಿದ್ದು, ಅದರಲ್ಲಿ 2,71,66,220 ಪುರುಷರು ಹಾಗೂ 2,70,83,347 ಮಹಿಳೆಯರು ಹಾಗೂ 4,933 ತೃತೀಯ ಲಿಂಗಿ ಮತದಾರರು ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ ಸಾಗರೋತ್ತರ (ಎನ್‌ಆರ್‌ಐ) 3,200, ಯುವ ಮತದಾರರು (18 ರಿಂದ 19 ವಯಸ್ಸಿನ) 11,24,622, 85 ವರ್ಷ ಮೇಲ್ಪಟ್ಟ ಮತದಾರರು 5,70,168, ದಿವ್ಯಾಂಗ ಮತದಾರರು 6,12,154, ಬುಡಕಟ್ಟು ಜನಾಂಗದ 38,794 ಮತದಾರರಿದ್ದಾರೆ.

ರಾಜ್ಯದ ಅತಿ ಹೆಚ್ಚು ಮತದಾರರು ಇರುವ ಲೋಕಸಭಾ ಕ್ಷೇತ್ರ ಬೆಂಗಳೂರು ಉತ್ತರ 31,74,098, ಅತಿ ಕಡಿಮೆ ಮತದಾರರು ಇರುವ ಲೋಕಸಭಾ ಕ್ಷೇತ್ರ ಉಡುಪಿ–ಚಿಕ್ಕಮಗಳೂರು 15,72,958 ಆಗಿದ್ದು, ಅದೇ ರೀತಿಯಲ್ಲಿ ಅತಿ ಹೆಚ್ಚು ಮತದಾರರು ಇರುವ ವಿಧಾನಸಭಾ ಕ್ಷೇತ್ರ ಬೆಂಗಳೂರು ದಕ್ಷಿಣ 7,33,313, ಅತಿ ಕಡಿಮೆ ಮತದಾರರು ಇರುವ ವಿಧಾನಸಭಾ ಕ್ಷೇತ್ರ ಶೃಂಗೇರಿ 1,68,084

**ಮತದಾನ ಮಾಡುವಾಗ ಮತಗಟ್ಟೆಯಲ್ಲಿ ತೋರಿಸಬಹುದಾದ ದಾಖಲೆಗಳು:**

- ಆಧಾರ್ ಕಾರ್ಡ್
- MGNREGA ಜಾಬ್ ಕಾರ್ಡ್
- ಬ್ಯಾಂಕ್/ಪೋಸ್ಟ್ ಆಫೀಸ್ ನೀಡಿದ ಭಾವಚಿತ್ರವಿರುವ ಪಾಸ್‌ಬುಕ್‌ಗಳು
- ಕಾರ್ಮಿಕ ಸಚಿವಾಲಯ ವಿವಿಧ ಯೋಜನೆಯಡಿ ನೀಡಲಾದ ಆರೋಗ್ಯ ವಿಮಾ ಸ್ಮಾರ್ಟ್ ಕಾರ್ಡ್
- ಡ್ರೈವಿಂಗ್ ಲೈಸೆನ್ಸ್
- ಪ್ಯಾನ್ ಕಾರ್ಡ್
- NPR ಅಡಿಯಲ್ಲಿ RGI ನೀಡಿದ ಸ್ಮಾರ್ಟ್ ಕಾರ್ಡ್
- ಭಾರತೀಯ ಪಾಸ್ ಪೋರ್ಟ್
- ಭಾವಚಿತ್ರದೊಂದಿಗಿರುವ ಪಿಂಚಣಿ ದಾಖಲೆ
- ಕೇಂದ್ರ/ರಾಜ್ಯ ಸರ್ಕಾರ/ಕಬಗಳು/ಪಬ್ಲಿಕ್ ಲಿಮಿಟೆಡ್ ಕಂಪನಿಗಳು
- ಉದ್ಯೋಗಿಗಳಿಗೆ ನೀಡಿದ ಭಾವಚಿತ್ರ ಹೊಂದಿರುವ ಸೇವಾ ಗುರುತಿನ ಚೀಟಿಗಳು
- ಎಂಪಿಗಳು/ಎಂಎಲ್‌ಎಗಳು/ಎಂಎಲ್‌ಸಿಗಳಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿಗಳು
- ವಿಶಿಷ್ಟ ಅಂಗವೈಕಲ್ಯ ID (UDID) ಕಾರ್ಡ್



Downloaded From:www.kpscvaani.com




ಆಗಿದ್ದು, ರಾಜ್ಯದಲ್ಲಿ ಲಿಂಗಾನುಪಾತ 999 ರಷ್ಟು ಇರುವುದು ಅತ್ಯಂತ ಹರ್ಷದಾಯಕ ವಿಷಯವಾಗಿದೆ.

ರಾಜ್ಯದಲ್ಲಿ ಒಟ್ಟು ಮತಗಟ್ಟೆಗಳು 58,834 ಇದ್ದು, ಇದರಲ್ಲಿ ನಗರ ಪ್ರದೇಶದಲ್ಲಿ 21,595, ಗ್ರಾಮೀಣ ಪ್ರದೇಶದಲ್ಲಿ 37,239 ಮತಗಟ್ಟೆಗಳಿವೆ. ಅತ್ಯಂತ ಹೆಚ್ಚು ಮತಗಟ್ಟೆಗಳು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ 2911 ಮತಗಟ್ಟೆಗಳು ಹಾಗೂ ಅತ್ಯಂತ ಕಡಿಮೆ ಮತಗಟ್ಟೆಗಳು ಇರುವ ಲೋಕಸಭಾ ಕ್ಷೇತ್ರ ಉಡುಪಿ-ಚಿಕ್ಕಮಗಳೂರು ಆಗಿದ್ದು, ಇಲ್ಲಿ ಒಟ್ಟು 1842 ಮತಗಟ್ಟೆಗಳು ಇವೆ. ರಾಜ್ಯದಲ್ಲಿ ಒಟ್ಟು 3 ಲಕ್ಷಕ್ಕೂ ಅಧಿಕ ಮತದಾನ ಸಿಬ್ಬಂದಿಗಳು ಚುನಾವಣೆಗಾಗಿ ಕಾರ್ಯನಿರ್ವಹಿಸಲಿದ್ದಾರೆ.

**ಆಯೋಗದ ವತಿಯಿಂದ ಮತದಾರರ ಸಹಾಯಕ್ಕಾಗಿ ಹಲವು ಆ್ಯಪ್‌ಗಳು:**

ಇಂದಿನ ವೇಗದ ಡಿಜಿಟಲ್ ಯುಗದಲ್ಲಿ, ಮೊಬೈಲ್ ಅಪ್ಲಿಕೇಶನ್‌ಗಳು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದೆ. ಈ ಅಪ್ಲಿಕೇಶನ್‌ಗಳು ಚುನಾವಣಾ ಪ್ರಕ್ರಿಯೆಯಿಂದ ಹಿಡಿದು ವ್ಯಾಪಕ ಶ್ರೇಣಿಯ ಅಗತ್ಯಗಳನ್ನು ಪೂರೈಸುತ್ತವೆ. ಭಾರತ ಚುನಾವಣಾ ಆಯೋಗ ಅಭಿವೃದ್ಧಿ ಪಡಿಸಿರುವ ಹಲವಾರು ಮತದಾರರ ಸ್ನೇಹಿ ಆ್ಯಪ್‌ಗಳು ಇಂದು ಜನಮನ್ನಣೆಗಳಿಸಿವೆ. ಅದರಲ್ಲಿ ಮುಖ್ಯವಾಗಿ ಈ ಕೆಳಗಿನ ಆ್ಯಪ್‌ಗಳು ಮುಖ್ಯವಾದವುಗಳು:

**1950 ಸಹಾಯವಾಣಿ:**

ಚುನಾವಣೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಪಡೆಯಲು ಅಥವಾ ದೂರು ಸಲ್ಲಿಸಲು ಭಾರತ ಚುನಾವಣಾ ಆಯೋಗದ ಈ ಉಚಿತ ಸಹಾಯವಾಣಿ ಹಲವಾರು ವೈಶಿಷ್ಟತೆಯಿಂದ ಕೂಡಿದೆ. ದೃಷ್ಟಿ ದೋಷವುಳ್ಳವರಿಗಾಗಿ ವೀಡಿಯೊ ಕರೆ ಸೌಲಭ್ಯದ ಮೂಲಕ ಸಂಕೇತ ಭಾಷಾವ್ಯಾಖ್ಯಾನಕಾರರ ಸೇವೆಯನ್ನು ಸಹ ಪಡೆಯಬಹುದಾಗಿದೆ. ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದ ಸಂಪರ್ಕ ಕೇಂದ್ರಗಳಲ್ಲಿ 31 ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು ರಾಜ್ಯ ಮಟ್ಟದ ಸಂಪರ್ಕ ಕೇಂದ್ರದಲ್ಲಿ 04 ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

**ವೋಟರ್ ಹೆಲ್ಪ್ ಲೈನ್ ಆ್ಯಪ್:**

ಮತದಾರರ ಸಹಾಯವಾಣಿ ಅಪ್ಲಿಕೇಶನ್ ನಾಗರಿಕರಿಂದ ಗಮನಾರ್ಹ ಪ್ರತಿಕ್ರಿಯೆ ಮತ್ತು ಜನಪ್ರಿಯತೆಗೆ ಸಾಕ್ಷಿಯಾಗಿದೆ. ಚುನಾವಣಾ ಆಯೋಗದ ಈ ಅಪ್ಲಿಕೇಶನ್ ಹೊಸ ಮತದಾರರ ನೋಂದಣಿ, ಮತದಾರರ ಪಟ್ಟಿಯಲ್ಲಿನ ತಿದ್ದುಪಡಿ, ಮತದಾರರ ಪಟ್ಟಿಯಲ್ಲಿ ಹೆಸರುಗಳ ಹುಡುಕಾಟ ಮತ್ತು ಇತರ ಚುನಾವಣಾ ಸಂಬಂಧಿತ ಸೇವೆಗಳಿಂದ ಕೂಡಿದೆ.

**ಸಿ ವಿಜಿಲ್ ಆ್ಯಪ್:**

"cVIGIL" ಎಂಬುದು ಚುನಾವಣಾ ಸಮಯದಲ್ಲಿ ಮಾದರಿ ನೀತಿ ಸಂಹಿತೆಯ






Downloaded From:www.kpscvaani.com

(MCC) ಉಲ್ಲಂಘನೆಗಳನ್ನು ವರದಿ ಮಾಡಲು ನಾಗರಿಕರನ್ನು ಸಕ್ರಿಯಗೊಳಿಸಲು ಚುನಾವಣಾ ಆಯೋಗ (ECI) ಅಭಿವೃದ್ಧಿಪಡಿಸಿದೆ. ಸಾರ್ವಜನಿಕರು ಕಾನೂನು ಉಲ್ಲಂಘನೆ ಘಟನೆಗಳನ್ನು ಕಂಡಾಗ ಉಲ್ಲಂಘನೆಯ ಪ್ರಕಾರವನ್ನು ಆಯ್ಕೆ ಮಾಡಿ ಮತ್ತು ಸ್ಥಳ, ಸಮಯ ಮತ್ತು ಛಾಯಾಚಿತ್ರಗಳು ಅಥವಾ ವೀಡಿಯೊಗಳನ್ನು ಒಳಗೊಂಡಂತೆ ಘಟನೆಯ ವಿವರಗಳನ್ನು ತಮ್ಮ ಐಡೆಂಟಿಟಿಯನ್ನು ತೋರಿಸಿಕೊಳ್ಳದೆ ಆಯೋಗಕ್ಕೆ ದೂರು ನೀಡಬಹುದಾಗಿದೆ.

ಮಾದರಿ ನೀತಿ ಸಂಹಿತೆಯ (MCC) ಉಲ್ಲಂಘನೆಯನ್ನು ನೀವು ನೋಡಿದರೆ, ಅದನ್ನು ವರದಿ ಮಾಡಲು ನೀವು cVIGIL ಅಪ್ಲಿಕೇಶನ್ ಅನ್ನು ಬಳಸಬಹುದು. ಚುನಾವಣೆಗಳು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಅಪ್ಲಿಕೇಶನ್ ಒಂದು ಅಮೂಲ್ಯ ಸಾಧನವಾಗಿದೆ.

**ಸುವಿಧಾ ಆ್ಯಪ್:**

ಸುವಿಧಾ ಆ್ಯಪ್ (Suvidha App) ಎಂಬುದು ಚುನಾವಣಾ ಅವಧಿಯಲ್ಲಿ ಅಭ್ಯರ್ಥಿಗಳಿಗೆ ನಾಮನಿರ್ದೇಶನ ಮತ್ತು ಅನುಮತಿ ಪ್ರಕ್ರಿಯೆಗೆ ಸಹಾಯ ಮಾಡಲು ಆಯೋಗವು ಅಭಿವೃದ್ಧಿಪಡಿಸಿದ ಮೊಬೈಲ್ ಅಪ್ಲಿಕೇಶನ್ ಆಗಿದೆ. ಇದರಲ್ಲಿ ಮುಖ್ಯವಾಗಿ ಅಭ್ಯರ್ಥಿಗಳು ತಮ್ಮ ಪ್ರಚಾರಕ್ಕಾಗಿ ಅಗತ್ಯವಿರುವ ಅನುಮತಿ ಕೋರಿ ಅರ್ಜಿ ಸಲ್ಲಿಸಬಹುದು, ಅರ್ಜಿಯ ಸ್ಥಿತಿಯನ್ನು ಟ್ರ್ಯಾಕ್ ಮಾಡಬಹುದು, ಅನುಮತಿ ಫಾರ್ಮ್ ಅನ್ನು ಡೌನ್‌ಲೋಡ್ ಮಾಡುವ ಮತ್ತು ಅದನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ ಸಾಮರ್ಥ್ಯ ಹೊಂದಿದೆ.

### ಚುನಾವಣಾ ಹಂತಗಳು – 2024

| ಹಂತಗಳು | ಲೋಕಸಭಾ ಕ್ಷೇತ್ರಗಳ ಸಂಖ್ಯೆ | ರಾಜ್ಯಗಳ ಸಂಖ್ಯೆ | ಚುನಾವಣಾ ದಿನಾಂಕ |
|---|---|---|---|
| 1 ನೇ ಹಂತ | 102 | 21 | 19–04–2024 |
| 2 ನೇ ಹಂತ | 89 | 13 | 26–04–2024 |
| 3 ನೇ ಹಂತ | 94 | 12 | 07–05–2024 |
| 4 ನೇ ಹಂತ | 96 | 10 | 13–05–2024 |
| 5 ನೇ ಹಂತ | 49 | 08 | 20–05–2024 |
| 6 ನೇ ಹಂತ | 57 | 07 | 25–05–2024 |
| 7 ನೇ ಹಂತ | 57 | 08 | 01–06–2024 |

| ಕ್ರ.ಸಂ. | ವೇಳಾಪಟ್ಟಿ | ಹಂತ – 1 | ಹಂತ –2 |
|---|---|---|---|
| 1. | ಪ್ರಕಟಣೆ ದಿನಾಂಕ | 16 ಮಾರ್ಚ್ 2024 (ಶನಿವಾರ) | 16 ಮಾರ್ಚ್ 2024 (ಶನಿವಾರ) |
| 2. | ಅಧಿಸೂಚನೆಯನ್ನು ಹೊರಡಿಸಿದ ದಿನಾಂಕ | 28 ಮಾರ್ಚ್ 2024 (ಗುರುವಾರ) | 12 ಏಪ್ರಿಲ್ 2024 (ಶುಕ್ರವಾರ) |
| 3. | ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ | 04 ಏಪ್ರಿಲ್ 2024 (ಗುರುವಾರ) | 19 ಏಪ್ರಿಲ್ 2024 (ಶುಕ್ರವಾರ) |
| 4. | ನಾಮಪತ್ರ ಪರಿಶೀಲನೆ | 05 ಏಪ್ರಿಲ್ 2024 (ಶುಕ್ರವಾರ) | 20 ಏಪ್ರಿಲ್ 2024 (ಶನಿವಾರ) |
| 5. | ನಾಮಪತ್ರ ಹಿಂಪಡೆಯಲು ಕೊನೆ | 08 ಏಪ್ರಿಲ್ 2024 (ಸೋಮವಾರ) | 22 ಏಪ್ರಿಲ್ 2024 (ಸೋಮವಾರ) |
| 6. | ಮತದಾನದ ದಿನಾಂಕ | 26 ಏಪ್ರಿಲ್ 2024 (ಶುಕ್ರವಾರ) | 07 ಮೇ 2024 (ಮಂಗಳವಾರ) |
| 7. | ಮತ ಎಣಿಕೆ ದಿನಾಂಕ | 04 ಜೂನ್ 2024 | 04 ಜೂನ್ 2024 |
| 8. | ಚುನಾವಣಾ ನೀತಿ ಸಂಹಿತೆ ಕೊನೆಗೊಳ್ಳುವ ದಿನಾಂಕ | 06 ಜೂನ್ 2024 (ಗುರುವಾರ) | 06 ಜೂನ್ 2024 (ಗುರುವಾರ) |

### ನೋಂದಾಯಿತ ಮತದಾರರು

| | ದೇಶ | ಕರ್ನಾಟಕ |
|---|---|---|
| ಒಟ್ಟು ಮತದಾರರು | 96.88 ಕೋಟಿ | 5.42 ಕೋಟಿ |
| ಮಹಿಳೆಯರು | 47.15 ಕೋಟಿ | 2.70 ಕೋಟಿ |
| ಪುರುಷರು | 49.70 ಕೋಟಿ | 2.71 ಕೋಟಿ |
| ಯುವ ಮತದಾರರು | 19.74 ಕೋಟಿ | 11.24 ಲಕ್ಷ |
| ಮತಗಟ್ಟೆಗಳು | 10.50 ಲಕ್ಷ | 58,834 |





Downloaded From:www.kpscvaani.com

**ಏಪ್ರಿಲ್ 26 ರಂದು ನಡೆಯುವ ಕರ್ನಾಟಕ ರಾಜ್ಯದ ಹಂತ-1 ರ ಲೋಕಸಭಾ ಕ್ಷೇತ್ರಗಳು**

| ಕ್ರ.ಸಂ. | ಲೋ.ಸ.ಕ್ಷೇ.ಸಂ. | ಲೋಕಸಭಾ ಕ್ಷೇತ್ರದ ಹೆಸರು | ವಿಧ |
|---|---|---|---|
| 1. | 15 | ಉಡುಪಿ-ಚಿಕ್ಕಮಗಳೂರು | ಸಾಮಾನ್ಯ |
| 2. | 16 | ಹಾಸನ | ಸಾಮಾನ್ಯ |
| 3. | 17 | ದಕ್ಷಿಣ ಕನ್ನಡ | ಸಾಮಾನ್ಯ |
| 4. | 18 | ಚಿತ್ರದುರ್ಗ | ಎಸ್.ಸಿ. |
| 5. | 19 | ತುಮಕೂರು | ಸಾಮಾನ್ಯ |
| 6. | 20 | ಮಂಡ್ಯ | ಸಾಮಾನ್ಯ |
| 7. | 21 | ಮೈಸೂರು | ಸಾಮಾನ್ಯ |
| 8. | 22 | ಚಾಮರಾಜನಗರ | ಎಸ್.ಸಿ. |
| 9. | 23 | ಬೆಂಗಳೂರು ಗ್ರಾಮಾಂತರ | ಸಾಮಾನ್ಯ |
| 10. | 24 | ಬೆಂಗಳೂರು ಉತ್ತರ | ಸಾಮಾನ್ಯ |
| 11. | 25 | ಬೆಂಗಳೂರು ಕೇಂದ್ರ | ಸಾಮಾನ್ಯ |
| 12. | 26 | ಬೆಂಗಳೂರು ದಕ್ಷಿಣ | ಸಾಮಾನ್ಯ |
| 13. | 27 | ಚಿಕ್ಕಬಳ್ಳಾಪುರ | ಸಾಮಾನ್ಯ |
| 14. | 28 | ಕೋಲಾರ | ಎಸ್.ಸಿ. |

**ಮೇ 7 ರಂದು ನಡೆಯುವ ಕರ್ನಾಟಕ ರಾಜ್ಯದ ಹಂತ- 2 ರ ಲೋಕಸಭಾ ಕ್ಷೇತ್ರಗಳು**

| ಕ್ರ.ಸಂ. | ಲೋ.ಸ.ಕ್ಷೇ.ಸಂ. | ಲೋಕಸಭಾ ಕ್ಷೇತ್ರದ ಹೆಸರು | ವಿಧ |
|---|---|---|---|
| 1. | 1 | ಚಿಕ್ಕೋಡಿ | ಸಾಮಾನ್ಯ |
| 2. | 2 | ಬೆಳಗಾವಿ | ಸಾಮಾನ್ಯ |
| 3. | 3 | ಬಾಗಲಕೋಟೆ | ಸಾಮಾನ್ಯ |
| 4. | 4 | ವಿಜಯಪುರ | ಎಸ್.ಸಿ. |
| 5. | 5 | ಕಲಬುರಗಿ | ಎಸ್.ಸಿ. |
| 6. | 6 | ರಾಯಚೂರು | ಎಸ್.ಟಿ. |
| 7. | 7 | ಬೀದರ್ | ಸಾಮಾನ್ಯ |
| 8. | 8 | ಕೊಪ್ಪಳ | ಸಾಮಾನ್ಯ |
| 9. | 9 | ಬಳ್ಳಾರಿ | ಎಸ್.ಟಿ. |
| 10. | 10 | ಹಾವೇರಿ | ಸಾಮಾನ್ಯ |
| 11. | 11 | ಧಾರವಾಡ | ಸಾಮಾನ್ಯ |
| 12. | 12 | ಉತ್ತರ ಕನ್ನಡ | ಸಾಮಾನ್ಯ |
| 13. | 13 | ದಾವಣಗೆರೆ | ಸಾಮಾನ್ಯ |
| 14. | 14 | ಶಿವಮೊಗ್ಗ | ಸಾಮಾನ್ಯ |

**ದಿವ್ಯಾಂಗರಿಗಾಗಿ ಸಕ್ಷಮ್ ಆ್ಯಪ್:**

ಚುನಾವಣಾ ಆಯೋಗವು ದಿವ್ಯಾಂಗರಿಗೆ (PwDs)) ಕಸ್ಟಮೈಸ್ ಮಾಡಿದ ಸೇವೆಗಳನ್ನು ನೀಡುವ ಮೂಲಕ ಮತದಾರರ ಗುರುತಿಸುವಿಕೆ ಮತ್ತು ನೋಂದಣಿ ಪ್ರಕ್ರಿಯೆಯನ್ನು ಸರಾಗಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತದೆ.

ಸಕ್ಷಮ್ ಆ್ಯಪ್ (Saksham App) ದಿವ್ಯಾಂಗರಿಗೆ (PwDs) ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅಮೂಲ್ಯವಾದ ಸಾಧನವಾಗಿದೆ ಅಪ್ಲಿಕೇಷನ್ ಬಳಸಲು ಸುಲಭವಾಗಿದೆ ಮತ್ತು ದಿವ್ಯಾಂಗರಿಗೆ(PwDs) ಮತ ಚಲಾಯಿಸಲು ನೋಂದಾಯಿಸಲು, ಅವರ ಮತಗಟ್ಟೆಯನ್ನು ಹುಡುಕಲು ಮತ್ತು ಮತ ಚಲಾಯಿಸಲು ಸುಲಭವಾಗುವಂತೆ ಹಲವಾರು ವೈಶಿಷ್ಟಗಳನ್ನು ಒದಗಿಸುತ್ತದೆ.

**ನಿಮ್ಮ ಅಭ್ಯರ್ಥಿಯನ್ನು ತಿಳಿಯಿರಿ ಆ್ಯಪ್:**

"ನಿಮ್ಮ ಅಭ್ಯರ್ಥಿಯನ್ನು ತಿಳಿಯಿರಿ (Know Your Candidate App)"ಎಂಬ ಮೊಬೈಲ್ ಅಪ್ಲಿಕೇಶನ್ ಅನ್ನು ಆಯೋಗ ಅಭಿವೃದ್ಧಿಪಡಿಸಿದೆ. ಇದು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಅಪರಾಧದ ಪೂರ್ವಾಪರಗಳ ಬಗ್ಗೆ ನಾಗರಿಕರಿಗೆ ತಿಳಿಯಲು ಸಹಾಯ ಮಾಡುತ್ತದೆ.

ಅಪ್ಲಿಕೇಶನ್ ನಂತರ ಅಭ್ಯರ್ಥಿಯ ಕ್ರಿಮಿನಲ್ ಪೂರ್ವಾಪರಗಳ ಬಗ್ಗೆ ಮಾಹಿತಿಯನ್ನು ಪ್ರದರ್ಶಿಸುತ್ತದೆ, ಯಾವುದಾದರೂ ಇದ್ದರೆ. ಈ ಮಾಹಿತಿಯು ಅಭ್ಯರ್ಥಿಯ ವಿರುದ್ಧ ದಾಖಲಾಗಿರುವ ಯಾವುದೇ ಕ್ರಿಮಿನಲ್






Downloaded From:www.kpscvaani.com


ಪ್ರಕರಣಗಳ ವಿವರಗಳು, ಆ ಪ್ರಕರಣಗಳ ಸ್ಥಿತಿ ಮತ್ತು ಅಪರಾಧಗಳ ಸ್ವರೂಪವನ್ನು ಒಳಗೊಂಡಿರುತ್ತದೆ.

**ವೋಟರ್ ಟರ್ನ್‌ಔಟ್ ಆ್ಯಪ್ (Voter Turnout App):**

ಮತದಾನದ ನಡೆಯುವ ಸಮಯದಲ್ಲಿ ಪ್ರತಿ ರಾಜ್ಯ, ಜಿಲ್ಲೆ ಮತ್ತು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂದಾಜು ಮತದಾನದ ಶೇಕಡಾವಾರು ಪ್ರಮಾಣವನ್ನು ಪ್ರದರ್ಶಿಸಲು ಆಂತರಿಕವಾಗಿ ಅಭಿವೃದ್ಧಿಪಡಿಸಿದ ಮೊಬೈಲ್ ಅಪ್ಲಿಕೇಶನ್ ಆಗಿದೆ. ಈ ಅಪ್ಲಿಕೇಶನ್ ಅಸೆಂಬ್ಲಿ, ಸಂಸದೀಯ ಮತ್ತು ಉಪಚುನಾವಣೆ ಅವಧಿಯಲ್ಲಿ ಮಾತ್ರ ಸಕ್ರಿಯವಾಗಿರುತ್ತದೆ.

ವೋಟರ್ ಟರ್ನ್‌ಔಟ್ ಆ್ಯಪ್ ವಿವಿಧ ಚುನಾವಣೆಗಳಿಗೆ ಮತದಾರರ ಮತದಾನವನ್ನು ಟ್ರ್ಯಾಕ್ ಮಾಡಲು ಮತದಾರರಿಗೆ ಮತ್ತು ಮಾಧ್ಯಮ ಸಂಸ್ಥೆಗಳಿಗೆ ಉಪಯುಕ್ತ ಸಾಧನವಾಗಿದೆ. ನಿರ್ದಿಷ್ಟ ಪ್ರದೇಶದಲ್ಲಿನ ಮತದಾನದ ಅಂದಾಜು ಪಡೆಯಲು ಇದು ತ್ವರಿತ ಮತ್ತು ಸುಲಭವಾದ ಮಾರ್ಗವಾಗಿದೆ.

ಲೋಕಸಭಾ ಚುನಾವಣೆ–2024 ರ ಅಂಗವಾಗಿ ರಾಜ್ಯದಲ್ಲಿ ಹಮ್ಮಿಕೊಳ್ಳಲಾದ ವ್ಯಾಪಕವಾದ SVEEP ಚಟುವಟಿಕೆಗಳ 11.18 ಲಕ್ಷ ಯುವ ಮತದಾರರನ್ನು ಸೇರ್ಪಡೆಗೊಳಿಸಲಾಗಿದೆ. ನಗರ ಮತದಾರರಿಗೆ ಕೇಂದ್ರೀಕೃತ SVEEP ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ನಗರ ಮತದಾನದ ಶೇಕಡಾವಾರು ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ರಾಜ್ಯದಲ್ಲಿ ಪ್ರಸ್ತುತ ಚುನಾವಣೆಗಾಗಿ ವಿಶೇಷ ಮತಗಟ್ಟೆ ಅಂದರೆ, 224 ಮತಗಟ್ಟೆಗಳನ್ನು




ದಿವ್ಯಾಂಗರು (PwD) ನಿರ್ವಹಿಸುತ್ತಾರೆ, 224 ಮತಗಟ್ಟೆಗಳನ್ನು ಯುವಕರು ನಿರ್ವಹಿಸುತ್ತಾರೆ. 40 ಸಾಂಪ್ರದಾಯಿಕ ಮತಗಟ್ಟೆಗಳು, 200 ವಿಷಯ ಆಧಾರಿತ ಮತಗಟ್ಟೆಗಳು ಮತ್ತು ಸಂಪೂರ್ಣವಾಗಿ ಮಹಿಳಾ ಸಿಬ್ಬಂದಿಗಳೇ ನಿರ್ವಹಿಸುವ 1,120 ಸಖಿ ಮತಗಟ್ಟೆಗಳು ಇರಲಿವೆ.

ಕರ್ನಾಟಕದ ಎಲ್ಲಾ ನಾಗರಿಕರನ್ನು ಮುಕ್ತ, ನ್ಯಾಯಸಮ್ಮತವಾಗಿ ಮತ್ತು ನೈತಿಕವಾಗಿ 2024ರ ಚುನಾವಣೆ ನಡೆಸಲು ಚುನಾವಣಾ ಆಯೋಗವು ವಿನಂತಿಸಿದೆ. ಹಾಗೆಯೇ ಎಲ್ಲಾ ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಪರಿಶೀಲಿಸಬೇಕು ಮತ್ತು VHA ಅಪ್ಲಿಕೇಶನ್ ಬಳಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಅಥವಾ https://voterportal.eci.gov.in/ ಅಥವಾ ಹತ್ತಿರದ ಮತಗಟ್ಟೆ ಅಥವಾ AERO ಕಚೇರಿಗೆ ಭೇಟಿ ನೀಡವಂತೆ ಕೋರಿದೆ.




ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ದೇಶ ಭಾರತದಲ್ಲಿ ಪ್ರಜಾಪ್ರಭುತ್ವದ ದೊಡ್ಡ ಹಬ್ಬಕ್ಕೆ ಮುಹೂರ್ತ ನಿಗದಿಯಾಗಿದೆ. ಭಾರತ ಚುನಾವಣಾ ಆಯೋಗ 18ನೇ ಲೋಕಸಭೆ ಮತ್ತು 4 ರಾಜ್ಯಗಳ ವಿಧಾನಸಭೆಗೆ ದಿನಾಂಕ: 16–03–2024 ರ ಶನಿವಾರದಂದು ವೇಳಾಪಟ್ಟಿ ಪ್ರಕಟಿಸುವುದರೊಂದಿಗೆ ದೇಶಾದ್ಯಂತ ಚುನಾವಣಾ ಸಂಭ್ರಮ ಮತ್ತಷ್ಟು ರಂಗೇರಿದೆ. ಇನ್ನು ಸುಮಾರು ಎರಡೂವರೆ ತಿಂಗಳು ಎಲ್ಲೆಲ್ಲೂ ಎಲೆಕ್ಷನ್ ಉತ್ಸಾಹ ಜೋರಾಗಲಿದೆ.

ಆಂಧ್ರ ಪ್ರದೇಶ, ಅರುಣಾಚಲ ಪ್ರದೇಶ, ಸಿಕ್ಕಿಂ ಮತ್ತು ಒರಿಸ್ಸಾ ಸೇರಿ 4 ರಾಜ್ಯಗಳ ವಿಧಾನಸಭೆಗಳಿಗೆ ಸಾರ್ವತ್ರಿಕ ಚುನಾವಣೆ ಹಾಗೂ ನಮ್ಮ ರಾಜ್ಯದ ಶೋರಾಪೂರ ವಿಧಾನಸಭೆ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಲಿದೆ.

ಏಪ್ರಿಲ್ 19 ರಿಂದ ಜೂನ್ 1 ರವರೆಗೆ 7 ಹಂತಗಳಲ್ಲಿ ಮತದಾನ ನಡೆಯಲಿದ್ದು, ಕರ್ನಾಟಕದಲ್ಲಿ ಏಪ್ರಿಲ್ 26 ಮತ್ತು ಮೇ 7ಕ್ಕೆ ಮತದಾನವಾಗಲಿದೆ. ಜೂನ್ 4 ಕ್ಕೆ ಮತ ಎಣಿಕೆ ನಡೆಯಲಿದೆ. ದಿನಾಂಕ 16–03–2024 ರ ಶನಿವಾರದಿಂದಲೇ ನೀತಿ ಸಂಹಿತೆ ಜಾರಿಯಾಗಿದ್ದು ಜೂನ್ 6 ಕ್ಕೆ ಮುಕ್ತಾಯವಾಗಲಿದೆ.


ಮತದಾನ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿದ್ದು, ಮತ ಚಲಾಯಿಸುವುದು ನಮ್ಮ ಹಕ್ಕು. ನೆಚ್ಚಿನ ಸರ್ಕಾರವನ್ನು ಆಯ್ಕೆ ಮಾಡುವ ಅವಕಾಶವನ್ನು ಯಾವುದೇ ಕಾರಣಕ್ಕೂ ಕಳೆದುಕೊಳ್ಳದೆ ತಮ್ಮ ಅಮೂಲ್ಯ ಮತವನ್ನು ಚಲಾಯಿಸಬೇಕು. ■


Downloaded From:www.kpscvaani.com

ಮುಖ್ಯ
ಚುನಾವಣಾಧಿಕಾರಿ
ಕರ್ನಾಟಕ

# ವಿದ್ಯುನ್ಮಾನ ಮತಯಂತ್ರ ಹಾಗೂ ವಿ.ವಿ.ಪ್ಯಾಟ್
## ಬಳಸಿ ಮತ ಚಲಾಯಿಸುವುದು ಹೇಗೆ

1



ನೀವು ಸರತಿ ಸಾಲಿನಲ್ಲಿ ನಿಲ್ಲಿರಿ

2



ನೀವು ಮತಗಟ್ಟೆಯನ್ನು ಪ್ರವೇಶಿಸಿ

3




ನಿಮ್ಮ ಆಯ್ಕೆ ಅಭ್ಯರ್ಥಿಯ ಹೆಸರಿನ ಪಕ್ಕದ ನೀಲಿ ಗುಂಡಿಯನ್ನು ಒತ್ತೀರಿ

4



ಕೆಂಪು ದೀಪವು ಉರಿಯುತ್ತದೆ

5





ವಿವಿಪ್ಯಾಟ್ ಒಳಗಿನ ಪರದೆಯಲ್ಲಿನ ಮುದ್ರಿತ ಚೀಟಿಯನ್ನು ನೋಡಿ

6




7 ಸೆಕೆಂಡ್‌ಗಳ ನಂತರ ಮುದ್ರಿತ ಚೀಟಿಯು ಕೆಳಗಿನ ಡಬ್ಬಿಯಲ್ಲಿ ಬೀಳುತ್ತದೆ

7



ನೀವು ಹೊರ ಬರುತ್ತೀರಿ

TOLL FREE **1950**
18004251950

**#IVoteForSure**
ceokarnataka
ceo.karnataka.gov.in



Downloaded From:www.kpscvaani.com



# ಜನತಂತ್ರದ ಮಹಾಹಬ್ಬ

**ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತ ದೇಶದ ಜನತಂತ್ರದ ಮಹಾ ಉತ್ಸವವಾದ ಲೋಕಸಭಾ ಚುನಾವಣೆ ಮೇಲೆ ಇಡೀ ಜಗತ್ತಿನ ಕಣ್ಣು ನೆಟ್ಟಿದೆ.**

ಐದು ವರ್ಷಗಳ ನಂತರ ಇನ್ನೊಂದು ಮಹಾ ಸಂಗ್ರಾಮಕ್ಕೆ ಈಗಷ್ಟೇ ಕಹಳೆ ಊದಲಾಗಿದೆ. ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದ ಇಪ್ಪತ್ತೆಂಟು ರಾಜ್ಯಗಳು ಮತ್ತು ಎಂಟು ಕೇಂದ್ರಾಡಳಿತ ಪ್ರದೇಶಗಳು ಈ ಸಂಗ್ರಾಮಕ್ಕೆ ಸಾಕ್ಷಿಯಾಗಲಿವೆ. 32,87,263 ಚದರ ಕಿ.ಮೀ. ವಿಸ್ತೀರ್ಣವನ್ನು ಹೊಂದಿರುವ ಭಾರತ ದೇಶವು ಜಗತ್ತಿನ ಏಳನೇ ಅತಿ ದೊಡ್ಡರಾಷ್ಟ್ರ. ಇಲ್ಲಿನ ಜನಸಂಖ್ಯೆ ಸುಮಾರು 144 ಕೋಟಿ. ಇದರಲ್ಲಿ 97 ಕೋಟಿ ಜನ ನೋಂದಾಯಿತ ಮತದಾರರು. ದೇಶದ ಉದ್ದಗಲಕ್ಕೂ ಹಬ್ಬಿರುವ ಇವರು ಎರಡೂವರೆ ತಿಂಗಳುಗಳ ಕಾಲ ನಡೆಯಲಿರುವ ಕದನದಲ್ಲಿ ನಿರ್ಣಾಯಕರು. ಇವರು ಚಲಾಯಿಸಲಿರುವ ಹಕ್ಕು ದೇಶದ ಭವಿಷ್ಯದ ದಿಕ್ಕನ್ನು ಬದಲಿಸುವ ಸಾಮರ್ಥ್ಯ ಎನ್ನುವುದು ಸ್ಪಷ್ಟ. ಹೀಗಾಗಿ ಮಹಾ ಸಂಗ್ರಾಮದ ದಿಕ್ಕು ದಿಸೆ, ಫಲಿತಾಂಶದ ಮೇಲೆ ಇಡೀ ವಿಶ್ವವೇ ದೃಷ್ಟಿ ನೆಟ್ಟಿದೆ ಎಂಬುದೂ ಸತ್ಯ.

ಮಾರ್ಚ್ ತಿಂಗಳ ಎರಡನೇ ವಾರ ನಮ್ಮ ದೇಶದ ಸ್ವಾಯತ್ತ ಸಂಸ್ಥೆಯಾದ ಚುನಾವಣಾ ಆಯೋಗ ಪ್ರಜಾತಂತ್ರ ಪ್ರಕ್ರಿಯೆಯ ವಿಶಾಲ ಚಿತ್ರಣವನ್ನು ನಮ್ಮ ಮುಂದೆ ತೆರೆದಿಟ್ಟಿದೆ. ಇಡೀ ದಕ್ಷಿಣ ಏಷ್ಯಾಕ್ಕೆ ಹೋಲಿಸಿದರೆ ಭಾರತದಲ್ಲಿ ನಡೆಯುವ ಈ ಚುನಾವಣೆ ಬಹುದೊಡ್ಡ ಸವಾಲು. ಈ ಜನತಂತ್ರದ ಹಬ್ಬದಲ್ಲಿ ಜನ ಪಾಲ್ಗೊಂಡರಷ್ಟೇ ಅದಕ್ಕೆ ನಿಜವಾದ ಕಿಮ್ಮತ್ತು. ಒಂದು ಸುಭದ್ರ ಸರ್ಕಾರ ರಚನೆಯಲ್ಲಿ ಅವರ ಪಾತ್ರ ನಿರ್ಣಾಯಕ. ಹಾಗಾಗಿ ಈ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಜನ ಹಕ್ಕು ಚಲಾಯಿಸುವಂತಾಗಬೇಕು ಎಂಬ ಕಳಕಳಿ ಚುನಾವಣಾ ಆಯೋಗದ್ದು.

ಮಾನಸಿ ಮಂಜುನಾಥ್

ಅಸಾಧಾರಣವಾದ ಭೌಗೋಳಿಕ ವ್ಯಾಪ್ತಿಯನ್ನು ಹೊಂದಿರುವ ನಮ್ಮ ದೇಶದ ಚಿತ್ರಣವನ್ನು ಕಂಡವರಿಗೆ ಇದೆಷ್ಟು ವರ್ಣರಂಜಿತ ಎಂಬುದು ಅರ್ಥವಾಗುತ್ತದೆ. ಉತ್ತರದ ಹಿಮಾಲಯ ಪರ್ವತ ಶ್ರೇಣಿಯಿಂದ ಆರಂಭಿಸಿ ದಕ್ಷಿಣದ ಹಿಂದೂ



Downloaded From:www.kpscvaani.com




ಮಹಾಸಾಗರ, ಪೂರ್ವದ ಗಿರಿಶಿಖರಗಳಿಂದ ಪಶ್ಚಿಮದ ಮರುಭೂಮಿ ಇವುಗಳ ನಡುವಿನ ಬೃಹತ್ ನಗರ, ಪಟ್ಟಣ, ಪುಟ್ಟ ಪುಟ್ಟ ಹಳ್ಳಿಗಳಲ್ಲಿ ಇರುವ ಜನ ತಮ್ಮ ವಿವೇಚನಾ ಶಕ್ತಿಯನ್ನು ಪಣಕ್ಕೊಡ್ಡಿ ದೇಶದ ಶಕ್ತಿಕೇಂದ್ರವಾದ ಪಾರ್ಲಿಮೆಂಟಿನಲ್ಲಿ ಕುಳಿತುಕೊಳ್ಳುವ 544 ಲೋಕಸಭಾ ಸದಸ್ಯರನ್ನು ಆರಿಸಿ ಕಳುಹಿಸಬೇಕಾಗಿದೆ.

ಜಗತ್ತಿನಲ್ಲಿರುವ 36 ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿಯೇ ಅತಿಹೆಚ್ಚು ನೋಂದಾಯಿತ ಮತದಾರರ ಸಂಖ್ಯೆಯನ್ನು ಹೊಂದಿರುವ ರಾಷ್ಟ್ರವೆಂದರೆ ಭಾರತ. ಭಾರತ ಚುನಾವಣಾ ಆಯೋಗವೇ ಘೋಷಿಸಿರುವ ನೋಂದಾಯಿತ ಮತದಾರರ ಸಂಖ್ಯೆ (96.8 ಕೋಟಿ) ಗೆ ಹೋಲಿಸಿದರೆ ಭಾರತ ಈ ವಿಷಯದಲ್ಲಿ ಅಗ್ರ ಸ್ಥಾನವನ್ನು ಕಾಯ್ದುಕೊಂಡಿದೆ. ನಂತರದ ಸ್ಥಾನ ದ್ವೀಪ ರಾಷ್ಟ್ರ ಇಂಡೋನೇಷ್ಯಾಕ್ಕೆ (20.4 ಕೋಟಿ) ಸಲ್ಲುತ್ತದೆ. ವಿಶ್ವದಲ್ಲಿಯೇ ದೊಡ್ಡಣ್ಣನೆಂದು ಕರೆಸಿಕೊಂಡಿರುವ ಅಮೆರಿಕದ ನೋಂದಾಯಿತ ಮತದಾರರ ಸಂಖ್ಯೆ 16.8 ಕೋಟಿ. ನಾಲ್ಕನೇ ಸ್ಥಾನದಲ್ಲಿ ಪಾಕಿಸ್ತಾನ (12.8ಕೋಟಿ)ವಿದೆ. ಯೂರೋಪ್‌ನಲ್ಲಿರುವ ಎಲ್ಲ ರಾಷ್ಟ್ರಗಳ ಒಟ್ಟು ಜನಸಂಖ್ಯೆಗಿಂತಲೂ ಮಿಗಿಲಾದುದು ಭಾರತದ ಮತದಾರರ ಸಂಖ್ಯೆ. ಇಷ್ಟೊಂದು ಬೃಹತ್ ವ್ಯಾಪ್ತಿಯನ್ನು ಹೊಂದಿರುವ ದೇಶದಲ್ಲಿ ಶಾಂತಿಯುತ ಚುನಾವಣೆಯನ್ನು ನಡೆಸುವುದು ಸುಲಭದ ಮಾತೇನೂ ಅಲ್ಲ. ಅದಕ್ಕೆ ನಮ್ಮ ಭದ್ರತಾ ಪಡೆ, ಪೊಲೀಸ್ ವ್ಯವಸ್ಥೆಯನ್ನು ನಿಯೋಜಿಸುವುದೇ ಸವಾಲಿನ ಕೆಲಸ. ಪರ್ವತದ ತಪ್ಪಲುಗಳು, ಗುಡ್ಡಗಾಡು ಪ್ರದೇಶಗಳು, ಮರುಭೂಮಿ, ನದಿ ತೀರ ಊರುಗಳಿರುವ ಕಡೆಗಳಲ್ಲಿ ಭದ್ರತೆ ಕಲ್ಪಿಸುವುದು ಕಷ್ಟ. ಅದಕ್ಕಾಗಿಯೇ ಚುನಾವಣೆ ಆಯೋಗ ಈ ಬಾರಿ ಏಳು ಹಂತಗಳಲ್ಲಿ ಮತದಾನ ನಡೆಸುವ ಉದ್ದೇಶ ಹೊಂದಿದೆ.

ಹೀಗೆ ಏಳು ಹಂತಗಳಲ್ಲಿ ಸುಮಾರು ಎರಡೂವರೆ ತಿಂಗಳ ಕಾಲ ಚುನಾವಣೆ ನಡೆಸಲು ಇನ್ನೂ ಒಂದು ಮುಖ್ಯ ಕಾರಣವೆಂದರೆ ದೇಶದ ಉಜ್ವಲ ಭವಿಷ್ಯವನ್ನು ಬರೆಯುವ ಕೆಲಸದಲ್ಲಿ ಎಲ್ಲ ಮತದಾರರು ಪಾಲ್ಗೊಳ್ಳಬೇಕು ಎಂಬುದು. ಹಾಗಾಗಿ ಮತದಾನದ ಎಲ್ಲ ದಿನಾಂಕಗಳನ್ನು ಕೆಲಸದ ದಿನಗಳಲ್ಲೇ ನಡೆಯುವಂತೆ ಚುನಾವಣಾ ಆಯೋಗ ವ್ಯವಸ್ಥೆ ಮಾಡಿದೆ. ಅಂಚೆ ಮತದಾನಕ್ಕೆ ಅವಕಾಶ. ಬುಡಕಟ್ಟು ಜನಾಂಗದವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಹೆಚ್ಚು ಮತಗಟ್ಟೆಗಳ ನಿರ್ಮಾಣ. ವಿಶೇಷ ಚೇತನರಿಗೆ ಮನೆಯಿಂದಲೇ ಮತದಾನ ಮಾಡಲು ಅವಕಾಶ. ಯುವಕರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಮತಗಟ್ಟೆಗಳು... ಇವೆಲ್ಲವೂ ಮತದಾನವೆಂಬ ಹಬ್ಬದಲ್ಲಿ ಎಲ್ಲ ವರ್ಗದ, ವಯೋಮಾನದ ಜನ ಉತ್ಸಾಹದಿಂದ ಪಾಲ್ಗೊಳ್ಳಲಿ ಎಂಬ ಉದ್ದೇಶದಿಂದ ಮಾಡಿರುವ ವ್ಯವಸ್ಥೆಯಿದು ಎನ್ನುವುದು ಸ್ಪಷ್ಟ.

ನಮ್ಮ ದೇಶದ ಉತ್ತರದ ರಾಜ್ಯವಾದ ಹಿಮಾಚಲ ಪ್ರದೇಶದ ಒಂದು ಗ್ರಾಮ 15,256 ಅಡಿ ಎತ್ತರದಲ್ಲಿದೆ. ಅಲ್ಲಿಯೂ ಮತಗಟ್ಟೆಯನ್ನು ಚುನಾವಣಾ ಅಧಿಕಾರಿಗಳು ಸ್ಥಾಪಿಸಬೇಕಾಗಿದೆ. ಇದು ವಿಶ್ವದಲ್ಲಿಯೇ ಅತ್ಯಂತ ಎತ್ತರದಲ್ಲಿರುವ ಮತಗಟ್ಟೆ ಎಂದು ಪರಿಗಣಿಸಲಾಗಿದೆ. ಈ ರಾಜ್ಯದ ಲಾಹೌಲ್‌ಸ್ಪಿಟಿ ಜಿಲ್ಲೆಯಲ್ಲಿರುವ ತಶಿಗಾಂಗ್ ಎಂಬ ಈ ಗ್ರಾಮ ಮಂಡಿ ಲೋಕಸಭಾಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ.

ಇನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ರಾಜ್ಯದಲ್ಲಿ ಮತಗಟ್ಟೆಯನ್ನು ಸ್ಥಾಪಿಸಬೇಕಿದ್ದರೆ ಮೊಸಳೆಗಳೇ ತುಂಬಿರುವ ಮತ್ತು ಕಾಂಡ್ಲಾ ಮರಗಳಿಂದ ಆವೃತವಾಗಿರುವ ಜೌಗು ಪ್ರದೇಶ ಹಾಗೂ ದಟ್ಟಕಾಡಿನ ನಡುವಿನಿಂದ ಸಾಗಬೇಕು. ಮಾವೋ ಉಗ್ರವಾದಿಗಳ

**ಮತದಾನಕ್ಕಾಗಿ ವಿಶೇಷ ಹಾಡು**

ಚುನಾವಣಾ ಆಯೋಗವು ಈ ಬಾರಿಯ ಲೋಕಸಭೆಯ ಮಹಾ ಚುನಾವಣೆಗೆಂದೇ ವಿಶೇಷವಾಗಿ 'ಮತದಾನ ಮಾಡಲಿದ್ದೇವೆ ಭಾರತಕ್ಕಾಗಿ' ಎಂಬ ಘೋಷವಾಕ್ಯವನ್ನು ಒಳಗೊಂಡ ಥೀಮ್ ಸಾಂಗ್ ಅನ್ನು ಬಿಡುಗಡೆ ಮಾಡಿದೆ. (ಅದರ ಯೂಟ್ಯೂಬ್ ಲಿಂಕ್ ನೀಡಲಾಗಿದೆ).ಕನ್ನಡ, ತಮಿಳು, ತೆಲುಗು, ಮಲಯಾಳಂ, ಹಿಂದಿ, ಮರಾಠಿ ಸೇರಿದಂತೆ ನಾನಾ ಭಾಷೆಗಳ ಹತ್ತಾರು ಕಲಾವಿದರು ಸೇರಿ ಹಾಡಿರುವ ಈ ಗೀತೆ ಮತದಾರರನ್ನು ಮತಗಟ್ಟೆಯಕಡೆಗೆ ಸೆಳೆಯುವ ಉದ್ದೇಶವನ್ನು ಹೊಂದಿದೆ.

**ನಾ ಭಾರತ**
**ನನ್ನಲ್ಲಿದೆ ಭಾರತ**
**ನಾನು ಶಕ್ತಿ**
**ನನ್ನಲ್ಲಡಗಿದೆ ಶಕ್ತಿ**
**ಮತದಾನ ಮಾಡಲಿದ್ದೇವೆ**
**ಭಾರತಕ್ಕಾಗಿ**

ಎಂಬ ಸಾಲುಗಳನ್ನು ಹೊಂದಿರುವ ಈ ಗೀತೆಯ ಕನ್ನಡದ ಸಾಲುಗಳನ್ನು ನಮ್ಮ ಜನಪ್ರಿಯ ಗಾಯಕರಾದ ವಿಜಯ ಪ್ರಕಾಶ್ ಅವರು ಹಾಡಿದ್ದಾರೆ. ಜೊತೆಗೆ ಕವಿತಾ ಕೃಷ್ಣಮೂರ್ತಿ, ಸೋನು ನಿಗಮ್, ಸುಖವಿಂದರ್ ಸಿಂಗ್, ಹರಿಹರನ್, ಕೆ.ಎಸ್.ಚಿತ್ರ, ಜಾವೇದ್ ಅಲಿ ಸೇರಿದಂತೆ ಅನೇಕ ಗಾಯಕರು ಇದಕ್ಕೆ ದನಿಗೂಡಿಸಿದ್ದಾರೆ. ಇಷ್ಟು ಮಾತ್ರವಲ್ಲದೆ ಅನಿಲ್ ಕಪೂರ್, ಮೋಹನ್‌ಲಾಲ್ ಸೇರಿದಂತೆ ಅನೇಕ ಮಂದಿ ಚಿತ್ರನಟರು ಇದಕ್ಕಾಗಿ ಅಭಿನಯಿಸಿದ್ದಾರೆ.


Downloaded From:www.kpscvaani.com

**ಮತದಾರರ ಪಟ್ಟಿಯಲ್ಲಿದೆಯೇ ನಿಮ್ಮ ಹೆಸರು?**

- 1950 ಸಂಖ್ಯೆಗೆ ಕರೆ ಮಾಡುವ ಮೂಲಕ ಅಥವಾ ನಿಮ್ಮ ಎಪಿಕ್ ಸಂಖ್ಯೆಯನ್ನು ಎಸ್‌ಎಂಎಸ್ ಮಾಡುವ ಮೂಲಕವೂ ಮತದಾರರ ಮಾಹಿತಿಯನ್ನು ಪಡೆದುಕೊಳ್ಳಬಹುದು.
- ಗೂಗಲ್ ಪ್ಲೇ ಸ್ಟೋರ್‌ನಲ್ಲಿ Voter Helpline ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ನಿಮ್ಮ ಹೆಸರನ್ನು ಸರ್ಚ್ ಮಾಡಲು ಸಾಧ್ಯ.
- https://electoralsearch.eci.gov.in ಈ ವೆಬ್‌ತಾಣಕ್ಕೆ ಪ್ರವೇಶ ಪಡೆದು ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಎಂಬುದನ್ನು ಖಾತರಿ ಮಾಡಿಕೊಳ್ಳಬಹುದು.




ಹಾವಳಿ ಇದೆ ಎಂದು ಶಂಕಿಸಲಾಗಿರುವ ಒಡಿಶಾದ ಮಲ್ಕಾನ್‌ಗಿರಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ಮತಗಟ್ಟೆಯನ್ನು ಸ್ಥಾಪಿಸಬೇಕಿದ್ದರೆ ಸುಮಾರು ಒಂಭತ್ತು ಮೈಲಿ ಕಾಡಿನಲ್ಲಿ ನಡೆದುಕೊಂಡೇ ಹೋಗಬೇಕು. ಹೀಗೆ ಪ್ರಕೃತಿ ಒಡ್ಡುವ ಅನೇಕ ಸವಾಲುಗಳ ನಡುವೆ ಚುನಾವಣೆ ನಡೆಸುವ ಅನಿವಾರ್ಯತೆ ಚುನಾವಣೆ ಆಯೋಗಕ್ಕಿದೆ. ಆದರೆ ಪ್ರತಿ ಬಾರಿ ಚುನಾವಣೆ ಬಂದಾಗ ಆಯೋಗ ಮುಂಚಿತವಾಗಿಯೇ ಸಾಕಷ್ಟು ಕ್ರಮಗಳನ್ನು ಕೈಗೊಳ್ಳುತ್ತಿರುವುದು ವಿಶೇಷ. ಯಾಕೆಂದರೆ ಜನ ಶತಾಯಗತಾಯ ಓಟ್ ಚಲಾಯಿಸಲೇಬೇಕು ಎಂಬುದು ಉದ್ದೇಶ.

ಒಂದು ವಿಧಾನಸಭಾ ಚುನಾವಣೆ ದಿನಾಂಕ ಹತ್ತಿರ ಬಂದಿತೆಂದರೆ ಅದಕ್ಕೆ ಬೇಕಾದ ಸಕಲ ಸಿದ್ಧತೆಗಳನ್ನು ಆಯೋಗ ಯಾವುದೇ ಸದ್ದು-ಗದ್ದಲವಿಲ್ಲದೆ ಬಹಳಷ್ಟು ಮುಂಚಿತವಾಗಿಯೇ ಮಾಡಿಕೊಂಡಿರುತ್ತದೆ. ಲೋಕಸಭಾ ಚುನಾವಣೆಯಂತೂ ಅದಕ್ಕೆ ಬಹುದೊಡ್ಡ ಟಾಸ್ಕ್. ಅದನ್ನು ಕಟ್ಟುನಿಟ್ಟಾಗಿ ಮಾಡಿ ಮುಗಿಸುವುದು ಅದರ ಜವಾಬ್ದಾರಿ. ಅದಕ್ಕಾಗಿ ಬೇಕಾದ ಮ್ಯಾನ್ ಫೋರ್ಸ್, ಅವರಿಗೆ ತರಬೇತಿ, ಕಾರ್ಯಾಗಾರ, ಪೂರಕ ವ್ಯವಸ್ಥೆಗಳು ಹೀಗೆ ಎಲ್ಲ ವಿಚಾರಗಳಲ್ಲಿ ಚುನಾವಣಾ ಆಯೋಗವು 'ಸುಸಜ್ಜಿತ ಸೇನಾಪಡೆ'ಯ ರೀತಿಯಲ್ಲಿ ಕೆಲಸ ಮಾಡುತ್ತದೆ ಎಂಬುದು ನಿರ್ವಿವಾದ.

ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು 'ನೀತಿ ಸಂಹಿತೆ' ಎನ್ನುವ ಅಸ್ತ್ರವನ್ನು ಹಿಡಿದು ಕಾರ್ಯಾಚರಣೆ ಆರಂಭಿಸಿದೆ. ಹಿಂದೆಲ್ಲ ಹಣಬಲ, ತೋಳ್ಬಲ ಮತ್ತು ಕಾನೂನು ಸುವ್ಯವಸ್ಥೆಯ ಉಲ್ಲಂಘನೆ ಚುನಾವಣೆ ನಡೆಸಲು ಹೊರಟವರಿಗೆ ಎದುರಾಗುತ್ತಿದ್ದ ಸವಾಲುಗಳಾಗಿದ್ದವು. ಒಂದು ಮಟ್ಟಿಗೆ

**ಪ್ರಮುಖ ವಿಶೇಷತೆಗಳು**

- ಭಾರತದ ಸಂವಿಧಾನದ 83ನೇ ಅನುಚ್ಛೇದದ ಪ್ರಕಾರ ಪ್ರತಿ ಐದು ವರ್ಷಕ್ಕೊಮ್ಮೆ ಲೋಕಸಭಾ ಚುನಾವಣೆ ನಡೆಯುತ್ತದೆ.
- ಬ್ರಿಟಿಷರಿಂದ ದಾಸ್ಯ ಮುಕ್ತವಾದ ಭಾರತದಲ್ಲಿ ಮೊದಲ ಲೋಕಸಭಾ ಚುನಾವಣೆ ನಡೆದಿದ್ದು 1951 ಮತ್ತು 1952ರ ಅವಧಿಯಲ್ಲಿ. ಅದು ದೇಶದ ರಾಜಕೀಯದಲ್ಲಿ ಬಹುದೊಡ್ಡ ಮೈಲಿಗಲ್ಲು. ಅಗಿನ ಮತದಾನದ ಪ್ರಮಾಣ ಶೆ.44.87
- 1951ರ ಅಕ್ಟೋಬರ್ 25 ರಂದು ಹಿಮಾಚಲ ಪ್ರದೇಶದ ಚೀನಿ ತಾಲೂಕಲ್ಲಿ ಮೊದಲ ಮತ ಚಲಾವಣೆಯಾಗಿತ್ತು.
- ಮೊದಲ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಒಟ್ಟು 489 ಕ್ಷೇತ್ರಗಳ ಪೈಕಿ 364 ಸೀಟುಗಳನ್ನು ಗಳಿಸಿತ್ತು. ಸಿಪಿಐ 16 ಸೀಟುಗಳೊಂದಿಗೆ 2ನೇ ಸ್ಥಾನ ಗಳಿಸಿತ್ತು. ಜಯಪ್ರಕಾಶ್ ನಾರಾಯಣ್ ಅವರ ಸೋಷಿಯಲಿಸ್ಟ್ ಪಾರ್ಟಿ ಗಳಿಸಿದ್ದು 12 ಸ್ಥಾನ.
- ಮೊದಲ ಮಹಾ ಚುನಾವಣೆಯಲ್ಲಿ ಮತದಾನ ಮಾಡಿದ ಅರ್ಹ ಮತದಾರರ ಸಂಖ್ಯೆ 17.3 ಕೋಟಿ.
- ಲೋಕಸಭೆಯ ಮೊದಲ ಅಧಿವೇಶನ ನಡೆದಿದ್ದು 1952ರ ಮೇ 13 ರಂದು.
- ಮತದಾರರಾಗಲು ಮೊದಲು ಇದ್ದ ವಯೋಮಿತಿ 21. 1988ರಲ್ಲಿ ಸಂವಿಧಾನಕ್ಕೆ 61ನೇ ತಿದ್ದುಪಡಿಯನ್ನು ತಂದು ಈ ವಯೋಮಿತಿಯನ್ನು 18ಕ್ಕೆ ಇಳಿಸಲಾಯಿತು.
- ಈ ಬಾರಿ ನಡೆಯುತ್ತಿರುವ ಚುನಾವಣೆ 18ನೇ ಲೋಕಸಭೆಯ ರಚನೆಗಾಗಿ. ಈಗ ಸದನದ ಸದಸ್ಯರ ಸಂಖ್ಯೆ 544.
- 2019ರ ಚುನಾವಣೆಗೆ ಹೋಲಿಸಿದರೆ ಈ ಬಾರಿ 15 ಕೋಟಿ ಹೊಸ ಮತದಾರರು ಮತದಾರರ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ.
- 68 ಹಂತಗಳಲ್ಲಿ ನಡೆದ ಮೊದಲ ಚುನಾವಣೆಯಲ್ಲಿ 53 ರಾಜಕೀಯ ಪಕ್ಷಗಳು ಭಾಗಿಯಾಗಿದ್ದವು.
- ಭಾರತದ ಚುನಾವಣಾ ಆಯೋಗ ರಚನೆಯಾಗಿದ್ದು 1950 ಜನವರಿ 25 ರಂದು. ಮೊದಲ ಆಯುಕ್ತರಾದವರು ಸುಕುಮಾರ್ ಸೇನ್.


Downloaded From:www.kpscvaani.com

# ಎಲ್ಲರೂ ಒಳಗೊಳ್ಳುವ, ಸುಗಮ, ನೈತಿಕ ಮತ್ತು ಭಾಗವಹಿಸುವ ಚುನಾವಣೆ



ಅವೆಲ್ಲವನ್ನೂ ಕಾನೂನು ಚೌಕಟ್ಟಿಗೆ ತಂದು ನಿಭಾಯಿಸಿಯೂ ಬಿಡಬಹುದು. ಆದರೆ ಈ ಬಾರಿ ಆಯೋಗಕ್ಕಿರುವ ಬಹುದೊಡ್ಡ ತಲೆನೋವೆಂದರೆ ಸಾಮಾಜಿಕ ಜಾಲತಾಣಗಳು ಮತ್ತು ಅವು ಶರವೇಗದಲ್ಲಿ ಹಬ್ಬಿಸುವ ತಪ್ಪು ಮಾಹಿತಿಗಳು. ಇದನ್ನು ನಿಯಂತ್ರಿಸಲು ಈ ಬಾರಿ ಹೆಚ್ಚು ಬೆವರು ಸುರಿಸಬೇಕಾಗುತ್ತದೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಕಾರ್ಯತಂತ್ರಗಳು ಭಿನ್ನವಾಗಿರಬೇಕಾದ ಅಗತ್ಯವಿದೆ.

2019ರಲ್ಲಿ ಲೋಕಸಭೆ ಚುನಾವಣೆ ನಡೆದಾಗ ದಾಖಲಾದ ಒಂದು ಕೆಟ್ಟ ಪ್ರವೃತ್ತಿಯನ್ನು ಬಹಳಷ್ಟು ಜನ ಈ ಹೊತ್ತಿಗೆ ಮರೆತಿರಬಹುದು. ಅದು ಬಹಳಷ್ಟು ರಾಜ್ಯಗಳ ನಗರ ಪ್ರದೇಶದ ಜನ ಮತದಾನದ ದಿನ ಮತಗಟ್ಟೆಯ ತನಕ ಬಾರದೇ ಇದ್ದುದು. ಹೀಗೆ ಕರ್ತವ್ಯದಿಂದ ವಿಮುಖರಾದವರು ವಿದ್ಯಾವಂತರು ಎಂಬುದೂ ಸ್ಪಷ್ಟ. ಅಂದರೆ ಪ್ರಜೆಗಳ ಹಕ್ಕು ಚಲಾವಣೆ ವಿಚಾರದಲ್ಲಿ ನಗರ ಪ್ರದೇಶದ ಅಕ್ಷರಸ್ಥರಿಗಿಂತ ಗ್ರಾಮೀಣ ಪ್ರದೇಶದ ಅಕ್ಷರಸ್ಥರೇ ಮುಂಚೂಣಿಯಲ್ಲಿ ನಿಂತಿದ್ದರು. ಆ ಬಳಿಕ ನಡೆದ ಹಿಮಾಚಲ ಪ್ರದೇಶ ಮತ್ತು ಗುಜರಾತ್ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿಯೂ ಕೂಡ ಇದು ಮುಂದುವರಿದಿತ್ತು. ಆಗೆಲ್ಲ ಹೆಚ್ಚಾಗಿ ರಜಾ ದಿನಗಳಂದೇ ಅಥವಾ ಅದರ ಹಿಂದೆ ಮುಂದೆ ಮತದಾನ ನಡೆಯುತ್ತಿತ್ತು. ಇದರ ಅವಕಾಶ ಪಡೆದ ನಗರ ಪ್ರದೇಶಗಳ ಮತದಾರರು ಕರ್ತವ್ಯವನ್ನು ಮರೆತು ಕುಟುಂಬ ಸಮೇತ ಪ್ರವಾಸ ಹೊರಟ ಉದಾಹರಣೆಗಳು ಇದ್ದವು. ಈ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡ ಚುನಾವಣಾ ಆಯೋಗ ಮತದಾನದ ದಿನಾಂಕವನ್ನು ಕೆಲಸದ ದಿನದಂದೆ ನಡೆಸುವ ತೀರ್ಮಾನಕ್ಕೆ ಬಂದಿತು. ಈಗಲಾದರೂ ಮತದಾನದ ಪ್ರಮಾಣ ನಗರಗಳಲ್ಲಿ ಹೆಚ್ಚಾದೀತು ಎಂಬ ನಿರೀಕ್ಷೆಯಿದೆ.

'ಒಂದು ದೇಶ ಒಂದು ಚುನಾವಣೆ' ಪರಿಕಲ್ಪನೆಗೆ ಜೀವ ಪಡೆದುಕೊಳ್ಳುತ್ತಿರುವ ಹೊತ್ತಿನಲ್ಲಿಯೇ ದೇಶ ಇನ್ನೊಂದು ಮಹಾಚುನಾವಣೆಗೆ ಸಜ್ಜಾಗಿ ಕುಳಿತುಬಿಟ್ಟಿತು. ಅಪಾರವಾದ ಸಿದ್ಧತೆ, ಆಡಳಿತ ಯಂತ್ರಕ್ಕೆ ಅಲ್ಪ ವಿರಾಮ, ಅಪಾರ ಮಾನವ ಸಂಪನ್ಮೂಲಗಳ ಬಳಕೆ, ಭಾರೀ ಹಣದ ಅವಶ್ಯಕತೆ, ಭದ್ರತೆಯ ಜವಾಬ್ದಾರಿ, ಕಾಳಧನದ ಹರಿವಿಗೆ ಕಡಿವಾಣ ಮುಂತಾದ ನೂರಾರು ಹೊಣೆಗಾರಿಕೆಯೊಂದಿಗೆ, ಚುನಾವಣಾ ಆಯೋಗ ಈ 'ಮಹಾ ಉತ್ಸವ'ವನ್ನು ಸಂಪನ್ನಗೊಳಿಸಬೇಕಾಗಿದೆ. ಪ್ರಜಾಪ್ರಭುತ್ವದ ಸೂರಿನಡಿಯಲ್ಲಿ ಪ್ರಜ್ವಲವಾಗಿ ಬೆಳೆದಿರುವ ಭಾರತದಾದ್ಯಂತವಾಗಿ ಈ ಪರಿಯಲ್ಲಿ ನಡೆಯುವ ಜನತಂತ್ರದ ಹಬ್ಬ ವಿಶ್ವದ ಇನ್ಯಾವುದೇ ಭಾಗದಲ್ಲಿ ಕಾಣದೇ ಇರುವ ವಿದ್ಯಮಾನ. ಅತ್ಯಂತ ಚಲನಶೀಲವಾದ ಪ್ರಜಾಪ್ರಭುತ್ವ ನಮ್ಮದು. ಇಲ್ಲಿನ ವೈವಿಧ್ಯತೆಯೂ ಕಣ್ಣು ಕೋರೈಸುವಂತಹುದು. ಇಂತಹ ನಾಡಿನಲ್ಲಿ ಐದು ವರ್ಷಕ್ಕೊಮ್ಮೆ ನಡೆಯುವ ಈ 'ಜನರ ಹಬ್ಬ'ದಲ್ಲಿ ಜನರೆಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳುವುದು ಮಾತ್ರವಲ್ಲದೆ ಆತ್ಮಾವಲೋಕನ ಮಾಡಿಕೊಳ್ಳಲು ಇದು ಸುಸಮಯ. ■



Downloaded From:www.kpscvaani.com




# ಮತದಾರ ಜಾಗೃತಿಗಾಗಿ ಹಾಟ್ ಏರ್ ಬಲೂನ್ ಹಾರಾಟ

**ಮತದಾನ ಹಬ್ಬದಲ್ಲಿ ಭಾಗವಹಿಸುವಂತೆ ಮತದಾರರ ಮನವೊಲಿಸಲು ಹಾಟ್ ಏರ್ ಬಲೂನ್ ಹಾರಾಟ ನಡೆಸಿದ ದಾವಣಗೆರೆ ಜಿಲ್ಲಾಡಳಿತ.**

ಧನಂಜಯ.ಬಿ

ಪ್ರಜಾಪ್ರಭುತ್ವದ ನೆಲೆಗಟ್ಟಿನ ಮೇಲೆ ನಿಂತಿರುವ ಅತೀ ದೊಡ್ಡ ದೇಶ ಭಾರತವಾಗಿದೆ. ಯಾವುದೇ ವರ್ಗ, ಗುಂಪು ಅಥವಾ ವ್ಯಕ್ತಿಯ ಅಧೀನದಲಿಲ್ಲದೇ ಜನತೆಯ ಅಧೀನದಲ್ಲಿರುವ ಸರ್ಕಾರವೇ ಪ್ರಜಾಪ್ರಭುತ್ವ ಸರ್ಕಾರ. ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸಲು ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆ ಮೂಲಕ ಲೋಕಸಭಾ ಸದಸ್ಯರನ್ನು ಆಯ್ಕೆ ಮಾಡಿ ಸಂಸತ್ತಿಗೆ ಕಳುಹಿಸಲಾಗುತ್ತದೆ. ಲೋಕಸಭಾ ಸದಸ್ಯರು ಸೇರಿ ತಮ್ಮ ನಾಯಕನ ಆಯ್ಕೆ, ಸಂಪುಟ ರಚನೆ ಮಾಡುವ ಮೂಲಕ ಸರ್ಕಾರ ರಚನೆಯಾಗುತ್ತದೆ.

ಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ ಸರ್ಕಾರ ರಚನೆ ಮಾಡಲು ಪ್ರಮಾಣಾನುಗುಣ ಬಹುಮತ ಇದ್ದವರು


Downloaded From:www.kpscvaani.com



ಸರ್ಕಾರ ರಚನೆ ಮಾಡಲು ಹಕ್ಕು ಮಂಡಿಸುವರು. ಅಂದರೆ ಒಟ್ಟು ಲೋಕಸಭೆಯ 543 ಸ್ಥಾನಗಳ ಪೈಕಿ ಶೇ 50 ಕ್ಕಿಂತಲೂ ಹೆಚ್ಚಿನ ಸದಸ್ಯರ ಬೆಂಬಲ ಇರಬೇಕಾಗುತ್ತದೆ.

ಪ್ರಜಾಪ್ರಭುತ್ವದಲ್ಲಿ ಮತದಾನದ ಮೂಲಕ ಎಲ್ಲರ ಅಭಿಪ್ರಾಯ ವ್ಯಕ್ತಪಡಿಸುವುದು ಬಹಳ ಮುಖ್ಯ, ಮತ್ತು ಪ್ರಜಾಪ್ರಭುತ್ವದಲ್ಲಿ ಎಲ್ಲರ ಸಹಭಾಗಿತ್ವ ಅವಶ್ಯಕ, ಪ್ರತಿಯೊಬ್ಬ ಮತದಾರ ಲೋಕಸಭಾ ಚುನಾವಣಾ ಹಬ್ಬದಲ್ಲಿ ಭಾಗವಹಿಸುವ ಮೂಲಕ ಪ್ರಜಾತಂತ್ರ ಆರಾಧಿಸಬೇಕೆಂಬುದು ಚುನಾವಣಾ ಆಯೋಗದ ಆಶಯವಾಗಿದೆ. ಆದ್ದರಿಂದಲೇ ಚುನಾವಣೆಯಲ್ಲಿ ಶೇ 100 ರಷ್ಟು ಮತದಾನವಾಗಬೇಕೆಂದು ಪರಿಣಾಮಕಾರಿಯಾಗಿ ಮತದಾರರ ಜಾಗೃತಿ ಕಾರ್ಯಕ್ರಮಗಳನ್ನು ಚುನಾವಣಾ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ.

ಎಲ್ಲರೂ ಮತದಾನದಲ್ಲಿ ಭಾಗವಹಿಸಿದಾಗ ಮಾತ್ರ ಎಲ್ಲರೊಳಗೊಂಡ ಸರ್ಕಾರ ರಚನೆಯಾಗಲಿದೆ. ನಮ್ಮ ಸಂವಿಧಾನವು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಮೂಲಭೂತ ಹಕ್ಕುಗಳನ್ನು ನೀಡಿದೆ. ಅದೇ ರೀತಿ ದೇಶದ ಹಿತ ಕಾಪಾಡಲು ಮೂಲಭೂತ ಕರ್ತವ್ಯಗಳನ್ನು ನಿಭಾಯಿಸಬೇಕಾಗುತ್ತದೆ.

ಪ್ರಸ್ತುತ 18 ನೇ ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ನಡೆಯುತ್ತಿದ್ದು, ದೇಶದಲ್ಲಿ 7 ಹಂತದಲ್ಲಿ ಚುನಾವಣೆ ನಡೆಯಲಿದೆ. ಕರ್ನಾಟಕ ರಾಜ್ಯದಲ್ಲಿ 28 ಲೋಕಸಭಾ ಸ್ಥಾನಗಳಿಗೆ ಎರಡು ಹಂತದಲ್ಲಿ ಚುನಾವಣೆ ನಡೆಯುತ್ತಿದ್ದು ಏಪ್ರಿಲ್ 26 ರಂದು ಮತ್ತು ಮೇ 7 ರಂದು ಮತದಾನ ನಡೆಯುತ್ತಿದೆ.



ದಾವಣಗೆರೆ ಜಿಲ್ಲೆಯಲ್ಲಿ ಲೋಕಸಭಾ ಕ್ಷೇತ್ರದ ಚುನಾವಣೆಯು ಎರಡನೇ ಹಂತ ಅಂದರೆ ಮೇ 7 ರಂದು ಮತದಾನ ನಡೆಯಲಿದೆ. ಚುನಾವಣೆಯಲ್ಲಿ ಶೇಕಡವಾರು ಮತದಾನ ಮಾಡಬೇಕೆಂದು ಸ್ವೀಪ್ ಕಾರ್ಯಕ್ರಮದ ಮೂಲಕ ಮತದಾರರನ್ನು ಮತಗಟ್ಟೆಗೆ ಕರೆತರಲು ಜಿಲ್ಲಾಡಳಿತವು ವಿಭಿನ್ನ ಕಾರ್ಯಕ್ರಮಕ್ಕೆ ಮುಂದಾಗಿದೆ.

ಮಾರ್ಚ್ 16 ಮತ್ತು 17 ರಂದು ಬೆಣ್ಣೆ ನಗರಿ ದಾವಣಗೆರೆ ನಗರದ ಹೈಸ್ಕೂಲ್ ಮೈದಾನದಲ್ಲಿ ಹಾಟ್ ಏರ್ ಬಲೂನ್ ಉಚಿತ ತರಬೇತಿ ನೀಡುವ ಮೂಲಕ ಮತದಾರರ ಜಾಗೃತಿ ಕೈಗೊಳ್ಳಲಾಯಿತು. ಈ ಬಲೂನ್‌ನಲ್ಲಿ ಒಂದು ಬಾರಿಗೆ ಗರಿಷ್ಠ 4 ಜನರು 180 ಅಡಿವರೆಗೆ ಆಕಾಶದಲ್ಲಿ ಹಾರಾಟ ಮಾಡುವ ಮೂಲಕ ಗಮನ ಸೆಳೆದರು. ಯುವ ಮತದಾರರನ್ನು ಆಕರ್ಷಿಸಲು ಹೆಚ್ಚಿನ ಒತ್ತು ನೀಡಲಾಗಿತ್ತು. ಉಚಿತವಾಗಿ ಹಾರಾಟ ಮಾಡಿಸಿದ್ದರಿಂದ ಎರಡು ದಿನಗಳಲ್ಲಿ ನೂರಾರು ಮಹಿಳೆಯರು, ಯುವಕರು ಹಾಟ್ ಏರ್ ಬಲೂನ್‌ನಲ್ಲಿ ಹಾರಾಟ ಮಾಡಿ ಹರ್ಷ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ವೆಂಕಟೇಶ್ ಎಂ. ವಿ ಅವರು ಹಾಟ್ ಏರ್ ಬಲೂನ್‌ನಲ್ಲಿ ಹಾರಾಟ ಮಾಡಿ ಚುನಾವಣೆ ಅಂದರೆ ಪ್ರಜಾಪ್ರಭುತ್ವದ ಹಬ್ಬ, ಇದರಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ ಪ್ರಜಾಪ್ರಭುತ್ವದ ಯಶಸ್ವಿಗೆ ಸಹಕಾರಿಯಾಗಲಿದೆ ಎಂದು ಕರೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಅಧ್ಯಕ್ಷರಾದ ಸುರೇಶ್ ಬಿ.ಇಟ್ನಾಳ್ ಪ್ರತಿಯೊಬ್ಬರು ಮತದಾರರ ಪಟ್ಟಿಯನ್ನು ಅವಲೋಕಿಸಿ ಸೇರ್ಪಡೆ ಮತ್ತು ತಿದ್ದುಪಡಿ ಇದ್ದಲ್ಲಿ ಏಪ್ರಿಲ್ 9 ರೊಳಗಾಗಿ ಅರ್ಜಿ ಸಲ್ಲಿಸಲು ಮತ್ತು ಚುನಾವಣಾ ಸಂಬಂಧಿ ಸಹಾಯಕ್ಕಾಗಿ 1950 ಟೋಲ್‌ಫ್ರೀ ಬಳಕೆ ಮಾಡಿ ಮಾಹಿತಿ ಪಡೆಯಬಹುದು ಎಂದು ತಿಳಿಸಿದರು.

ಜಿಲ್ಲಾ ರಕ್ಷಣಾಧಿಕಾರಿಗಳಾದ ಉಮಾ ಪ್ರಶಾಂತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕರಾದ ಕೊಟ್ರೇಶ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಕರಿಸಿದ್ದಪ್ಪ, ಯುವಜನ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿಬಾಯಿ, ಯುವ ಪ್ರಶಸ್ತಿ ಪುರಸ್ಕೃತರಾದ ಮಾಗನಹಳ್ಳಿ ಮಂಜುನಾಥ್ ಉಪಸ್ಥಿತರಿದ್ದು, ಅವರುಗಳೂ ಏರ್ ಬಲೂನ್‌ನ ಹಾರಾಟದ ಅನುಭವವನ್ನು ಪಡೆದರು.



Downloaded From:www.kpscvaani.com



# ಮಾಧ್ಯಮಗಳಿಗೆ ಚುನಾವಣಾ ಪೂರ್ವ ಕಾರ್ಯಾಗಾರ

ಜಯಶ್ರೀ ನಾಡಿಗ್

ಪ್ರಜಾಪ್ರಭುತ್ವದ ನಾಲ್ಕನೇ ಸ್ಥಂಭ ಮಾಧ್ಯಮ, ಹಾಗೂ ಆ ವ್ಯವಸ್ಥೆಯ ಪ್ರಮುಖ ಅಂಗ ಚುನಾವಣೆ. ನಾಗರಿಕರು ಯಾವುದೇ ಭಯವಿಲ್ಲದೇ ಮತ ಚಲಾಯಿಸಲು ಮಾಧ್ಯಮಗಳು ಪ್ರಬುದ್ಧ ಪಾತ್ರ ನಿರ್ವಹಿಸುತ್ತವೆ. ಮತದಾರರು ಸರಿಯಾದ ಆಯ್ಕೆ ಮಾಡಲು ಅಗತ್ಯ ಮಾಹಿತಿ ನೀಡುವ ಮಹತ್ತರ ಜವಾಬ್ದಾರಿಯನ್ನು ಮಾಧ್ಯಮಗಳು ನಿರ್ವಹಿಸಬೇಕಿದೆ. ಮಾಧ್ಯಮಗಳು ಪಕ್ಷಾತೀತವಾಗಿ ಚುನಾವಣೆಯ ಪ್ರತಿಯೊಂದು ಹಂತದಲ್ಲೂ ವಸ್ತುಸ್ಥಿತಿ, ಲೋಪದೋಷಗಳನ್ನು ಪ್ರತಿಬಿಂಬಿಸುವ ಪ್ರತಿಧ್ವನಿಯಾಗಬೇಕು. ಚುನಾವಣೆಯ ನೀತಿ ಸಂಹಿತೆಯ ಚೌಕಟ್ಟಿನಲ್ಲಿ ಕಾರ್ಯವಹಿಸತಕ್ಕದ್ದು.

ಚುನಾವಣಾ ಆಯೋಗ ಹಾಗೂ ಮಾಧ್ಯಮಗಳು ಪರಸ್ಪರ ಪೂರಕ ಸಂಯೋಜನೆಯೊಂದಿಗೆ ಕಾರ್ಯವಹಿಸುವುದು ಸಮಂಜಸವಾಗಿದೆ. ಈ ಹಿನ್ನೆಲೆಯೊಂದಿಗೆ ವಾರ್ತಾ ಇಲಾಖೆ ಹಾಗೂ ಮುಖ್ಯ ಚುನಾವಣಾಧಿಕಾರಿ ಕಚೇರಿ ಜಂಟಿಯಾಗಿ ಮಾಧ್ಯಮ ಕಾರ್ಯಾಗಾರವನ್ನು ವಾರ್ತಾ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಏರ್ಪಡಿಸಿತ್ತು. ಕಾರ್ಯಾಗಾರದಲ್ಲಿ ನೀತಿ ಸಂಹಿತೆಯ ಆಳ ವಿಸ್ತಾರದ ಚರ್ಚೆ ಮತ್ತು ವಿಚಾರ ವಿನಿಮಯ ನಡೆಸಲಾಯಿತು.

**ಮಾಧ್ಯಮಗಳಿಗೆ ನಡೆಸಲಾದ ಕಾರ್ಯಾಗಾರದಲ್ಲಿ ಪಕ್ಷಾತೀತ ವರದಿ ಮತ್ತು ನೀತಿ ಸಂಹಿತೆ ಅನುಪಾಲನೆಗೆ ಒತ್ತು ನೀಡಲು ಸಲಹೆ ನೀಡಲಾಯಿತು.**



ಕಾರ್ಯಾಗಾರ ಉದ್ಘಾಟಿಸಿದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಚುನಾವಣೆಯಲ್ಲಿ ಮಾಧ್ಯಮಗಳ ಪಾತ್ರ ಬಹುಮುಖ್ಯ ಎಂದು ಉಲ್ಲೇಖಿಸಿದರು. ರಾಜ್ಯದಲ್ಲಿ 2 ಮತ್ತು 3ನೇ ಹಂತದಲ್ಲಿ ಲೋಕಸಭಾ ಚುನಾವಣೆ ಕ್ರಮವಾಗಿ ಏಪ್ರಿಲ್ 26 ಹಾಗೂ ಮೇ 7 ರಂದು ನಡೆಯಲಿದೆ. ಚುನಾವಣಾ ಸಂದರ್ಭದಲ್ಲಿ ಟಿವಿ, ಕೇಬಲ್, ಪತ್ರಿಕೆಗಳಲ್ಲಿ ಭಿತ್ತರಗೊಳ್ಳುವ ರಾಜಕೀಯ ಜಾಹಿರಾತುಗಳಿಗೆ ಮಾಧ್ಯಮ ಪ್ರಮಾಣೀಕರಣ ಮೇಲುಸ್ತುವಾರಿ ಸಮಿತಿ (ಎಂಸಿಎಂಸಿ) ಯಿಂದ ಪೂರ್ವಾನುಮತಿ ಕಡ್ಡಾಯವಾಗಿದೆ. ಅಲ್ಲದೇ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರಗೊಳ್ಳುವ ರಾಜಕೀಯ ಪಕ್ಷ, ವ್ಯಕ್ತಿಗಳ ಜಾಹಿರಾತುಗಳಿಗೂ ಪೂರ್ವಾನುಮತಿ ಅವಶ್ಯಕವಾಗಿದೆ. ಚುನಾವಣಾ ಆಯೋಗದ



Downloaded From:www.kpscvaani.com



ಅನುಮತಿ ಪಡೆದ ನಂತರವೇ ಪತ್ರಿಕೆಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳು ಜಾಹಿರಾತನ್ನು ಪ್ರಕಟಿಸಬೇಕು ಎಂದು ಅವರು ತಿಳಿಸಿದರು. ಕಳೆದ ಚುನಾವಣೆಯಲ್ಲಿ ಜಾರಿಗೆ ಬಂದ ಮನೆಯಲ್ಲೇ ಮತದಾನದ ವ್ಯವಸ್ಥೆ ಈ ಬಾರಿಯೂ ಕಲ್ಪಿಸಲಾಗಿದ್ದು, 85 ವರ್ಷ ವಯಸ್ಸು ಮೀರಿದ ಹಾಗೂ ವಿಕಲಚೇತನರಿಗೆ 12–ಡಿ ನಮೂನೆ ಅರ್ಜಿ ಪಡೆದು ಅವರಿಗೆ ಮನೆಯಲ್ಲೇ ಮತದಾನ ಹಾಕುವ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಚುನಾವಣೆಯನ್ನು ವಿಶ್ವಾಸಾರ್ಹತೆ ಹಾಗೂ ಪಾರದರ್ಶಕತೆಯ ಪರಿಮಿತಿಯಲ್ಲಿ ನಡೆಸಬೇಕಾಗುತ್ತದೆ ಎಂದು ಅಪರ ಮುಖ್ಯ ಚುನಾವಣಾಧಿಕಾರಿ ವೆಂಕಟೇಶ್ ಕುಮಾರ್ ತಿಳಿಸಿದರು. ಚುನಾವಣಾ ಮಾದರಿ ನೀತಿ ಸಂಹಿತೆ (ಎಂಸಿಸಿ) ಸಹ ಮುಖ್ಯ ಪಾತ್ರವಹಿಸುತ್ತದೆ. ಅಧಿಕಾರದಲ್ಲಿರುವ ಪಕ್ಷಗಳು ಯಾವುದೇ ಹೊಸ ಯೋಜನೆಗಳನ್ನು ಘೋಷಣೆ ಮಾಡುವಂತಿಲ್ಲ. ಸರ್ಕಾರದ ಕಾಮಗಾರಿಗಳಿಗೆ ಚಾಲನೆ ನೀಡುವಂತಿಲ್ಲ. ಆದರೆ ಬರ ಪರಿಹಾರದ ತುರ್ತು ಸೇವೆಗಳು, ಪ್ರಕೃತಿ ವಿಕೋಪಗಳ ಪರಿಹಾರ, ವೈದ್ಯಕೀಯ ಚಿಕಿತ್ಸೆ, ಮುಖ್ಯಮಂತ್ರಿಗಳ ಪರಿಹಾರ ನಿಧಿ ಜಾರಿಗೆ ಯಾವುದೇ ಅಡೆತಡೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜಕೀಯ ವ್ಯಕ್ತಿಗಳು ಚುನಾವಣಾ ಪ್ರಚಾರಕ್ಕೆ ಸರ್ಕಾರಿ ವಾಹನ ಹಾಗೂ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಬಳಕೆ ಮಾಡುವಂತಿಲ್ಲ. ಸರ್ಕಾರಿ ನೌಕರಿಯಲ್ಲಿ ಹೊಸ ಅಧಿಸೂಚನೆ, ನೇಮಕ, ವರ್ಗಾವಣೆ ಮಾಡುವಂತಿಲ್ಲ ಎಂದರು.

ಮಾಧ್ಯಮ ಪ್ರಮಾಣೀಕರಣ ಮೇಲುಸ್ತುವಾರಿ ಸಮಿತಿಯಲ್ಲಿ (ಎಂಸಿಎಂಸಿ) ಸುದ್ದಿವಾಹಿನಿಗಳು, ಸಾಮಾಜಿಕ ಜಾಲತಾಣಗಳಲ್ಲಿ ಬರುವ ಜಾಹಿರಾತುಗಳ ಪೂರ್ವಾನುಮತಿ ನಂತರ ಪ್ರಸಾರಕ್ಕೆ ಅನುಮತಿ ನೀಡಲಾಗುವುದು. ಸುದ್ದಿಗಾಗಿ ಕಾಸು (Paid News) ಪ್ರಕರಣಗಳ ಮೇಲೆ ಚುನಾವಣಾ ಆಯೋಗ ನಿಗಾವಹಿಸಿದ್ದು, ಏಕಪಕ್ಷೀಯ ವರದಿಗಳು ಮತ್ತು ಸಮಾಜದ ಶಾಂತಿ ಕದಡುವ ಸುದ್ದಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದರು. ಸುದ್ದಿಗಾಗಿ ಕಾಸು ಪ್ರಕರಣಗಳಲ್ಲಿ ಅಭ್ಯರ್ಥಿಗಳಿಗೆ 48 ಗಂಟೆಗಳೊಳಗೆ ನೋಟೀಸ್ ಜಾರಿ ಮಾಡಲಾಗುತ್ತದೆ. ಚುನಾವಣೆಗೆ ಮುದ್ರಣಗೊಳ್ಳುವ ಕರಪತ್ರ, ಸುಳ್ಳುಸುದ್ದಿ, ಜಾತಿಕೋಮುವಾದ ಪ್ರಚೋದಿಸುವ ಇತ್ಯಾದಿ ಸುದ್ದಿಗಳ ಮೇಲೆ ಆಯೋಗವು ಹದ್ದಿನ ಕಣ್ಣಿಟ್ಟಿದೆ. ಇದನ್ನು ಹಬ್ಬಿಸುವವರ ವಿರುದ್ಧವೂ ಕ್ರಮ ಜರುಗಿಸಲಾಗುವುದು ಎಂದರು.

ಕಾರ್ಯಾಗಾರದಲ್ಲಿ ಅಪರ ಮುಖ್ಯ ಚುನಾವಣಾಧಿಕಾರಿಗಳಾದ ಕೂರ್ಮಾರಾವ್, ಕಾರ್ಯನಿರತ ಮಾಧ್ಯಮ ಪ್ರತಿನಿಧಿಗಳಿಗೆ ಅಂಚೆ ಮತದಾನ ಸೇವೆ ಒದಗಿಸುವ ಮಾಹಿತಿ ನೀಡಿದರು. ಚುನಾವಣಾ ಕರ್ತವ್ಯದಲ್ಲಿರುವ 16 ತುರ್ತು ಸೇವೆಗಳಲ್ಲಿ ಮಾಧ್ಯಮ ಪ್ರತಿನಿಧಿಗಳ ಸೇವೆಯನ್ನು ಪರಿಗಣಿಸಲಾಗಿದೆ. ಕರ್ತವ್ಯನಿರತ ಮಾಧ್ಯಮ ಪ್ರತನಿಧಿಗಳು 12–ಡಿ ಅರ್ಜಿ ಸಲ್ಲಿಸಿ, ವಾರ್ತಾ ಇಲಾಖೆಯ ನೋಡಲ್ ಅಧಿಕಾರಿಗೆ ಸಲ್ಲಿಸಿದಲ್ಲಿ ಅವರಿಗೆ ಅಂಚೆ ಮತದಾನದ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು. ಆದರೆ 12–ಡಿ ಅರ್ಜಿ ಸಲ್ಲಿಸಿದ ಮಾಧ್ಯಮ ಪ್ರತಿನಿಧಿಗಳು ಅವರಿಗೆ ನಿಗದಿ ಪಡಿಸಿದ ದಿನಾಂಕದಂದೇ ಮತ ಚಲಾಯಿಸುವುದು ಕಡ್ಡಾಯವಾಗಿದ್ದು, ನಂತರ ಸಾರ್ವಜನಿಕವಾಗಿ ಚುನಾವಣೆ ನಡೆದಾಗ ಅವರಿಗೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾರ್ಯಾಗಾರದಲ್ಲಿ ಕರ್ನಾಟಕ ಚುನಾವಣಾ ಆಯೋಗದ ಐಟಿ ಮತ್ತು ಮಾಧ್ಯಮದ ವಿಶೇಷಾಧಿಕಾರಿ ಸೂರ್ಯಸೇನ್, ಸಾಮಾಜಿಕ ಜಾಲತಾಣ, ಫೇಸ್ಬುಕ್, ಟ್ವಿಟರ್, ಯುಟ್ಯೂಬ್, ರೀಲ್ಸ್ ಮತ್ತು ಬ್ಲಾಗ್‌ಗಳ ಮೇಲೂ ಆಯೋಗ ಗಮನ ಹರಿಸುತ್ತಿದ್ದು, ಸಾಮಾಜಿಕ ಜಾಲತಾಣದಲ್ಲಿ ಜಾಹಿರಾತು ಪ್ರಕಟವಾಗುವ ಮಾಹಿತಿಯನ್ನು ಪಡೆಯಲಿದೆ ಎಂದರು.

ಸುಳ್ಳು ಸುದ್ದಿ, ಜನರಿಗೆ ದಿಕ್ಕು ತಪ್ಪಿಸುವ ವಿವಿಧ ಪೋಸ್ಟ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ರಾಜಕೀಯ ವ್ಯಕ್ತಿಗಳು ತಮ್ಮ ಅಧಿಕೃತ ಫೇಸ್‌ಬುಕ್, ಟ್ವಿಟರ್ ಖಾತೆ ಹೊರತಾಗಿ ಇತರೆಡೆ ಬಿಂಬಿಸುವ ಜಾಹಿರಾತುಗಳ ಬಗ್ಗೆ ಮಾಹಿತಿ ನೀಡಬೇಕು. ಅಭ್ಯರ್ಥಿಗಳು, ರಾಜಕೀಯ ಪಕ್ಷದವರು, ಅಧಿಕಾರಿಗಳು ಚುನಾವಣಾ ಸಂದರ್ಭದಲ್ಲಿ ನಡೆದುಕೊಳ್ಳಬಹುದಾದ ರೀತಿಯ ಬಗ್ಗೆ ಪ್ರತ್ಯೇಕ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಅವರು ಅಧಿಕಾರಿಗಳು ಚುನಾವಣೆಯಲ್ಲಿ ಪಾರದರ್ಶಕತೆ ಮತ್ತು ಸತ್ಯನಿಷ್ಠೆ ಪ್ರಮಾಣಿಕತೆಯಿಂದ ತಮ್ಮ ವೃತ್ತಿ ಧರ್ಮವನ್ನು ಪಾಲಿಸಬೇಕು ಎಂದು ಕರೆ ನೀಡಿದರು. ಜಿಲ್ಲಾ ಮಟ್ಟದ ವಾರ್ತಾಧಿಕಾರಿಗಳು ಚುನಾವಣಾ ಮಾರ್ಗಸೂಚಿಗಳನ್ವಯ ಕರ್ತವ್ಯ ನಿರ್ವಹಿಸಬೇಕು. ಯಾವುದೇ ಚ್ಯುತಿ ಉಂಟಾಗದಂತೆ ಗಮನಹರಿಸಬೇಕು. ಚುನಾವಣೆಯು ರಾಷ್ಟ್ರೀಯ ಹಬ್ಬವಾಗಿದ್ದು, ಜಿಲ್ಲೆಯಲ್ಲಿನ ಮಾಧ್ಯಮ ಪ್ರತಿನಿಧಿಗಳು ಜಿಲ್ಲಾ ಮಟ್ಟದ ಮಾಹಿತಿ ಸಂವಹನ ಪ್ರಕ್ರಿಯೆಯಲ್ಲಿ ಸಾಕರಾತ್ಮಕ ಜವಾಬ್ದಾರಿ ನಿರ್ವಹಿಸಬೇಕು ಎಂದರು.

ಹಿರಿಯ ಪತ್ರಕರ್ತ ಈಶ್ವರ್ ದೈ ತೋಟ, ತಮ್ಮ ದೀರ್ಘ ವೃತ್ತಿಜೀವನದ ಅನುಭವಗಳನ್ನು ಹಂಚಿಕೊಳ್ಳುತ್ತಾ ಕಾರ್ಯಾಗಾರದಲ್ಲಿ ಹಲವಾರು ಹೊಸ ವಿಚಾರಗಳನ್ನು ತಿಳಿದುಕೊಳ್ಳುವ ಅವಕಾಶ ಲಭಿಸಿದ್ದಕ್ಕೆ ವಾರ್ತಾ ಇಲಾಖೆ ಮತ್ತು ಚುನಾವಣಾ ಆಯೋಗಕ್ಕೆ ಕೃತಜ್ಞತೆ ಸಲ್ಲಿಸಿದರು. ಒಟ್ಟಾರೆ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಮಾಧ್ಯಮ ಪ್ರತಿನಿಧಿಗಳಿಗೆ ಹಲವಾರು ಪ್ರಮುಖ ಅಂಶಗಳ ವಿಚಾರದಲ್ಲಿ ಹಿರಿಯ ಚುನಾವಣಾಧಿಕಾರಿಗಳಿಂದಲೇ ನಿಖರ ಮಾಹಿತಿ ಪಡೆಯಲು ಅನುಕೂಲವಾಯಿತು. ■


Downloaded From:www.kpscvaani.com



# ಜಲಕ್ಷಾಮ:

## ಪಾಠ ಕಲಿತರಷ್ಟೇ ಸುಸ್ಥಿರ ಪರಿಹಾರ

● ಎಂ.ಎಚ್. ಭಾರತಿ ಗೌಡ

**ನೀರಿನ ಉಳಿತಾಯದ ಬಗ್ಗೆ ಈಗಲಾದರೂ ಜನರು ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ನಿಶ್ಚಿತವಾಗಿ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ.**

**ಒಂ**ದೇ ಸಮನೆ ನಾಲ್ಕು ಗಂಟೆ ಮಳೆ ಸುರಿದರೆ ಜನವಸತಿ ಪ್ರದೇಶಗಳ ಮುಳುಗಡೆ! ಒಂದೇ ಒಂದು ವರ್ಷ ಮಳೆ ಕೈಕೊಟ್ಟರೆ ನೀರಿಗೆ ಹಾಹಾಕಾರ! ಇಂತಹ ದಾರುಣ ಪರಿಸ್ಥಿತಿಯನ್ನು ನಮ್ಮ ಬಹಳಷ್ಟು ಆಧುನಿಕ ನಗರಗಳು ಇಂದು ಎದುರಿಸುತ್ತಿವೆ.

ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಇಂತಹ ಪರಿಸ್ಥಿತಿ ಈಗ ತಲೆದೋರಿದೆ. ನಾಡಿನ ಬಹುತೇಕ ಪ್ರದೇಶ ಮಳೆಯ ಕೊರತೆಯಿಂದ ತೀವ್ರ ಬರಕ್ಕೆ ಸಿಲುಕಿದೆ. ಕುಡಿಯುವ ನೀರಿನ ಪೂರೈಕೆ, ರೈತಾಪಿ ಚಟುವಟಿಕೆ, ಉದ್ದಿಮೆಗಳ ನಿರ್ವಹಣೆ ಇವೆಲ್ಲವೂ ಸವಾಲಾಗಿ ಪರಿಣಮಿಸಿವೆ. ಅದರಲ್ಲೂ, ರಾಜಧಾನಿ ಬೆಂಗಳೂರಿನಲ್ಲಿ





Downloaded From:www.kpscvaani.com




ಈ ಸಮಸ್ಯೆಯ ತೀವ್ರತೆ ಎದ್ದುಕಾಣುವಂತಿದೆ. ನೀರಿನ ಕೊರತೆ ಎಂತಹ ಹೊಡೆತ ಕೊಟ್ಟಿದೆಯೆಂದರೆ, ನಗರದಲ್ಲಿನ 14,000 ಕೊಳವೆಬಾವಿಗಳ ಪೈಕಿ ಅರ್ಧಕ್ಕರ್ಧ, ಅಂದರೆ ಸುಮಾರು 7,000 ಕೊಳವೆಬಾವಿಗಳು ಅಂತರ್ಜಲವಿಲ್ಲದೆ ಸೊರಗಿವೆ.

ನೂರಾರು ಶುದ್ಧನೀರು ಪೂರೈಕೆ ಘಟಕಗಳು ಬಂದ್ ಆಗಿವೆ. ಒಂದು ಬಿಂದಿಗೆ ನೀರಿಗಾಗಿ ಗಂಟೆಗಟ್ಟಲೆ ಸರದಿಯಲ್ಲಿ ನಿಲ್ಲಬೇಕಾಗಿ ಬಂದಿದೆ. ತಮ್ಮಲ್ಲಿಗೆ ಬರುವ ಗ್ರಾಹಕರಿಗೆ ಲೋಟದಲ್ಲಿ ನೀರಿಟ್ಟು ಸ್ವಾಗತಿಸುತ್ತಿದ್ದ ಹೋಟೆಲ್‌ಗಳು ಈಗ ಖಾಲಿ ಲೋಟವನ್ನಷ್ಟೇ ಇಡುತ್ತಿವೆ. ಐಟಿ ಸೇರಿದಂತೆ ಕೆಲವು ವೃತ್ತಿಪರ ಉದ್ಯೋಗಿಗಳು ಪುನಃ "ವರ್ಕ್ ಫ್ರಮ್ ಹೋಮ್" ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ ಎನ್ನುತ್ತಿದ್ದಾರೆ. ಐಪಿಎಲ್ ಕ್ರಿಕೆಟ್ ಪಂದ್ಯಗಳನ್ನು ಬೆಂಗಳೂರಿನಲ್ಲಿ ನಡೆಸಬೇಕೋ ಅಥವಾ ಸ್ಥಳಾಂತರಿಸಬೇಕೋ ಎಂಬ ಆಲೋಚನೆ ಉಂಟಾಗಿದೆ.

ಕೈಗಾರಿಕೋದ್ದಿಮೆಗಳ ಉತ್ಪಾದನೆ ಹಿನ್ನಡೆ ಕಂಡಿದೆ. ಕಾರು ತೊಳೆಯಲು, ಗಾರ್ಡನಿಂಗ್ ಮಾಡಲು ಕುಡಿಯುವ ನೀರಿನ ಬಳಕೆ ನಿಷೇಧಿಸಲಾಗಿದೆ. ಈಗಾಗಲೇ ಬುಕ್ ಆಗಿರುವ ಸಮಾರಂಭಗಳನ್ನು ಹೇಗೆ ನಡೆಸುವುದು ಎಂಬುದು ಕಲ್ಯಾಣ ಮಂಟಪಗಳ ಚಿಂತೆಯಾಗಿದೆ. ನೀರಿಗಾಗಿ ಕೇವಲ ಬೋರ್ ವೆಲ್ ಅವಲಂಬಿಸಿರುವ ಅಪಾರ್ಟ್‌ಮೆಂಟ್‌ಗಳ ಸಹವಾಸವೇ ಬೇಡ ಎಂಬ ಅಳಲು ಕೆಲವರದ್ದಾದರೆ, ಸಂಸ್ಕರಿಸಿದ ನೀರಿನ ಬಳಕೆಗೆ ಮಾರ್ಗೋಪಾಯ ರೂಪಿಸಿ ಎಂಬುದು ಅಪಾರ್ಟ್‌ಮೆಂಟ್ ನಿರ್ವಹಣಾ ಸಮಿತಿಗಳ ಮನವಿಯಾಗಿದೆ. ಒಟ್ಟಿನಲ್ಲಿ ಯಾರೇ ಫೋನ್ ಮಾಡಿದರೂ, ನೀರಿನ ಸಮಸ್ಯೆ ಕುರಿತ ಮಾತುಕತೆ ಸಾಮಾನ್ಯವಾಗಿಬಿಟ್ಟಿದೆ. ಒಟ್ಟಾರೆ, ಬೇಸಿಗೆಯ ಆರಂಭದಲ್ಲೇ ನಗರದ ಜನಜೀವನದ ಚಿತ್ರಣ ಬದಲಾಗಿಬಿಟ್ಟಿದೆ. ಈಗಲೇ ಹೀಗಾದರೆ, ಮುಂದಿನ ಏಪ್ರಿಲ್, ಮೇ ತಿಂಗಳುಗಳನ್ನು ಹೇಗೆ ನಿಭಾಯಿಸುವುದೋ ಎಂಬ ಆತಂಕ ಮೂಡಿದೆ.

ಜೀವಜಲಕ್ಕೆ ಸಂಬಂಧಿಸಿದ ಈ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಸರಣಿ ಸಭೆಗಳು ನಡೆಯುತ್ತಿವೆ. ನೀರು ಪೂರೈಸುವ ಟ್ಯಾಂಕರ್‌ಗಳ ನೋಂದಣಿ, ಟ್ಯಾಂಕರ್ ನೀರಿಗೆ ಸರ್ಕಾರದಿಂದ ದರ ನಿಗದಿ, ಅಗತ್ಯವಲ್ಲದ ಕೆಲಸಗಳಿಗೆ ಕುಡಿಯುವ ನೀರು ಬಳಸಿದರೆ ದಂಡ, ನಿರ್ಮಾಣ ಕಾಮಗಾರಿಗಳಿಗೆ ಕುಡಿಯುವ ನೀರು ಬಳಸುವುದಕ್ಕೆ ನಿರ್ಬಂಧ, ಈಜುಕೊಳಗಳಿಗೆ ನೀರು ತುಂಬಿಸಲು ಕುಡಿಯುವ ನೀರಿನ ಬಳಕೆಗೆ ತಡೆ, ಬೋರ್‌ವೆಲ್ ಕೊರೆಸಲು ಜಲಮಂಡಳಿಯ ಅನುಮತಿ ಕಡ್ಡಾಯಗೊಳಿಸುವಂತಹ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಏನೇ ಇರಲಿ, ಇವೆಲ್ಲ ಸದ್ಯದ ಸಂಕಷ್ಟವನ್ನು ಶಮನಗೊಳಿಸಲು ತೆಗೆದುಕೊಳ್ಳುತ್ತಿರುವ ಕ್ರಮಗಳಾಗಿವೆ. ಆದರೆ, ಈ ಆಪತ್ತಿನ ಸಂದರ್ಭವು ನೀರಿನ ವಿಷಯದಲ್ಲಿ ಶಾಶ್ವತ ಪರಿಹಾರ ಒದಗಿಸುವ ಸುಸ್ಥಿರತೆ ಬಗ್ಗೆಯೂ ನಾವು ಪಾಠಗಳನ್ನು ಕಲಿಯಬೇಕಾದ ಜರೂರನ್ನು ಮನಗಾಣಿಸಿದೆ. ನಮ್ಮ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಸುಸ್ಥಿರತೆಗೆ ಗಮನ ಕೊಡದಿರುವುದೇ ಇಂತಹ ಶೋಚನೀಯ ಪರಿಸ್ಥಿತಿಗೆ ಕಾರಣ ಎಂಬ ತಜ್ಞರು ಮತ್ತು ಅನುಭವಿಗಳ ಅಭಿಪ್ರಾಯವನ್ನು ಮನನ ಮಾಡಿಕೊಂಡು ನಾವು ಮುಂದಿನ ಹೆಜ್ಜೆಗಳನ್ನು ಇರಿಸುವ ಬಗ್ಗೆ ಆಲೋಚಿಸಬೇಕಾಗಿದೆ.


Downloaded From:www.kpscvaani.com

**ನಗರ ಪ್ರದೇಶಗಳಲ್ಲಿ ನೀರು ಪೋಲು ತಡೆಯಲು ಕೆಲವು ಸಲಹೆಗಳು:**

- ಪೈಪುಗಳು, ಕೊಳವೆಗಳಲ್ಲಿ ನೀರು ಸೋರಿಕೆಗೆ ಅವಕಾಶವಾಗದಂತಹ ಗುಣಮಟ್ಟದ ಪ್ಲಂಬಿಂಗ್ ಉಪಕರಣಗಳನ್ನು ಅಳವಡಿಸಬೇಕು.
- ಮಳೆ ನೀರಿನ ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳಲು ಸ್ವಯಂ ಪ್ರೇರಿತವಾಗಿ ಮುಂದಾಗಬೇಕು.
- ಗಾರ್ಡನಿಂಗ್‌ಗೆ ಸಂಸ್ಕರಿತ ನೀರು ಬಳಸಲು ಒತ್ತು ನೀಡಬೇಕು.
- ಸ್ಕೂಟರ್, ಕಾರು ಇನ್ನಿತರ ವಾಹನಗಳನ್ನು ತೊಳೆಯಲು ಬಕೆಟ್ ನೀರಿನಲ್ಲಿ ಬಟ್ಟೆ ಅದ್ದಿ ಒರೆಸಿದರೆ ಕಡಿಮೆ ನೀರು ಸಾಕಾಗುತ್ತದೆ.
- ಶೌಚಾಲಯಗಳು ಸ್ವಚ್ಛವಾಗಿರುವುದು ಮುಖ್ಯ. ಆದರೆ ಮೂತ್ರ ವಿಸರ್ಜನೆಗೆ ಸಂಪೂರ್ಣವಾಗಿ ಫ್ಲಷ್ ಮಾಡುವುದರಿಂದ ಹೆಚ್ಚು ನೀರು ವೆಚ್ಚವಾಗುತ್ತದೆ. ಆದ್ದರಿಂದ ಒಂದು ಚಿಕ್ಕ ಬಕೆಟ್ ಅನ್ನು ಬಳಸುವುದು ಸೂಕ್ತ.
- ಪಾತ್ರೆ ತೊಳೆಯುವಾಗ, ಬ್ರಷ್ ಮಾಡುವಾಗ ನಲ್ಲಿ ನೀರು ಸುರಿದು ಹೋಗದಂತೆ ಕಾಳಜಿ ವಹಿಸಬೇಕು.
- ವಾಷಿಂಗ್ ಮಷೀನ್, ಡಿಷ್ ವಾಷರ್‌ಗಳನ್ನು ಖರೀದಿಸುವಾಗ, ಅವು ಕಡಿಮೆ ನೀರಿನಲ್ಲಿ ಕ್ಷಮತೆಯಿಂದ ಕಾರ್ಯಾಚರಿಸಬಲ್ಲವೇ ಎಂಬುದನ್ನು ಗಮನಿಸಿಕೊಳ್ಳಬೇಕು. ಅವುಗಳನ್ನು ಬಳಸುವಾಗಲೂ ಕಡಿಮೆ ನೀರು ಬಳಕೆಯ ಆಪ್ಷನ್ ಉಪಯೋಗಿಸಿಕೊಳ್ಳಬೇಕು.
- ಆಕ್ವಗಾರ್ಡ್‌ನಿಂದ ಸೋರಿಹೋಗುವ ನೀರನ್ನು ಶೇಖರಿಸಿಕೊಂಡು ಮನೆಯಲ್ಲಿ ಬೆಳೆಸಿರುವ ಗಿಡಗಳಿಗೆ ಹಾಕಬೇಕು.

ದೊಡ್ಡ ದೊಡ್ಡ ಅಣೆಕಟ್ಟುಗಳ ನಿರ್ಮಾಣ, ದೂರದ ಪ್ರದೇಶಗಳಿಂದ ಪೈಪುಗಳ ಮೂಲಕ ನಗರಗಳಿಗೆ ನೀರು ಪೂರೈಕೆಯಂತಹ ವ್ಯವಸ್ಥೆಗಳು ಸುಸ್ಥಿರ ಮಾದರಿಗಳಲ್ಲ ಎಂಬುದು ಈಗ ಪ್ರಪಂಚದೆಲ್ಲೆಡೆ ಸಾಬೀತಾಗಿದೆ. ಆದ್ದರಿಂದ, ಮೊದಲಿಗೆ ನಾವು ನಿಸರ್ಗವು ಮಳೆಯ ರೂಪದಲ್ಲಿ ನೀಡುವ ನೀರನ್ನು ಸಂರಕ್ಷಿಸಿಕೊಳ್ಳುವ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಏಕೆಂದರೆ, ಮಳೆಯ ರೂಪದಲ್ಲಿ ನಮಗೆ ಸಿಗುವ ನೀರು ಅತ್ಯಂತ ಪರಿಶುದ್ಧವಾದ ನೀರಾಗಿರುತ್ತದೆ. ಕೊಳವೆಬಾವಿಗಳನ್ನು ತೋಡಿಸಿ ಅಂತರ್ಜಲದಿಂದ ಸೆಳೆಯುವ ನೀರು ಎಷ್ಟೇ ಚೆನ್ನಾಗಿದೆ ಎಂದು ನಾವು ಅಂದುಕೊಂಡರೂ, ಅದರಲ್ಲಿ ಒಂದಿಷ್ಟಾದರೂ ಅನಪೇಕ್ಷಿತ ಲವಣಾಂಶಗಳು ಇದ್ದೇ ಇರುತ್ತವೆ. ಈ ನೀರು ಪರಿಶುದ್ಧತೆಯಲ್ಲಿ ಮಳೆನೀರಿಗೆ ಸರಿಸಮಾನ ಆಗಲಾರದು. ಹೀಗಾಗಿ, ಇಂತಹ ಪರಿಶುದ್ಧ ಮಳೆನೀರನ್ನು ಎಷ್ಟು ಪ್ರಮಾಣದಲ್ಲಿ ಹಿಡಿದಿಟ್ಟುಕೊಳ್ಳುತ್ತೇವೆಯೋ ಅಷ್ಟರಮಟ್ಟಿಗೆ ಅದು ಸುಸ್ಥಿರತೆ ಸಾಧಿಸಲು ಸಹಾಯಕವಾಗುತ್ತದೆ.

ಸುರಿಯುವ ಮಳೆ ನೀರನ್ನು ಭೂಮಿಯ ಅಂತರ್ಜಲಕ್ಕೆ ಸೇರುವಂತೆ ಮಾಡುವುದೇ ಅದನ್ನು ಹಿಡಿದಿಟ್ಟುಕೊಳ್ಳುವ ಅತ್ಯಂತ ಪರಿಣಾಮಕಾರಿ ವಿಧಾನವಾಗಿರುತ್ತದೆ. ಗಿಡಮರಗಳು ಸಾಕಷ್ಟು ಪ್ರಮಾಣದಲ್ಲಿರುವಂತೆ ಗಮನವಹಿಸುವುದು, ಹಸಿರು ಹುಲ್ಲಿನ ಪ್ರದೇಶಗಳ ಸಂರಕ್ಷಣೆ, ಒಡ್ಡುಗಳ ನಿರ್ಮಾಣ, ನೀರಿನ ಇಂಗುಗುಂಡಿಗಳ ನಿರ್ಮಾಣ, ಮಳೆನೀರು ಹರಿಯುವ ಕಾಲುವೆಗಳ ಸಮರ್ಪಕ ನಿರ್ವಹಣೆ, ಕೆರೆಕಟ್ಟೆಗಳಿಗೆ ಯಾವುದೇ ರೀತಿಯ ತ್ಯಾಜ್ಯ, ಪ್ಲಾಸ್ಟಿಕ್ ಒಳಗೊಂಡು ಯಾವುದೇ ರೀತಿಯ ಮಲಿನಕಾರಕಗಳು ಸೇರದಂತೆ ಕಾಳಜಿ ವಹಿಸುವುದು, ಜಲಚರಗಳಿಗೆ ಕುತ್ತು ಬಾರದಂತೆ ನಿಗಾ ವಹಿಸುವುದು ಇವೆಲ್ಲವೂ ಇದರಲ್ಲಿ ಮುಖ್ಯವಾಗುತ್ತವೆ. ಇದರ ಜೊತೆಗೆ, ನಗರಗಳು ಹಾಗೂ ಹೆದ್ದಾರಿಗಳಲ್ಲಿ ರಸ್ತೆ ನಿರ್ಮಾಣದ ವೇಳೆ ಮಳೆ ನೀರನ್ನು ಭೂಮಿಗೆ ಇಂಗಿಸಲು ವ್ಯವಸ್ಥೆ, ಕೀಟ, ಪಕ್ಷಿ ಇನ್ನಿತರ ಜೀವ ಜಂತುಗಳಿಗೆ ಆಸರೆ ನೀಡುವಂತಹ ಮರಗಳ ಪೋಷಣೆ, ಕಟ್ಟಡಗಳಿಗೆ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಕೆಯಂತಹ ಅಂಶಗಳಿಗೆ ಒತ್ತುಕೊಡಬೇಕಾಗುತ್ತದೆ. ಹಾಗೆಯೇ, ವಾಣಿಜ್ಯೋದ್ಯಮಗಳ ಮತ್ತು ಮನೆಗಳ ತ್ಯಾಜ್ಯ ನೀರಿನ ಸೂಕ್ತ ಸಂಸ್ಕರಣೆ ಹಾಗೂ ಮರುಬಳಕೆಯೂ ಪ್ರಮುಖ ಪಾತ್ರ ವಹಿಸುತ್ತದೆ.

ಉದ್ದಿಮೆಗಳು, ವಾಹನ ಇತ್ಯಾದಿಗಳಿಂದ ಇಂಗಾಲದ ಹೊರಸೂಸುವಿಕೆ, ಪರಿಸರದಲ್ಲಿ ಹಸಿರು ಹೊದಿಕೆ ಪ್ರಮಾಣ, ಭೂಮಿ ಬಿಸಿಯಾಗುವುದು, ಕೆಲವಡೆ ತೀವ್ರ ಪ್ರವಾಹ, ಇನ್ನು ಕೆಲವೆಡೆ ಭೀಕರ ಬರ, ಸಮರ್ಪಕ ತ್ಯಾಜ್ಯ ವಿಲೇವಾರಿ, ಭೂಮಿ ಸವಳಾಗುವಿಕೆ, ಪರಿಸರಸ್ನೇಹಿ ಸಾರ್ವಜನಿಕ ಸಂಚಾರ ವ್ಯವಸ್ಥೆ, ಜಲಮೂಲಗಳ ಶುದ್ಧತೆಯ ಸಂರಕ್ಷಣೆ, ಸಮುದ್ರದ ಮೇಲ್ಮೈ ತಾಪಮಾನ ಸರಾಸರಿಗಿಂತ ಹೆಚ್ಚಾಗುವ ದುಷ್ಪರಿಣಾಮ, ಮಣ್ಣಿನ ಫಲವತ್ತತೆ, ಜೀವವೈವಿಧ್ಯದ ಉಳಿವು ಇವು ಪ್ರತ್ಯೇಕ ಘಟಕಗಳಲ್ಲ; ಇವೆಲ್ಲವೂ ಪರಸ್ಪರ ಒಂದಕ್ಕೊಂದು ಹೆಣೆದುಕೊಂಡು ಭೂಮಿಯ ಮೇಲೆ ಜೀವಸಂಕುಲಗಳನ್ನು ಪೋಷಿಸುತ್ತಿವೆ ಎಂಬುದನ್ನು ದೃಷ್ಟಿಯಲ್ಲಿರಿಸಿಕೊಂಡು ಯೋಜನೆಗಳನ್ನು ಅನುಷ್ಠಾನಗೊಳಿಸಿದಾಗಲಷ್ಟೇ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗುತ್ತದೆ. ಇಂತಹ ಸುಸ್ಥಿರ ಅಭಿವೃದ್ಧಿಯಷ್ಟೇ ನಮಗೆ ಪ್ರವಾಹಗಳನ್ನು ಹಾಗೂ ಬರಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ನೀಡುತ್ತದೆ. ನಮ್ಮ ನೀತಿ ನಿರೂಪಕರು ಅಭಿವೃದ್ಧಿಗೆ ಬುನಾದಿ ಹಾಕುವಾಗ ಇವೆಲ್ಲವನ್ನೂ ಗಮನದಲ್ಲಿರಿಸಿಕೊಳ್ಳಬೇಕು. ಅದರಲ್ಲೂ ಸರ್ಕಾರವು "ಬ್ರ್ಯಾಂಡ್ ಬೆಂಗಳೂರು" ಸೃಷ್ಟಿಯನ್ನು ಸಾಕಾರಗೊಳಿಸುವ ಸಂಕಲ್ಪ ಮಾಡಿರುವಾಗ ಇಲ್ಲಿನ ವಾಸಯೋಗ್ಯತೆಯ ಮಟ್ಟ ಹೆಚ್ಚಿಸಲು ಈ ಅಂಶಗಳಿಗೆ ಪ್ರಧಾನ ಆದ್ಯತೆ ಕೊಡಬೇಕಾಗುತ್ತದೆ.

ಕೆಲವು ವರ್ಷಗಳ ಹಿಂದೆ ಇಡೀ ಜಗತ್ತನ್ನು ಕಾಡಿದ ಕೊರೊನಾ ಮಹಾಮಾರಿಯು ನೈರ್ಮಲ್ಯ ಪಾಲನೆ ಎಷ್ಟು ಮುಖ್ಯ ಹಾಗೂ ವ್ಯವಸ್ಥೆಯಲ್ಲಿ ಆರೋಗ್ಯ ಮೂಲಸೌಕರ್ಯದ ಮಹತ್ವವೇನು ಎಂಬುದನ್ನು ನಮಗೆ ಮನಗಾಣಿಸಿತು. ಈಗಿನ ನೀರಿನ ಕೊರತೆಯು ಅದೇ ರೀತಿ ನಮಗೆ ಜಲಸಂಪನ್ಮೂಲ ಕಾಪಿಟ್ಟುಕೊಳ್ಳುವ ಪ್ರಾಮುಖ್ಯದ ಬಗ್ಗೆ ಎಚ್ಚರಿಕೆಯ ಗಂಟೆ ಮೊಳಗಿಸುತ್ತಿದೆ. ಅದಕ್ಕೆ ಹೇಗೆ ಸ್ಪಂದಿಸುತ್ತೇವೆ ಎಂಬುದು ನಮ್ಮ ಮುಂಬರುವ ದಿನಗಳ ಭವಿಷ್ಯವನ್ನು ನಿರ್ಧರಿಸಲಿದೆ. ■


Downloaded From:www.kpscvaani.com



# ಭೂಮಿಯ ಸುಸ್ಥಿರ ಆರೋಗ್ಯ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ

ಮಹಾಂತೇಶ .ಅ . ಗುಡೋಡಗಿ.

**ಇರುವುದೊಂದೆ ಭೂಮಿಯನ್ನು ನಮ್ಮ ಮುಂದಿನ ಪೀಳಿಗೆಯವರಿಗಾಗಿ ಸುಸ್ಥಿರವಾಗಿರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ**

**ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ**
**ಎಳ್ಳು ಜೀರಿಗೆ ಬೆಳೆಯೊಳ / ಭೂಮಿತಾಯ**

**ಎದ್ದೋಂದು ಘಳಿಗೆ ನೆನೆದೇನಾ....** ಎಂದು ಜನಪದರು ಈಡೀ ಜೀವ ಸಂಕುಲಕ್ಕೆ ಆಶ್ರಯ ದಾತೆಯಾಗಿರುವ ಭೂಮಿತಾಯಿಯನ್ನು ಎದ್ದ ಕೂಡಲೇ ನೆನೆಯಬೇಕು ಎಂದು ಹಾಡಿ ಹೊಗಳಿದ್ದಾರೆ. " ಕೋಟಿ ಕೋಟಿ ಇದ್ರೂನು ಹೊಟ್ಟೆಗೆ ತಿನ್ನೋದು ಅನ್ನಾನೆ" ಎನ್ನುವ ಗಾದೆ ಮಾತಿನಂತೆ ಪ್ರಪಂಚದ ಸಕಲ ಜೀವರಾಶಿಯು ಬದುಕಲು ಭೂಮಿಯನ್ನೇ ಅವಲಂಬಿಸಿದೆ. ಶೇಕಡಾ 95 ರಷ್ಟು ಆಹಾರ ಭೂಮಿಯಿಂದಲೇ ದೊರೆಯುತ್ತದೆ.

ಆದರೆ ಮನುಷ್ಯನ ತೀರದ ಹಣದ ದಾಹಕ್ಕೆ ಭೂಮಿಯ ಒಡಲು ಬರಿದಾಗುತ್ತಿದೆ. ಸಾವಿರಾರು ವರ್ಷಗಳಿಂದ ತಲೆ ಎತ್ತಿ ನಿಂತಿದ್ದ ಬೆಟ್ಟ ಗುಡ್ಡಗಳು ಕರಗುತ್ತಿವೆ. ಖನಿಜ ಸಂಪತ್ತು ಬರಿದಾಗುತ್ತಿದೆ. ನಿಸರ್ಗದತ್ತ ಕಾಡನ್ನು ಕಡಿದು ಕಾಂಕ್ರಿಟ್ ಕಾಡು ನಿರ್ಮಿಸಲು ಹೊರಟಿರುವ ಮನುಜ ಇಂದು ಅರಣ್ಯ ಸಂಪತ್ತಿಗೂ ಕೊಳ್ಳಿ ಇಟ್ಟು, ತನ್ನ ವಿಕೃತಿಯನ್ನು ಮೆರೆಯುತ್ತಿದ್ದಾನೆ. ಅರಣ್ಯ ನಾಶದಿಂದಾಗಿ ಅನೇಕ ವನ್ಯ ಮೃಗಗಳ ಮಾರಣಹೋಮವಾಗತೊಡಗಿದೆ. ಮರಗಳ ವಿನಾಶದಿಂದ ಮಳೆಯಾಗದೆ ಭೂಮಿಯ ತಾಪಮಾನ ಹೆಚ್ಚಾಗತೊಡಗಿದೆ.

ಇತ್ತೀಚಿನ ದಿನಗಳಲ್ಲಿ ಮಿತಿಮೀರಿದ ವಾಹನಗಳ ಬಳಕೆ, ಅದರಿಂದ ಬರುವ ಹೊಗೆ ಹಾಗೂ ಕಾರ್ಖಾನೆಗಳಿಂದ ಬರುವ ಅತೀವ ಹೊಗೆ, ಕೃಷಿ ತ್ಯಾಜ್ಯಗಳನ್ನು ಸುಟ್ಟಾಗ ಅದರಿಂದ ಹೊರಹೊಮ್ಮುವ ಹೊಗೆ, ಹೀಗೆ ವಿವಿಧ ಮೂಲಗಳಿಂದ ಬರುವ ಹೊಗೆಯಿಂದ ಇಂಗಾಲದ ಡೈಆಕ್ಸೈಡ್ ಪ್ರಮಾಣ ಹೆಚ್ಚಾಗಲು ಕಾರಣವಾಗಿದೆ. ಇಂಗಾಲದ ಡೈಆಕ್ಸೈಡ್‌ನ ಪ್ರಮಾಣ ವಾತಾವರಣದಲ್ಲಿ ಹೆಚ್ಚಾದರೆ ಇದು ಸೂರ್ಯನಿಂದ ಬರುವ ಕಿರಣಗಳು ಭೂಮಿಗೆ ತಾಗಿ ಪ್ರತಿಫಲನಗೊಳ್ಳುವಾಗ ಆ ಕಿರಣಗಳನ್ನು



Downloaded From:www.kpscvaani.com

ತಡೆಹಿಡಿಯುವುದರಿಂದ ಭೂಮಿಯ ತಾಪಮಾನ ಹೆಚ್ಚಾಗತೊಡಗಿದೆ. ಅಲ್ಲದೆ ಓಜೋನ್ ಪದರು ರಂಧ್ರಗೊಂಡು ಸೂರ್ಯನ ನೇರಳಾತೀತ ಕಿರಣಗಳು ನೇರವಾಗಿ ಭೂಮಿಗೆ ತಾಗುವುದರಿಂದ ಜೀವಸಂಕುಲಕ್ಕೆ ಹಾನಿಯಾಗುವುದಲ್ಲದೆ ಭೂಮಿಯ ತಾಪಮಾನ ಏರತೊಡಗಿದೆ.

ಈ ವರ್ಷವಂತೂ ವಾಡಿಕೆಯಷ್ಟು ಮಳೆಯಾಗದ ಕಾರಣ ಬಿಸಿಲಿನ ಝಳಕ್ಕೆ ಜನ ತತ್ತರಿಸಿದ್ದಾರೆ. ಹೀಗೆಯೇ ತಾಪಮಾನ ಮುಂದುವರೆದರೆ ಮುಂದಿನ ಕೆಲವು ವರ್ಷಗಳಲ್ಲಿ ಕೊರೊನಾ ಸಂದರ್ಭದಲ್ಲಿ ಲಾಕ್‌ಡೌನ್ ಆಗಿ ಮನೆಯಲ್ಲಿ ಕುಳಿತಂತೆ ಬಿಸಿಲಿನ ತಾಪಕ್ಕೆ ಹೊರಬರಲಾಗದೇ ಮನೆಯಲ್ಲಿಯೇ ಕೂಡುವ ಪರಿಸ್ಥಿತಿ ಬಂದರು ಬರಬಹುದು. ಪರಿಸ್ಥಿತಿ ಕೈಮಿರುವ ಮುನ್ನವೇ ಎಚ್ಚರಿಕೆ ವಹಿಸಬೇಕಿದೆ. ಭೂಮಿಯ ತಾಪಮಾನ ಕಡಿಮೆ ಮಾಡಲು ಇರುವ ಎಲ್ಲ ಕ್ರಮ ಕೈಗೊಳ್ಳಬೇಕಿದೆ. ಭೂತಾಯಿಯ ಮಡಿಲನ್ನು ತಣ್ಣಗಿರಿಸಬೇಕಿದೆ.

ಭಾರತವು ಕೃಷಿ ಪ್ರಧಾನವಾದ ರಾಷ್ಟ್ರ. ಇಲ್ಲಿ ಬಹುತೇಕ ಜನರು ಕೃಷಿಯನ್ನು ತಮ್ಮ ಪ್ರಮುಖ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. "ವಕ್ಕಲಿಗ ವಕ್ಕದಿರೆ ಬಿಕ್ಕುವುದು ಜಗವೆಲ್ಲ" ಎನ್ನುವಂತೆ ಮಳೆಯ ಪ್ರಮಾಣ ಕಡಿಮೆಯಾದರೆ ರೈತ ಬೆಳೆ ಬೆಳೆಯಲಾರ. ಬೆಳೆ ಇಲ್ಲದೆ ಧಾನ್ಯಗಳ ಉತ್ಪಾದನೆ ಕಡಿಮೆಯಾಗಿ ಆಹಾರದ ಕೊರತೆ ಉಂಟಾಗುವುದು. ಆದ್ದರಿಂದ ಸಕಾಲಕ್ಕೆ ಮಳೆಯಾಗಬೇಕಾದರೆ ಪ್ರಕೃತಿಯ ಸಮತೋಲನ ಕಾಯ್ದುಕೊಳ್ಳುವುದು ಅನಿವಾರ್ಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಭೂಮಿಗೆ ಅನೇಕ ರೀತಿಯಲ್ಲಿ ರಾಸಾಯನಿಕಗಳ ಸೇರ್ಪಡೆಯಾಗಿ ಭೂ ಮಾಲಿನ್ಯ ಉಂಟಾಗುತ್ತಿದೆ. ಕಾರ್ಖಾನೆಗಳಿಂದ ಬರುವ ಮಲಿನಕಾರಕ ರಾಸಾಯನಿಕಗಳು ಭೂಮಿಯನ್ನು ಸೇರುತ್ತಿವೆ. ಮಾನವ ಆಧುನಿಕ ಸ್ಪರ್ಷಕ್ಕೆ ಒಡ್ಡಿಕೊಂಡಂತೆ ವಿವಿಧ ರೀತಿಯ ರಾಸಾಯನಿಕಗಳನ್ನು ಬಳಸತೊಡಗಿದ್ದಾನೆ. ಚರಂಡಿಗಳಿಂದ ಬರುವ ರಾಸಾಯನಿಕಯುಕ್ತ ಮಲಿನ ನೀರು ನದಿ ಹಳ್ಳ ಕೊಳ್ಳಗಳಿಗೆ ಸೇರತೊಡಗಿದೆ. ಅದೇ ರಾಸಾಯನಿಕಯುಕ್ತ ನದಿಯ ನೀರನ್ನು ಬೆಳೆಗಳಿಗೆ ಹಾಯಿಸುವುದರಿಂದ ನದಿ ಪಾತ್ರದ ಜಮೀನುಗಳು ಬಂಜರು ಭೂಮಿಯಾಗಿ ನಿರ್ಮಾಣವಾಗತೊಡಗಿವೆ.

ರೈತರು ಭೂಮಿಯಲ್ಲಿ ಹೆಚ್ಚು ಫಸಲು ಪಡೆಯುವ ಭರಾಟೆಯಲ್ಲಿ ಇಂದು ಅತಿಯಾಗಿ ರಸಾಯನಿಕಗಳನ್ನು ಭೂಮಿಗೆ ಸೇರ್ಪಡೆ ಮಾಡುತ್ತಿದ್ದಾರೆ. ಜೈವಿಕ ಗೊಬ್ಬರದ ಹೊರತಾಗಿ ಅಧಿಕ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರದ ಬಳಕೆಯಾಗತೊಡಗಿದೆ. ಇದರಿಂದ ಭೂಮಿಯಲ್ಲಿನ ಸಾವಯವ ಇಂಗಾಲದ ಪ್ರಮಾಣ ಕಡಿಮೆಯಾಗಿ ಭೂಮಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ. ರೈತರು ಬೀಜ ಬಿತ್ತನೆ ಮಾಡಿದಾಗಿನಿಂದ ಹಿಡಿದು ಫಸಲು ಬರುವವರೆಗೆ ರಾಸಾಯನಿಕ ಸಿಂಪಡನೆ ಮಾಡತೊಡಗಿದ್ದಾರೆ. ಇದರಿಂದ ಭೂಮಿಯು ವಿಷಮಯವಾಗುವುದರೊಂದಿಗೆ ರೈತ ಮಿತ್ರನಾದ ಎರೆಹುಳುಗಳು, ಜೈವಿಕ ಸೂಕ್ಷ್ಮಾಣು ಜೀವಿಗಳು ನಾಶಹೊಂದುತ್ತಿವೆ. ಆಹಾರ ಪದಾರ್ಥಗಳು ವಿಷಮಯಗೊಂಡು ಕ್ರಮೇಣ ಮನುಷ್ಯನ ದೇಹವನ್ನು ಸೇರತೊಡಗಿವೆ. ಆದ್ದರಿಂದ ರೈತರು ಸಾವಯವ ಕೃಷಿಯ ಕಡೆಗೆ ಮುಖಮಾಡಬೇಕಿದೆ. ಭೂಮಿಯ ಸ್ವಾಸ್ಥ್ಯವನ್ನು ಕಾಪಾಡಬೇಕಿದೆ. ಇರುವುದೊಂದೇ ಭೂಮಿಯನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಬೇಕಿದೆ. ಪುರಂದರದಾಸರ ವಾಣಿಯಂತೆ

**"ಮಣ್ಣಿಂದ ಕಾಯ ಮಣ್ಣಿಂದ, ಮಣ್ಣಿಂದ ಸಕಲ ದರುಶನಗಳೆಲ್ಲ,**

**ಮಣ್ಣಿಂದ ಸಕಲ ವಸ್ತುಗಳೆಲ್ಲ,**

**ಮಣ್ಣು ಬಿಟ್ಟವರಿಗೆ ಆಧಾರವಿಲ್ಲ**
**ಅಣ್ಣಗಳಿರೆಲ್ಲರು ಕೇಳಿರಯ್ಯ"**

ಎಂಬುದನ್ನು ಮನಗಾಣಬೇಕಿದೆ. ಮನುಷ್ಯನಿಗೂ ಹಾಗೂ ಮಣ್ಣಿಗೆ ಒಂದು ಬಿಡಿಸಲಾರದ ಸಂಬಂಧವಿದೆ. ನಾವು ಬಿಟ್ಟರೂ ಮಣ್ಣು ನಮ್ಮನ್ನು ಬಿಡಲಾರದು. ಕೊನೆಗೆ ಲೀನವಾಗಬೇಕಾದದ್ದು ಮಣ್ಣಿನಲ್ಲೇ ಎಂಬುದನ್ನು ಅರಿತು ನಡೆಯಬೇಕಿದೆ.

**"ಪ್ಲಾನೆಟ್ ವರ್ಸಸ್ ಪ್ಲಾಸ್ಟಿಕ್"** ಎನ್ನುವ ತತ್ವದಡಿಯಲ್ಲಿ 2024 ರ ವಿಶ್ವ ಭೂ ದಿನವನ್ನು ಆಚರಿಸಲಾಗುತ್ತಿದೆ. ಆಧುನಿಕ ಜಗತ್ತು ಪ್ಲಾಸ್ಟಿಕ್ ಮಯವಾಗತೊಡಗಿದೆ. ದಿನ ಬಳಕೆಯ ವಸ್ತುಗಳನ್ನು ಹಿಡಿದು ಎಲ್ಲ ಕ್ಷೇತ್ರಗಳಲ್ಲಿ ಪ್ಲಾಸ್ಟಿಕ್ ತಾನೇ ಮುಂದೆಂದು ಬೀಗುತ್ತಿದೆ. ಎಲ್ಲ ತರಹದ ವಸ್ತುಗಳ ಕಂಪನಿ ಮಾರಾಟಗಾರರು ಪೈಪೋಟಿಗಿಳಿದು ಜನರನ್ನು ತಮ್ಮತ್ತ ಸೆಳೆಯಲು ವಿವಿಧ ರೀತಿಯ ಆಕರ್ಷಕವಾದ ಪ್ಲಾಸ್ಟಿಕ್ ಬಳಸುತ್ತಿದ್ದಾರೆ. ಕುರ್‌ಕುರೆ, ಚಿಪ್ಸ್, ಚಾಕಲೇಟ್, ಪ್ಲಾಸ್ಟಿಕ್ ಬಾಟಲ್ಸ್, ಸ್ಟ್ರಾಗಳು, ಒಂದು ಬಾರಿ ಉಪಯೋಗಿಸಿ ಬಿಸಾಡುವ ಪ್ಲಾಸ್ಟಿಕ್ ಬ್ಯಾಗ್ ಹಾಗೂ ಗ್ಲಾಸ್‌ಗಳು ಎಲ್ಲೆಂದರಲ್ಲಿ ಬಿದ್ದು ಭೂಮಿ ಸೇರಿ ಹಲವಾರು ವರ್ಷ ಕೊಳೆಯದೆ ಹಾಗೆಯೇ ಉಳಿದು ಬಿಡುತ್ತವೆ. ಸಿಟಿ ಪ್ರದೇಶಗಳಿಂದ ನೂರಾರು ಟನ್‌ಗಟ್ಟಲೆ ಇ-ವೇಸ್ಟ್ ಹಾಗೂ ಪ್ಲಾಸ್ಟಿಕ್ ಹೊರಬಂದು ಭೂಮಿಯ ಮೇಲೆ ಸಂಗ್ರಹವಾಗತೊಡಗಿದೆ. ಆದ್ದರಿಂದ ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆಗೊಳಿಸಲು 3ಆರ್ ಪದ್ಧತಿಯಾದ ರೆಡ್ಯುಸ್, ರೆಪ್ಯೂಸ್, ಮತ್ತು ರಿಸೈಕಲ್ ಎನ್ನುವ ಪದ್ಧತಿಯನ್ನು ಅನುಸರಿಸಬೇಕಿದೆ. ಇದರಿಂದ ಪ್ಲಾಸ್ಟಿಕ್ ಭೂಮಿ ಸೇರುವ ಪ್ರಮಾಣವನ್ನು ಕಡಿಮೆ ಮಾಡಬಹುದು.

ನೈಸರ್ಗಿಕ ಸಮಸ್ಯೆಗಳನ್ನು ಸಾಮಾನ್ಯ ಜನರ ಮುಂದಿಡಲು 1970 ರಲ್ಲಿ ಮೊದಲ ಬಾರಿಗೆ ವಿಶ್ವ ಭೂ ದಿನವನ್ನು ಆಚರಿಸಲಾಯಿತು. ನಂತರ ಪ್ರತಿ ವರ್ಷ ವಿಶ್ವದಾದ್ಯಂತ ಪರಿಸರ ಜಾಗೃತಿಯನ್ನು ಹೆಚ್ಚಿಸಲು, ಭೂ ಸಂರಕ್ಷಣಾ ಜವಾಬ್ದಾರಿಯನ್ನು ಹೆಚ್ಚಿಸುವ ಉದ್ದೇಶದಿಂದ ಎಪ್ರೀಲ್ 22 ರಂದು ವಿಶ್ವ ಭೂ ದಿನವನ್ನು ಆಚರಿಸಲಾಗುತ್ತಿದೆ. "ವಿಶ್ವ ಭೂ ದಿನವು" ಮಣ್ಣು, ಅರಣ್ಯಗಳು, ನದಿಗಳು, ಪರ್ವತಗಳು, ಸಾಗರ-ಸಮುದ್ರಗಳು, ಬೆಟ್ಟ-ಗುಡ್ಡಗಳು, ಮರುಭೂಮಿಗಳ ಸಂರಕ್ಷಣೆಯ ಉದ್ದೇಶದಿಂದ ವಿಶ್ವದ ಜನರನ್ನು ಒಂದುಗೂಡಿಸುವ ಉದ್ದೇಶವನ್ನು ಹೊಂದಿದ ಒಂದು ಪ್ರಮುಖ ಆಂದೋಲನವಾಗಿದೆ.

ಭೂಮಿಯ ನಿಜವಾದ ಸ್ವರೂಪವನ್ನು, ಪ್ರಕೃತಿಯ ನೈಸರ್ಗಿಕ ಸಂಪತ್ತನ್ನು ಮುಂದಿನ ಜನತೆಗೆ ಪರಿಚಯಿಸಬೇಕಿದ್ದರೆ ಭೂಮಿಯ ಸುಸ್ಥಿರ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. "ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ಹೆತ್ತ ತಾಯಿ, ಹೊತ್ತ ಭೂಮಿ ಸ್ವರ್ಗಕ್ಕಿಂತಲೂ ಮಿಗಿಲು. ಅಂತಹ ಮಾತೃ ಭೂಮಿಯನ್ನು ಸಂರಕ್ಷಿಸುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ. ಭೂ ದಿನ ಕೇವಲ ಒಂದು ದಿನದ ಆಚರಣೆಯಾಗದೆ ಪ್ರತಿ ದಿನಗಳು ಭೂ ದಿನದ ಆಚರಣೆಗಳಾಗಬೇಕು. ಭೂಮಿಯ ಆರೋಗ್ಯ ಸರಿಯಾಗಿದ್ದರೆ ಭೂಲೋಕದ ಸಕಲ ಜೀವಿಗಳ ಉಳಿವು ಸಾಧ್ಯ. ಭೂಮಿ ಬರಡಾದರೆ ಬದುಕು ಬರಡಾದಿತು ಎಚ್ಚರ!

**ಸ್ನೇಹಿತರನ್ನು ನಂಬಿ ಕೆಟ್ಟವರುಂಟು,**
**ಬಂಧುಗಳನ್ನು ನಂಬಿ ಕೆಟ್ಟವರುಂಟು,**
**ಅಕ್ಕಪಕ್ಕದವರನ್ನು ನಂಬಿ ಕೆಟ್ಟವರುಂಟು,**
**ಆದರೆ ಭೂಮಿಯನ್ನು ನಂಬಿ ಕೆಟ್ಟವರು ಯಾರು ಇಲ್ಲ.**




Downloaded From:www.kpscvaani.com



# ಅಂಬೇಡ್ಕರ್ ಮತ್ತು ಸಂವಿಧಾನ

ಅರುಣ್ ಜೋಳದಕೂಡ್ಲಿಗಿ





ಇಂದು ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಭಾರತದ ಸಂವಿಧಾನ ಮತ್ತೆ ಮತ್ತೆ ಚರ್ಚಿಸುವ, ಸಂವಾದಿಸುವ, ಅರ್ಥೈಸಿಕೊಳ್ಳುವ ಸಂಗತಿಗಳಾಗಿವೆ. ಒಂದೆಡೆ ಜಗತ್ತಿನಾದ್ಯಂತ ವಿದ್ವತ್ ಲೋಕ ಅಂಬೇಡ್ಕರ್ ಅವರನ್ನು ಓದತೊಡಗಿದೆ. 2023–24 ರಲ್ಲಿ ಅಂಬೇಡ್ಕರ್ ಕುರಿತು ಗಮನಾರ್ಹ ಕೃತಿಗಳು ಪ್ರಕಟವಾಗಿವೆ. ಅಶೋಕ ಗೋಪಾಲ ಅವರ 'ಎ ಪಾರ್ಟ್ ಅಪಾರ್ಟ್' ಕೃತಿ ಅಂಬೇಡ್ಕರ್ ಕುರಿತ ಹಲವು ಗೈರುಹಾಜರಿಗಳನ್ನು ದಾಖಲು ಸಮೇತ ವಿಶ್ಲೇಷಣೆ ಮಾಡಿದ್ದಾರೆ. ಅಂಬೇಡ್ಕರ್ ಅವರ ಕೃತಿಗಳು ಮರು ಚರ್ಚೆಗೆ ಒಳಗಾಗುತ್ತಿವೆ. ಇನ್ನೊಂದೆಡೆ ಭಾರತದ ಸಂವಿಧಾನ ಕೂಡ ದೇಶದೊಳಗೆ ಹೆಚ್ಚು ಚರ್ಚೆಗೆ ಕಾರಣವಾಗಿದೆ. ಎಲ್ಲರನ್ನೂ ರಕ್ಷಿಸುವ ರಕ್ಷಾಕವಚವಾದ ಸಂವಿಧಾನವನ್ನು ರಕ್ಷಿಸಬೇಕಾದ ಕೂಗು ಎದ್ದಿದೆ. ಹಾಗಾಗಿ ಮತ್ತೊಮ್ಮೆ ಅಂಬೇಡ್ಕರ್ ಜಯಂತಿ ಬರುವ ಹೊತ್ತಲ್ಲಿ ಇಂದು ನಾವು ಅಗತ್ಯವಾಗಿ ಅಂಬೇಡ್ಕರ್ ಮತ್ತು ಸಂವಿಧಾನವನ್ನು ಕುರಿತು ಸಂವಾದಿಸಬೇಕಾಗಿದೆ.

ಈಚೆಗೆ ಅಂಬೇಡ್ಕರ್ ಒಬ್ಬರೇ ಸಂವಿಧಾನ ರಚಿಸಲಿಲ್ಲ. ಇನ್ನಷ್ಟು ಸಂವಿಧಾನ ಶಿಲ್ಪಿಗಳಿದ್ದಾರೆ ಎನ್ನುವ ವಾದ ಮುನ್ನಲೆಗೆ ಬರುತ್ತಿದೆ. ಇದಕ್ಕೆ ಉತ್ತರವಾಗಿಯೂ ಸಂವಿಧಾನ ರಚನೆಯ ಭಾಗವಾಗಿದ್ದವರ ಹೇಳಿಕೆಗಳನ್ನು ನೀಡಲಾಗುತ್ತಿದೆ. ಕೆಲವು ಚಿಂತಕರ ಪ್ರಕಾರ 'ಒಂದು ವೇಳೆ ಅಂಬೇಡ್ಕರ್ ಒಬ್ಬರೇ ಸಂವಿಧಾನ ಬರೆಯಬಹುದಾಗಿದ್ದರೆ, ಸಂವಿಧಾನ ಸಭೆಯ ಅಗತ್ಯವೇ ಇರುತ್ತಿರಲಿಲ್ಲ. ಹಾಗೂ ಅಂಬೇಡ್ಕರ್ ಒಬ್ಬರೇ ಸಂವಿಧಾನ ಬರೆದಿದ್ದರೆ ಅವರ ಮೂಲ ಆಶಯಗಳಾದ ಪ್ರಭುತ್ವ ಸಮಾಜವಾದ ಮತ್ತು ಬುದ್ಧ ಭಾರತದ ಎಲ್ಲಾ ಅಂಶಗಳು ಸಂವಿಧಾನಕ್ಕೆ ಸೇರ್ಪಡೆ ಆಗುತ್ತಿದ್ದವು. ಆದರೂ ಅಂಬೇಡ್ಕರ್ ಅವರ ವಿಶೇಷ ಬದ್ಧತೆ ಮತ್ತು ವಿದ್ವತ್ತುಗಳಿಂದಾಗಿಯೇ ಭಾರತ ಸಂವಿಧಾನವು ಅಂದಿನ ಚಾರಿತ್ರಿಕ ಸಂದರ್ಭ ಅನುವುಮಾಡಿಕೊಟ್ಟಷ್ಟಾದರೂ ಜನಮುಖಿಯಾಗಲು ಸಾಧ್ಯವಾಯಿತು. ಸಂವಿಧಾನ ರಚನಾ ಸಭೆಯ ಚರ್ಚೆಯ ನಂತರದಲ್ಲಿ ಸಂವಿಧಾನದ ಕರಡನ್ನು ರಚಿಸಿದ ಶ್ರೇಯಸ್ಸು ಮಾತ್ರ ಸಂಪೂರ್ಣವಾಗಿ ಅಂಬೇಡ್ಕರ್ ಅವರಿಗೇ ಸೇರತಕ್ಕದ್ದಾಗಿದೆ' ಎನ್ನುತ್ತಾರೆ. ಈ ಮಾತು ವಾಸ್ತವವಾಗಿದೆ.



Downloaded From:www.kpscvaani.com

ನೆಲ್ಸನ್ ಮಂಡೆಲಾ ಅವರು ಭಾರತದ ಸಂವಿಧಾನ ಮತ್ತು ಅಂಬೇಡ್ಕರ್ ಅವರ ಬಗ್ಗೆ ಹೀಗೆ ಹೇಳುತ್ತಾರೆ. 'ಭಾರತದ ಸಂವಿಧಾನವು ದಕ್ಷಿಣ ಆಫ್ರಿಕಾದ ಸಂವಿಧಾನ ರಚಿಸಲು ಆಧಾರ ಸ್ತಂಬವೂ ಪ್ರೇರಣೆಯೂ ಆಗಿದೆ. ನಮಗೆ ನಂಬಿಕೆ ಇದೆ, ನಮ್ಮ ಹೊಸ ಸಂವಿಧಾನ ರಚನೆಯಲ್ಲಿನ ನಮ್ಮ ಶ್ರಮವು ಭಾರತದ ಹೆಮ್ಮೆಯ ಪುತ್ರನಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ಅಪಾರ ಶ್ರಮ ಮತ್ತು ಬೌದ್ಧಿಕತೆಯ ಪ್ರತಿಬಿಂಬವಾಗಿದೆ. ಅಂಬೇಡ್ಕರ್ ಅವರ ಕೊಡುಗೆ ಎಂಥದ್ದೆಂದರೆ, ತುಳಿತಕ್ಕೊಳಗಾದ ಎಲ್ಲರೂ ಸಾಮಾಜಿಕ ನ್ಯಾಯ ಮತ್ತು ಆತ್ಮಗೌರವ ಎತ್ತಿಹಿಡಿಯಲು ಸ್ಫೂರ್ತಿಯಾಗಿದ್ದಾರೆ' ಎನ್ನುತ್ತಾರೆ. ಮಂಡೆಲಾ ಅವರು ಭಾರತದ ಸಂವಿಧಾನವನ್ನು ನೆನೆಯುತ್ತಾ ಅಷ್ಟೇ ಗೌರವದಿಂದ ಅಂಬೇಡ್ಕರ್ ಅವರನ್ನೂ ನೆನೆಯುತ್ತಾರೆ.



ಇಂಗ್ಲೆಂಡಿನ ಶ್ರೇಷ್ಠ ರಾಜ್ಯಶಾಸ್ತ್ರಜ್ಞರೂ ಮತ್ತು ಆಕ್ಸ್‌ಫರ್ಡ್ ಹಾಗೂ ಕೇಂಬ್ರಿಜ್ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರೂ ಆಗಿದ್ದ ಆರ್ನೆಸ್ಟ್ ವಾರ್ಕರ್ ಅವರು 1951 ರಲ್ಲಿ 'ಪೀಪಲ್ಸ್ ಆಫ್ ಸೋಷಿಯಲ್ ಎಂಡ್ ಪೊಲಿಟಿಕಲ್ ಥಿಯರಿ' ಎಂಬ ಸಂಶೋಧನ ಗ್ರಂಥವನ್ನು ಪ್ರಕಟಿಸಿದರು. ಅದನ್ನು ಅವರು ಭಾರತೀಯ ಸಂವಿಧಾನದ ಪ್ರಸ್ತಾವನೆಗೆ (ಪ್ರಿಯಾಂಬಲ್) ಅರ್ಪಣೆ ಮಾಡಿದ್ದಾರೆ. ಆ ಗ್ರಂಥದ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ. "ನನ್ನ ಪ್ರಸ್ತುತ ಗ್ರಂಥದ ಸಾರವು ಈ ಪ್ರಿಯಾಂಬಲ್‌ನಲ್ಲಿ ಅಡಗಿದೆ. ಭಾರತೀಯರು ತಮ್ಮ ಸ್ವಾತಂತ್ರ್ಯವನ್ನು ಆರಂಭಿಸುವಾಗ ಈ ಶ್ರೇಷ್ಠ ಮಾನವೀಯ ಮೌಲ್ಯವನ್ನು ಅಂಗೀಕಾರ ಮಾಡಿದ ಬಗ್ಗೆ ನನಗೆ ಅಭಿಮಾನ ಮತ್ತು ಹೆಮ್ಮೆ ಇದೆ' ಎಂದಿದ್ದಾರೆ (ಸಂ/20ಪು/447). ಭಾರತದ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರಿಗೆ ಇದಕ್ಕಿಂತ ದೊಡ್ಡ ಗೌರವ ಮತ್ತೆಲ್ಲಿದೆ.



ಅಂಬೇಡ್ಕರ್ 1922 ರ ಹೊತ್ತಿಗೆ ಭಾರತದ ಸಂವಿಧಾನ ಹೇಗಿರಬೇಕು, ಏನಿರಬೇಕು ಎನ್ನುವುದನ್ನು ಸಾರ್ವಜನಿಕ ಚರ್ಚೆಗಳಲ್ಲಿ ತರುತ್ತಿದ್ದರು. ಗ್ರಾಮ ಪಂಚಾಯ್ತಿಗಳ ಮಸೂದೆ ಚರ್ಚೆಯಲ್ಲಿ 10 ಫೆಬ್ರವರಿ 1922 ಅಂಬೇಡ್ಕರ್ ಹೀಗೆ ಹೇಳುತ್ತಾರೆ, 'ಮಾನ್ಯರೆ, ಭಾರತವು ಯುರೋಪಲ್ಲ. ಇಂಗ್ಲೆಂಡ್ ಭಾರತವಲ್ಲ. ಕೋಮು ಪದ್ಧತಿಯು ಇಂಗ್ಲೆಂಡಿಗೆ ಗೊತ್ತಿಲ್ಲ; ಅದು ನಮಗೆ ಗೊತ್ತಿದೆ. ಆದುದರಿಂದ ಇಂಗ್ಲೆಂಡಿಗೆ ಸರಿಹೊಂದಬಹುದಾದ ರಾಜಕೀಯ ವ್ಯವಸ್ಥೆ ನಮಗೆ ಸರಿಹೊಂದಲಾರದು. ಇದಕ್ಕೂ ಒಂದು ಹೆಜ್ಜೆ ಮುಂದಿಟ್ಟು ನಾನು ತಿಳಿಯಬಯಸುವೆ; ಭಾರತೀಯ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳು ಏನೇ ಅನ್ನಲಿ, ಇನ್ನು ಮುಂದೆ ಬರಲಿರುವ ಭಾರತೀಯ ಸಂವಿಧಾನದಲ್ಲಿ ಯಾವುದಾದರೂ ಒಳ್ಳೇ ಅಂಶವಿದ್ದರೆ– ಅದು ಜಾತೀಯ ಪ್ರಾತಿನಿಧ್ಯ ತತ್ವವನ್ನು ಅಂಗೀಕರಿಸುವುದರಲ್ಲಿಯೇ ಇದೆಯೆಂಬುದನ್ನು ಸಾರಿ ಹೇಳುವೆ' ಎನ್ನುತ್ತಾರೆ. ಅಂದರೆ 1922 ರಲ್ಲಿಯೇ ಅಂಬೇಡ್ಕರ್ ಸಂವಿಧಾನದಲ್ಲಿ ಏನಿರಬೇಕು ಎನ್ನುವ ಕನಸು ಕಂಡಿದ್ದರು.

ಪುಣೆಯ ಘೋಕಲೆ ಭವನದಲ್ಲಿ 29 ಜನವರಿ 1939 ರಲ್ಲಿ ಅಂಬೇಡ್ಕರ್ ಮಾಡಿದ ಭಾಷಣ 'ಒಕ್ಕೂಟ ವ್ಯವಸ್ಥೆ ಮತ್ತು ಸ್ವಾತಂತ್ರ್ಯ' ಉಪನ್ಯಾಸದಲ್ಲಿ


Downloaded From:www.kpscvaani.com




**ನಾನು ಕೇವಲ ಒಂದೇ ಜಾತಿ ಅಥವಾ ಒಂದೇ ಜನಾಂಗಕೋಸ್ಕರ ಕೆಲಸ ಮಾಡಿಲ್ಲ. ಭಾರತದ ಪ್ರತಿಯೊಬ್ಬ ಕಟ್ಟ ಕಡೆಯ ವ್ಯಕ್ತಿಯ ಸಲುವಾಗಿ ಜೀವ ಸವೆಸಿದ್ದೇನೆ. ಸಂಶಯವಿದ್ದರೆ ಹೋಗಿ ಸಂವಿಧಾನ ಓದಿಕೊಳ್ಳಿ.**

–ಡಾ. ಬಿ.ಆರ್. ಅಂಬೇಡ್ಕರ್

ಅಂಬೇಡ್ಕರ್ ಎತ್ತುವ ಪ್ರಶ್ನೆಗಳು ಇಂದಿಗೂ ಪ್ರಸ್ತುತವಾಗಿವೆ. ಇಲ್ಲಿನ ಮಾತುಗಳೂ ಕೂಡ ಭಾರತದ ಸಂವಿಧಾನ ರಚನೆಯ ಪೂರ್ವ ತಯಾರಿಯ ಟಿಪ್ಪಣಿಗಳಂತಿವೆ. 'ತೆರಿಗೆಗಳಿಂದ ಬರುವ ಆದಾಯದ ವರ್ಗೀಕರಣ ಫೆಡರಲ್ ಸರಕಾರಕ್ಕೆ ಸಂವಿಧಾನದಲ್ಲಿ ನೀಡಲಾಗಿರುವ ತೆರಿಗೆ ವಿಧಿಸುವ ಅಧಿಕಾರವನ್ನು ಅವಲಂಬಿಸಿದೆ. ಫೆಡರಲ್ ಸರಕಾರಕ್ಕೆ ನೀಡಲಾದ ತೆರಿಗೆ ಹಾಕುವ ಅಧಿಕಾರ ಮೂರು ಮುಖ್ಯ ವಿಧದ್ದಾಗಿದೆ, ಮೊದಲನೆಯದು ತೆರಿಗೆ ವಿಧಿಸುವ ಅಧಿಕಾರದಲ್ಲಿ ತೆರಿಗೆಯ ಎಲ್ಲಾ ಮೊತ್ತವನ್ನು ಫೆಡರಲ್ ಸರಕಾರವೇ ಸಂಪೂರ್ಣ ವಿನಿಯೋಗಿಸಿಕೊಳ್ಳುವಂತಹ ತೆರಿಗೆಗಳು ಸೇರಿವೆ. ಎರಡನೆಯದಾಗಿ ಫೆಡರಲ್ ಸರಕಾರ ವಿಧಿಸಿ ಸಂಗ್ರಹಿಸುವ ಅಧಿಕಾರ ಹೊಂದಿದ್ದು ಬಂದ ಆದಾಯವನ್ನು ಕೇಂದ್ರ ಮತ್ತು ಪ್ರಾಂತ್ಯ ಸರಕಾರಗಳ ನಡುವೆ ಹಂಚಲಾಗುತ್ತದೆ' (ಸಂ/1,ಪು/342) ಎನ್ನುತ್ತಾರೆ. ಇಂದು ಕೇಂದ್ರ ಸರಕಾರ ಒಕ್ಕೂಟ ವ್ಯವಸ್ಥೆಯ ತತ್ವವನ್ನು ಸರಿಯಾಗಿ ಪಾಲಿಸದೆ ಇರುವ ಈ ಸಂದರ್ಭದಲ್ಲಿ ಅಂಬೇಡ್ಕರ್ ಹೇಳುವ ಈ ಮಾತುಗಳು ಹೆಚ್ಚು ಪ್ರಸ್ತುತವಾಗಿದೆ.

ಭಾರತದ ಒಕ್ಕೂಟ ವ್ಯವಸ್ಥೆಗೂ ಮತ್ತು ಜಗತ್ತಿನ ಬೇರೆ ಬೇರೆ ದೇಶಗಳ ಒಕ್ಕೂಟ ವ್ಯವಸ್ಥೆಗೂ ಇರುವ ಅಂತರ ಮತ್ತು ವ್ಯತ್ಯಾಸವನ್ನು ಅಂಬೇಡ್ಕರ್ ಸ್ಪಷ್ಟವಾಗಿ ಗುರುತಿಸುತ್ತಾರೆ. ಅವರೇ ಹೇಳುವಂತೆ 'ಭಾರತ ಒಕ್ಕೂಟ ವ್ಯವಸ್ಥೆಯು ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡಾ ಮತ್ತು ಆಸ್ಟ್ರೇಲಿಯಾದ ಸಂಯುಕ್ತ ರಾಜ್ಯಗಳಿಗಿಂತ ಭಿನ್ನವಾಗಿದೆ. ಭಾರತದ ಸಂವಿಧಾನದಲ್ಲಿ, ಸಂವಿಧಾನ ತಿದ್ದುಪಡಿಯಾದ ಪಕ್ಷದಲ್ಲಿ ಒಕ್ಕೂಟವನ್ನು ಬಿಟ್ಟುಹೋಗುವ ಹಕ್ಕನ್ನು ಮಾನ್ಯ ಮಾಡಲಾಗಿರುವುದರಿಂದ ಮತ್ತು ಅಮೆರಿಕ ಸಂವಿಧಾನದಲ್ಲಿ ಸಂವಿಧಾನವನ್ನು ಯಾವುದೇ ರಾಜ್ಯದ ಇಚ್ಛೆಯ ವಿರುದ್ಧ ಬದಲಾಯಿಸಿದರೂ ಸಹ ಒಕ್ಕೂಟವನ್ನು ಬಿಟ್ಟು ಹೋಗುವ ಹಕ್ಕನ್ನು ಮಾನ್ಯ ಮಾಡಲಾಗಿಲ್ಲವಾದ್ದರಿಂದ ಈ ವಿಷಯದಲ್ಲಿ ಭಾರತ ಸಂವಿಧಾನ ಮತ್ತು ಅಮೆರಿಕ ಸಂವಿಧಾನದಲ್ಲಿ ವ್ಯತ್ಯಾಸವಿದೆ. ಆಸ್ಟ್ರೇಲಿಯ ಮತ್ತು ಕೆನಡಾದಲ್ಲಿ ಈ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಉದ್ಭವಿಸಿದರೂ ಅದನ್ನು ಬಗೆಹರಿಸಲು ಆಂತರಿಕ ಯುದ್ಧ ಅನಾವಶ್ಯಕ. (ಸಂ:1,ಪು:346) ಎನ್ನುತ್ತಾರೆ. ಇದು ಭಾರತದ ಸಂವಿಧಾನ ರಚನಾ ಕಾರ್ಯದ ಆರಂಭಕ್ಕೆ ಈ ಬಗೆಯ ಒಕ್ಕೂಟ ವ್ಯವಸ್ಥೆ ಮತ್ತದರ ಸ್ವಾತಂತ್ರ್ಯದ ಬಗ್ಗೆ ಅಂಬೇಡ್ಕರ್ ಒಂದು ಒಳನೋಟವನ್ನು ಹೊಂದಿದ್ದರು.

ದಿನಾಂಕ 26 ನವೆಂಬರ್ 1949 ರಂದು ಸಂವಿಧಾನ ಸಭೆಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ್ ಅವರ ಸಮಾರೋಪ ಭಾಷಣ ಮುಗಿದ ಬಳಿಕ ಭಾರತದ ಸಂವಿಧಾನವನ್ನು ಸ್ವೀಕರಿಸಲಾಯಿತು. ಆದರ ಹಿಂದಿನ ದಿನ ಎಂದರೆ 25 ನವೆಂಬರ್ 1949 ರಂದು ಡಾ. ಬಾಬಾಸಾಹೇಬ ಅಂಬೇಡ್ಕರರು ಸಂವಿಧಾನ ಸಭೆಯಲ್ಲಿ ಕೊನೆಯವರಾಗಿ ಭಾಷಣದಲ್ಲಿ ಹೀಗೆ ಹೇಳುತ್ತಾರೆ. ಸ್ವಾತಂತ್ರ್ಯವು ಸಂತೋಷದ ಸಂಗತಿ ಎನ್ನುವುದರಲ್ಲಿ ಎರಡು ಮಾತಿಲ್ಲ, ಆದರೆ ಈ ಸ್ವಾತಂತ್ರ್ಯ ನಮ್ಮ ಮೇಲೆ ಗುರುತರವಾದ ಜವಾಬ್ದಾರಿಯನ್ನು ಹೊರಿಸಿದೆ ಎನ್ನುವುದನ್ನು ನಾವು ಮರೆಯುವಂತಿಲ್ಲ. ಈ ಸ್ವಾತಂತ್ರ್ಯದಿಂದಾಗಿ, ಯಾವುದೆ ಕೆಟ್ಟ ಸಂಗತಿ ನಡೆದರೆ, ನಾವೀಗ ಆಂಗ್ಲರ ಮೇಲೆ ತಪ್ಪು ಹೊರಿಸುವಂತಿಲ್ಲ.

ಇನ್ನು ಮುಂದೆ ಏನಾದರು ಕೆಟ್ಟದ್ದು ನಡೆದರೆ ನಮಗೆ ನಾವೇ ಹೊಣೆಗಾರರಾಗುತ್ತೇವೆ. ಅನುಚಿತ ಪ್ರಸಂಗ ನಡೆಯುವ ಅಪಾಯವಿದೆ. ಕಾಲ ವೇಗದಿಂದ ಬದಲಾಗುತ್ತಿದೆ, ನಮ್ಮ ಜನರೂ ಸಹ ಹೊಸ ಹೊಸ ವಿಚಾರ ಪ್ರಣಾಲಿಯ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ಜನರಿಗೆ ರಾಜ್ಯದ ಬಗೆಗೆ ಬೇಸರ ಬರುತ್ತಲಿದೆ. ಈಗ ಅವರಿಗೆ 'ಜನರಿಗಾಗಿ ಇರುವ ರಾಜ್ಯ' ಬೇಕಾಗಿದೆ. ರಾಜ್ಯ ಜನರದ್ದೇ ಮತ್ತು ಜನರಿಂದ ಆಯ್ಕೆಯಾದದ್ದೇ ಅಥವಾ ಅಲ್ಲವೇ ಎಂಬ ಬಗೆಗೆ ಅವರು ಯೋಚಿಸುವುದಿಲ್ಲ. ಯಾವ ಸಂವಿಧಾನದಲ್ಲಿ ನಾವು ಜನರ, ಜನರಿಗಾಗಿ ಚುನಾಯಿತ ಸರಕಾರದ ತತ್ವವನ್ನು ಸಂರಕ್ಷಿಸಿದ್ದೇವೆಯೋ, ಅದನ್ನು ಸುರಕ್ಷಿತವಾಗಿ ಉಳಿಸುವುದಾದರೆ, ನಮ್ಮ ಮಾರ್ಗದಲ್ಲಿ ಅಡ್ಡಿ ಬರುವ ತೊಡಕುಗಳನ್ನು ನಾವು ಗುರುತಿಸಬೇಕು. ಆ ಮೂಲಕ ಜನರೇ ಚುನಾಯಿಸಿದ ಸರಕಾರವನ್ನು ಹೋಲಿಸಿದಾಗ, ಜನರಿಗಾಗಿ ಇರುವ ಸರಕಾರಕ್ಕೆ ಜನರು ಮಹತ್ವ ನೀಡಬಹುದು. ಅದಕ್ಕಾಗಿ ಮುಂದೆ ಬಂದು ಜವಾಬ್ದಾರಿ ಹೊರಲು ಹಿಂಜರಿಯುವುದು ಸರಿಯಲ್ಲ. ದೇಶ ಸೇವೆಯ ಏಕೈಕ ಮಾರ್ಗವಿದು. ಇದಕ್ಕಿಂತ ಬೇರೆ ಉತ್ತಮ ಮಾರ್ಗ ನನಗೆ ಗೊತ್ತಿಲ್ಲ" (ಸಂ:20,ಪು:460) ಎನ್ನುತ್ತಾರೆ. ಅಂದರೆ ಇನ್ನು ಮುಂದೆ ಯಾವುದೇ ತಪ್ಪಾದರೂ ಅದನ್ನು ಬ್ರಿಟೀಷರ ಮೇಲೆ ಹೊರಿಸುವಂತಿಲ್ಲ, ಅದನ್ನು ನಾವೇ ಹೊರಬೇಕಾಗುತ್ತದೆ, ಹಾಗಾಗಿ ನಾವು



Downloaded From:www.kpscvaani.com

ಬಹಳ ಎಚ್ಚರದಿಂದಲೂ ಜವಾಬ್ದಾರಿಯಿಂದಲೂ ಸಂವಿಧಾನ ಬದ್ಧ ಸರಕಾರವನ್ನು ನಡೆಸಬೇಕಾಗಿದೆ ಎನ್ನುತ್ತಾರೆ.

ಈ ಸಂದರ್ಭದಲ್ಲಿ 19–20 ನವಂಬರ್ 1949 ರಂದು ಅಖಿಲ ಭಾರತೀಯ ದಲಿತ ಫೆಡರೇಶನ್‌ನ ಕಾರ್ಯದರ್ಶಿಯಾದ ಸರ್ ಬಾಪು ಸಾಹೇಬ ರಾಜಭೋಜರು ವರ್ಕಿಂಗ್ ಕಮಿಟಿಯ ಮೀಟಿಂಗ್‌ನಲ್ಲಿ 'ಡಾ.ಅಂಬೇಡ್ಕರರು ಸಂವಿಧಾನವನ್ನು ರಚಿಸಿ ವೈರಿಗಳಿಂದಲೂ ಮೆಚ್ಚುಗೆಯನ್ನು ಪಡೆದರು' ಎನ್ನುತ್ತಾರೆ. (ಸಂ:20,ಪು:442) ಇದನ್ನು ನೋಡಿದರೆ ಅಂಬೇಡ್ಕರ್ ಸಂವಿಧಾನ ರಚನೆಯ ಸಂದರ್ಭದಲ್ಲಿ ಎಷ್ಟೊಂದು ವಿರೋಧ ಎದುರಿಸಿರಬಹುದು ಎನ್ನುವುದು ಸ್ಪಷ್ಟವಾಗುತ್ತದೆ.

ಸಂವಿಧಾನ ರಚನೆಯಾಗಿ, ಸಂವಿಧಾನದ ಆಧಾರದಲ್ಲಿ ಜನಪ್ರತಿನಿಧಿಗಳು ಆಯ್ಕೆಯಾಗಿ ಸರಕಾರ ನಡೆಸುವ ಸಂದರ್ಭದಲ್ಲಿ 30 ಸೆಪ್ಟೆಂಬರ್ 1956 ರಲ್ಲಿ ಅಂಬೇಡ್ಕರ್ 'ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ' ಸ್ಥಾಪಿಸಿ ಈ ಪಾರ್ಟಿಯ ಪ್ರಸ್ತಾವನೆಯಲ್ಲಿ ಸಂವಿಧಾನದ ಬಗ್ಗೆ ಈ ರೀತಿ ಎಚ್ಚರಿಕೆ ಕೊಡುತ್ತಾರೆ. 'ಪ್ರಜಾಪ್ರಭುತ್ವದಲ್ಲಿ ಯಶಸ್ಸನ್ನು ಪಡೆಯಲು ಅವಶ್ಯಕವಿದ್ದ ನಾಲ್ಕನೆಯ ಸಂಗತಿ ಎಂದರೆ ಸಾಂವಿಧಾನಿಕ ನೈತಿಕತೆಯನ್ನು (Constitutional Morality) ಪಾಲಿಸುವುದು. ಬಹಳಷ್ಟು ಜನರು ನಮ್ಮ ಸಂವಿಧಾನದ ಬಗೆಗೆ ಅತಿ ಉತ್ಸಾಹಿಗಳಾಗಿ ಕಾಣುತ್ತಾರೆ. ನನ್ನದಂತೂ ಹಾಗಲ್ಲ. ಸದ್ಯದ ಭಾರತೀಯ ಸಂವಿಧಾನವನ್ನು ಕಿತ್ತೆಸೆಯಬೇಕೆನ್ನುವ, ಕನಿಷ್ಠ ಮಟ್ಟಿಗೆ, ಅದನ್ನು ಸಂಪೂರ್ಣವಾಗಿ ಸರಿಪಡಿಸಲೆಂದು ಹೆಣಗುವ ಜನರ ಜತೆ ನಾನು ನಿಲ್ಲುತ್ತೇನೆ. ನಾವು ಒಂದು ಸಂಗತಿಯನ್ನು ಮಾತ್ರ ಒಪ್ಪಿಕೊಳ್ಳಬೇಕಿದೆ. ಅದೆಂದರೆ, ಇಂದಿನ ನಮ್ಮ ಸಂವಿಧಾನವು ಕಾನೂನಿನ್ವಯದ ವ್ಯವಸ್ಥೆ ಹಾಗೂ ತತ್ವಗಳ ಎಲುಬಿನ ಗೂಡು ಮಾತ್ರವಾಗಿದೆ. ಸಾಂವಿಧಾನಿಕ ನೀತಿಮತ್ತೆಯ ಪಾಲನೆಯಿಂದಲೇ ಈ ಎಲುಬಿನ ಗೂಡಿಗೆ ಅವಶ್ಯಕವಿದ್ದ ರಕ್ತಮಾಂಸಗಳು ಲಭಿಸುವುವು. ಇಂಗ್ಲೆಂಡಿನಲ್ಲಿ ಈ ಸಾಂವಿಧಾನಿಕ ನೀತಿಮತ್ತೆಯನ್ನೇ ಸಾಂವಿಧಾನಿಕ ಸಂಕೇತಗಳೆಂದು (Conventions of the Constitution) ಗುರುತಿಸುತ್ತಾರೆ (ಸಂ:22,ಪು:375) ಎನ್ನುತ್ತಾರೆ. ಅಂದರೆ ಭಾರತದಲ್ಲಿ ಸಂವಿಧಾನಿಕ ನೈತಿಕತೆ ಪಾಲನೆಯಾಗುತ್ತಿಲ್ಲ. ಸಂವಿಧಾನಿಕ ನೈತಿಕತೆ ಪಾಲನೆ ಆಗದೆ ಇದ್ದರೆ ಸಂವಿಧಾನದ ಆಶಯಗಳೂ ಕೂಡ ಪಾಲನೆ ಆಗಲಾರವು ಎನ್ನುವುದು ಅಂಬೇಡ್ಕರರ ಆತಂಕವಾಗಿತ್ತು. ಈ ಆತಂಕ ಇಂದು ಬೃಹತ್ ಆಗಿ ಬೆಳೆದಿದೆ ಎನ್ನುವುದನ್ನು ಗಮನಿಸಬೇಕಾಗಿದೆ.

ಮುಂದುವರಿದು ಅಂಬೇಡ್ಕರ್ ಅವರು ಸಂವಿಧಾನವನ್ನೇನು ರಚಿಸಿದೆವು, ಆದರೆ ಅದನ್ನು ಕಾಪಾಡಿಕೊಳ್ಳುವಲ್ಲಿ ಜನರ ಜವಾಬ್ದಾರಿ ಏನು ಎನ್ನುವುದನ್ನು ಹೇಳುತ್ತಾರೆ. ಅವರ ಮಾತುಗಳಲ್ಲಿ ಹೇಳುವುದಾದರೆ, 'ನಾವು ಪ್ರಜಾಪ್ರಭುತ್ವವನ್ನು ಘೋಷಿಸುವ ಸಂವಿಧಾನವನ್ನು ತಯಾರಿಸಿದ್ದೇವೆ. ಅಂದ ಬಳಿಕ ಈ ಬಗೆಗೆ ನಮಗೆ ಇನ್ನೇನು ಬೇಕು? ನಾವಿನ್ನು ನಿಶ್ಚಿಂತರಾಗಿ ಕುಳಿತುಕೊಳ್ಳೋಣ, ಎನ್ನುವ ಭಾವನೆ ಈ ದೇಶದ ಜನರಲ್ಲಿ ಬೆಳೆಯುತ್ತಿದೆ. ಸಂವಿಧಾನವನ್ನು ತಯಾರಿಸಿದೆವೆಂದ ಮಾತ್ರಕ್ಕೆ ನಮ್ಮ ಕೆಲಸ ಮುಗಿಯಿತು ಎನ್ನುವ ಆತ್ಮಘಾತಕ ಭಾವನೆಯ ಬಗೆಗೆ ಎಲ್ಲರಿಗೂ ಅಪಾಯದ ಎಚ್ಚರಿಕೆಯನ್ನು ನೀಡಬಯಸುತ್ತೇನೆ. ನಮ್ಮ ಕೆಲಸ ಈಗ ಶುರುವಾಗುತ್ತಲಿದೆ. ಪ್ರಜಾಪ್ರಭುತ್ವದ ಮರ ಎಲ್ಲೆಡೆಗಳಲ್ಲಿ ಸರಿಯಾಗಿ, ಪುಷ್ಟವಾಗಿ ಬೆಳೆಯಬಲ್ಲುದೆಂದಲ್ಲ ಎಂಬುದನ್ನು ನಾವು ಗಮನದಲ್ಲಿ ಇರಿಸಿಕೊಳ್ಳಬೇಕು. ಅದು ಅಮೆರಿಕೆಯಲ್ಲಿ ಬೆಳೆದಿದೆ. ಇಂಗ್ಲೆಂಡಿನಲ್ಲಿ ಅದರ ಬೆಳವಣಿಗೆ ಆಯಿತು. ಅದು ಕೆಲಮಟ್ಟಿಗೆ ಫ್ರಾನ್ಸಿನಲ್ಲೂ ಬೇರುಬಿಟ್ಟಿದೆ, ಬೇರೆಡೆಗಳಲ್ಲಿ ನಡೆದ ಆಶಾದಾಯಕವಾದ ಈ ಘಟನೆಗಳಿಂದಲೇ ನಮಗೆ ಧೈರ್ಯ ಬಂದೀತು. (ಸಂ:22,ಪು:380) ಎನ್ನುವಾಗ ಸಂವಿಧಾನ ಎನ್ನುವ ಮರ ಭಾರತದಲ್ಲಿ ದಷ್ಟಪುಷ್ಟವಾಗಿ ಬೆಳೆಯುವುದೇ ಎನ್ನುವ ಅನುಮಾನವನ್ನು ವ್ಯಕ್ತಪಡಿಸುತ್ತಾರೆ.

ಅಕ್ಟೋಬರ್ 15, 1956 ರಂದು ನಾಗಪುರದ ಕಾರ್ಪೊರೇಶನ್ನಿನ ವತಿಯಿಂದ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ ಸನ್ಮಾನಿಸಲಾಯಿತು. ಅಂದು ಸನ್ಮಾನ ಸ್ವೀಕರಿಸಿ ಅಂಬೇಡ್ಕರ್ ಅವರು ಹೀಗೆ ಹೇಳಿದರು. 'ಭಾರತದ ಸಂವಿಧಾನವು ಜಾರಿಗೆ ಬಂದು ಐದು ವರ್ಷಗಳಾದವು. ಈ ಸಂವಿಧಾನವು ಸಾಕಾಗುತ್ತದೆಯೇ ಎಂಬುದರ ಬಗೆಗೆ ಪ್ರತಿಯೊಬ್ಬರೂ ವಿಚಾರ ಮಾಡಬೇಕಾಗಿದೆ. ಹೊರಗಿನಿಂದ ನೋಡಿದಾಗ ಕಂಡುಬರುವುದು ಏನೆಂದರೆ, ನಮ್ಮ ಮತ್ತು ಇಂಗ್ಲೆಂಡಿನಲ್ಲಿಯ ರಾಜ್ಯಾಡಳಿತವು ಕೆಲವಾರು ವಿಷಯಗಳನ್ನು ಬಿಟ್ಟರೆ ಉಳಿದಂತೆ ಬಹುತೇಕ ಒಂದೇ ಆಗಿರುವುದು. ಅಲ್ಲಿ ಪ್ರೌಢ ಮತದಾನದ ಮೂಲಕ ಚುನಾವಣೆಯು ನಡೆಯುತ್ತದೆ. ಇನ್ನು ನಮ್ಮ ದೇಶದಲ್ಲಿಯೂ ಚುನಾವಣೆ ನಡೆಯುತ್ತಿರುವುದು ಹಾಗೆಯೇ. ಆ ದೇಶದಲ್ಲಿ ಪಾರ್ಲಿಮೆಂಟ್ ಇದೆ, ನಮ್ಮ ದೇಶದಲ್ಲಿಯೂ ಪಾರ್ಲಿಮೆಂಟ್ ಇದೆ. ಆ ದೇಶದ ಪಾರ್ಲಿಮೆಂಟಿನಲ್ಲಿ ಬಹುಮತದಿಂದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಹಾಗೆಯೇ ನಮ್ಮ ದೇಶದ ಪಾರ್ಲಿಮೆಂಟಿನಲ್ಲಿಯೂ ಬಹುಮತದಿಂದಲೇ ನಿರ್ಣಯಗಳು ಆಗುತ್ತವೆ. ಹೀಗಿದ್ದರೂ ಕೂಡಾ ಆ ದೇಶದಲ್ಲಿನ ಆಡಳಿತದಲ್ಲಿ ಒಂದು ವಿಶೇಷ ವಿಲಕ್ಷಣವು ಇರುವುದು ಕಂಡು ಬರುತ್ತದೆ. ಇಂಗ್ಲೆಂಡಿನಲ್ಲಿ ಪ್ರಜಾತಂತ್ರದ ವ್ಯವಸ್ಥೆ ಹಾಗೆಯೇ ಉಳಿದುಕೊಂಡಿದೆ. ಆದರೆ ನಮ್ಮ ದೇಶದಲ್ಲಿ ಮಾತ್ರ ಸರ್ವಾಧಿಕಾರವು ಆರಂಭಗೊಂಡಂತೆ ಕಾಣಿಸುತ್ತದೆ. ನಮ್ಮ ದೇಶದ ಆಡಳಿತ ವಿಷಯದಲ್ಲಿ ಮತ್ತು ಸಂವಿಧಾನದ ವಿಷಯದಲ್ಲಿ ಎಚ್ಚರಿಕೆಯಿಂದ ಇರುವುದು ಅತ್ಯಂತ ಆವಶ್ಯಕ. ಭಾರತದ ಹೊಸ ಸಂವಿಧಾನದ ಆದ್ಯಕರ್ತನು ನಾನಾಗಿದ್ದೇನೆ. ಈ ಮಾತನ್ನು ನಾನು ಬಹಳ ಅಭಿಮಾನದಿಂದ ಹೇಳುತ್ತಿದ್ದೇನೆ ಎಂದಲ್ಲ, ಆದರೆ ನಾನು ಅದರ ಆದ್ಯಕರ್ತನಾಗಿರುವುದರಿಂದ ಅದರ ಬಗೆಗೆ ನಿತ್ಯವೂ ವಿಚಾರ ಮಾಡುತ್ತಲೇ ಇದ್ದೇನೆ. ಹಾಗೆ ವಿಚಾರ ಮಾಡುವಾಗ ಕೊನೆಗೆ ಈ ದೇಶದ ಗತಿಯು ಏನಾಗಬಹುದು ಎಂಬುದರ ಬಗೆಗೆ ಒಂದು ಭಯಾನಕ ಚಿತ್ರಣವೇ ನನ್ನ ಕಣ್ಣೆದುರು ಬರುತ್ತದೆ. (ಸಂ:20,ಪು:814) ಎಂದು ಆತಂಕ ವ್ಯಕ್ತ ಪಡಿಸುತ್ತಾರೆ. ಈ ಮಾತಿನಲ್ಲಿ ಸ್ವತಃ ಅಂಬೇಡ್ಕರ್ ಭಾರತದ ಹೊಸ ಸಂವಿಧಾನದ ಆದ್ಯಕರ್ತನೂ ಆಗಿದ್ದೇನೆ, ಹಾಗಾಗಿಯೇ ನಿತ್ಯವೂ ಸಂವಿಧಾನದ ಬಗ್ಗೆ ಆಲೋಚಿಸುತ್ತೇನೆ ಎನ್ನುತ್ತಾರೆ. ಇದೆಲ್ಲದರ ನಡುವೆ ಇಂಗ್ಲೆಂಡಿನಲ್ಲಿ ಪ್ರಜಾಪ್ರಭುತ್ವ ಪ್ರಜಾಪ್ರಭುತ್ವಾಗಿಯೇ ರೂಪುಗೊಳ್ಳುತ್ತಿದೆ. ಆದರೆ ಭಾರತದಲ್ಲಿ ಪ್ರಜಾಪ್ರಭುತ್ವ ಸರ್ವಾಧಿಕಾರದತ್ತ ಚಲಿಸುತ್ತಿದೆ ಎಂದು 1956 ರಲ್ಲಿಯೇ ನುಡಿದಿದ್ದರು. ಅದೀಗ ಭಾರತದಲ್ಲಿ ಹುಲುಸಾಗಿ ಬೆಳೆದು ಹೆಮ್ಮರವಾಗಿದೆ. ■



Downloaded From:www.kpscvaani.com



# 90 ವರ್ಷಗಳ ಕನ್ನಡ ಸಿನಿಮಾ

## ಒಂದು ಅವಲೋಕನ

ಡಾ.ಕೆ.ಪುಟ್ಟಸ್ವಾಮಿ

**ಭಾ**ರತದಲ್ಲಿ ಫ್ರಾನ್ಸ್‌ನ ಲೂಮಿಯೇರ್ ಸಹೋದರರ ಪ್ರಯತ್ನದಿಂದ ಚಲನಚಿತ್ರ ಪ್ರದರ್ಶನವು 1897ರಲ್ಲಿಯೇ ಪ್ರಮುಖ ನಗರಗಳಲ್ಲಿ ಆರಂಭವಾಯಿತು. ಆ ನಂತರ ಭಾರತದ ಹಲವು ನಗರಗಳಲ್ಲಿ ಚಿತ್ರನಿರ್ಮಾಣದ ಚಟುವಟಿಕೆಗಳು ಆರಂಭವಾದವು. ಆದರೆ 1913ರಲ್ಲಿ ಡಿ. ಜಿ. ಫಾಲ್ಕೆ ಅವರು ತಯಾರಿಸಿದ 'ರಾಜಾ ಹರಿಶ್ಚಂದ್ರ' ಮೂಕಿ ಚಿತ್ರವೇ ಭಾರತದ ಮೊದಲ ಕಥಾಚಿತ್ರವೆಂದು ಪರಿಗಣಿತವಾಗಿದೆ. ಅಂದಿನ ಮೈಸೂರು ಸಂಸ್ಥಾನದಲ್ಲಿ 1921 ರಿಂದಲೇ ಚಿತ್ರಗಳ ನಿರ್ಮಾಣ ಆರಂಭವಾಯಿತು. 1921 ರಿಂದ 1933 ರವರೆಗೆ, ಅಂದರೆ ಚಿತ್ರಗಳು ಮಾತಿನ ಯುಗಕ್ಕೆ ಹೊರಳಿಕೊಳ್ಳುವವರೆಗೆ ಬೆಂಗಳೂರಿನಲ್ಲಿ ಸುಮಾರು 175 ಕಿರು ಮೂಕಿ ಚಿತ್ರಗಳು ತಯಾರಾಗಿರಬಹುದೆಂದು ದಾಖಲಾಗಿದೆ.

1931ರಲ್ಲಿಯೇ ಭಾರತದಲ್ಲಿ ಮಾತಿನ ಚಿತ್ರಗಳು ಆರಂಭವಾಗಿ ಮೂಕಿಚಿತ್ರಗಳ ಯುಗ ಕೊನೆಗೊಂಡಿತು. 1934 ಮಾರ್ಚ್ ಮೂರರಂದು ಬಿಡುಗಡೆಯಾದ ಕನ್ನಡ ಮಾತಿನ 'ಸತಿ ಸುಲೋಚನಾ' ಚಿತ್ರದ ಮೂಲಕ ಕನ್ನಡ ಚಿತ್ರೋದ್ಯಮ ಆರಂಭವಾಯಿತು. 1938, 1939 ಮತು 1940ರಲ್ಲಿ ಮೂರು ವರ್ಷಕಾಲ ಎರಡನೇ ಮಹಾಯುದ್ಧವೂ ಸೇರಿದಂತೆ ಅನೇಕ ಕಾರಣಗಳಿಂದ ಚಿತ್ರನಿರ್ಮಾಣ ಸ್ಥಗಿತಗೊಂಡದ್ದು ಬಿಟ್ಟರೆ ಕನ್ನಡ ಚಿತ್ರೋದ್ಯಮ ಈ ತೊಂಬತ್ತು ವರ್ಷಗಳಲ್ಲಿ ಕ್ರಿಯಾಶೀಲ ಉದ್ಯಮವಾಗಿ ಬೆಳೆದು ಬಂದಿದೆ. ಭಾರತೀಯ ಚಿತ್ರೋದ್ಯಮಕ್ಕೆ ಗಣನೀಯ ಕಾಣಿಕೆ ನೀಡಿದೆ. ಅತ್ಯಂತ ಹೆಚ್ಚು ಚಿತ್ರಗಳನ್ನು ನಿರ್ಮಿಸುವ ಭಾರತದ ಐದು ಭಾಷೆಯ ಚಿತ್ರೋದ್ಯಮ ಪಟ್ಟಿಯಲ್ಲಿ ಕನ್ನಡ ಚಿತ್ರರಂಗಕ್ಕೂ ಪ್ರಮುಖ ಸ್ಥಾನವಿದೆ.

1934 ರಿಂದ 1950ರ ಅವಧಿಯಲ್ಲಿ ಕನ್ನಡ ಚಿತ್ರಗಳ ನಿರ್ಮಾಣ ಬಹುತೇಕ ವೃತ್ತಿರಂಗಭೂಮಿಯವರ ಆಸಕ್ತಿಯಿಂದ ಉಸಿರಾಡಿತು. ಮುಖ್ಯವಾಗಿ ಗುಬ್ಬಿ ವೀರಣ್ಣ, ಸುಬ್ಬಯ್ಯ ನಾಯ್ಡು, ಆರ್. ನಾಗೇಂದ್ರ ರಾವ್, ಬಿ.ಆರ್. ಪಂತುಲು ಅವರು ಹೆಚ್ಚಾಗಿ ಚಿತ್ರ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದರು. ಡಿ. ಶಂಕರ ಸಿಂಗ್, ವಿಠಲಾಚಾರ್ಯ ಬಿ. ಕೆಂಪರಾಜ ಅರಸು, ಹೊನ್ನಪ್ಪ ಭಾಗವತರು ಮುಂತಾದವರು ಚಿತ್ರರಂಗಕ್ಕೆ ಆಸರೆಯಾದರು. ಅವರ ಜೊತೆಗೆ ಬೆಳ್ಳಾವೆ ನರಹರಿ ಶಾಸ್ತ್ರಿ,  ಎಚ್.ಎಲ್.ಎನ್. ಸಿಂಹ, ಕು ರಾ ಸೀ., ಹುಣಸೂರು ಕೃಷ್ಣಮೂರ್ತಿ, ಮುಂತಾದ ರಂಗಭೂಮಿ ಸಖ್ಯವಿದ್ದ ಸಾಹಿತಿಗಳು ಸಹ ಚಿತ್ರ ನಿರ್ಮಾಣದಲ್ಲಿ ಬೆಂಬಲವಾಗಿ ನಿಂತರು. ಹೀಗಾಗಿ ಸೀಮಿತ ಮಾರುಕಟ್ಟೆ, ವಿತರಣಾ ಸಮಸ್ಯೆ ಮತ್ತು ಲಾಭದ ಕೊರತೆಯಿಂದ ನರಳುತ್ತಿದ್ದರೂ ಆರಂಭದಿಂದಲೂ ಕನ್ನಡ ಚಿತ್ರರಂಗದಲ್ಲಿ ಪ್ರಯೋಗಶೀಲತೆಗೆ ಅಷ್ಟಾಗಿ ಕೊರತೆಯಿರಲಿಲ್ಲ.

ದಕ್ಷಿಣ ಭಾರತದ ಮೊದಲ ಸಾಮಾಜಿಕ ಚಲನಚಿತ್ರವಾಗಿ ಎಚ್.ಎಲ್.ಎನ್.ಸಿಂಹ ಅವರ ನಿರ್ದೇಶನದ 'ಸಂಸಾರ ನೌಕೆ' ದೇಶದ ಗಮನ ಸೆಳೆದರೆ, ಆರ್.ಎನ್.ಆರ್ ಅವರು ಕನ್ನಡದ ಸತ್ಯ ಹರಿಶ್ಚಂದ್ರ ಚಿತ್ರವನ್ನು ತಮಿಳು ಭಾಷೆಗೆ ಡಬ್ ಮಾಡಿ ಭಾರತೀಯ ಚಲನಚಿತ್ರೋದ್ಯಮಕ್ಕೆ




Downloaded From:www.kpscvaani.com

ತಂತ್ರಜ್ಞಾನದ ಹೊಸ ಆವಿಷ್ಕಾರವೊಂದನ್ನು ನೀಡಿದರು. ಗುಬ್ಬಿ ಕಂಪನಿ ನಿರ್ಮಾಣದ 'ಸದಾರಮೆ', 'ಸುಭದ್ರ' 'ಜೀವನ ನಾಟಕ', 'ಹೇಮರೆಡ್ಡಿ ಮಲ್ಲಮ್ಮ', ಸುಬ್ಬಯ್ಯ ನಾಯ್ಡು–ಆರ್.ಎನ್.ಆರ್ ಅವರ ಜೋಡಿಯ 'ವಸಂತ ಸೇನ', 'ಭಕ್ತ ಪ್ರಹ್ಲಾದ', 'ಮಹಾತ್ಮ ಕಬೀರ್' ಮತ್ತು ಡಿ.ಶಂಕರ ಸಿಂಗ್ ಅವರ 'ನಾಗಕನ್ನಿಕ' 1934–1950ರ ಅವಧಿಯಲ್ಲಿ ಬಂದ ಗಮನಾರ್ಹ ಚಿತ್ರಗಳು. ಈ ಅವಧಿಯಲ್ಲಿ ಕೇವಲ 29 ಚಿತ್ರಗಳು ಮಾತ್ರ ತೆರೆಕಂಡಿದ್ದವು, ಈ ಅಲ್ಪ ಸಂಖ್ಯೆ ಕನ್ನಡ ಚಿತ್ರರಂಗದ ಆರಂಭದಲ್ಲಿ ಕಾಡಿದ ಅಸ್ಥಿರತೆಗೆ ಸಾಕ್ಷಿಯಾಗಿದೆ.

1951–60 ರ ಹತ್ತು ವರ್ಷಗಳ ಅವಧಿಯಲ್ಲಿ 76 ಚಿತ್ರಗಳು ಅಂದರೆ ವರ್ಷಕ್ಕೆ ಸರಾಸರಿ ಎಂಟು ಚಿತ್ರಗಳು ತೆರೆಕಂಡು ಚಿತ್ರರಂಗದ ಪರಿಸ್ಥಿತಿ ಸುಧಾರಿಸಿತು. ಇದೇ ಅವಧಿಯಲ್ಲಿ ಅಂದರೆ 1956ರ ಉತ್ತರಾರ್ಧದಲ್ಲಿ ರಾಜ್ಯದ ಏಕೀಕರಣ ಸಾಕಾರಗೊಂಡು ವಿಶಾಲ ಮೈಸೂರು ಉದಯವಾದ್ದರಿಂದ ಕನ್ನಡ ಚಿತ್ರರಂಗದ ಮಾರುಕಟ್ಟೆಯೂ ತುಸು ವಿಸ್ತರಿಸಿತು. 1954ರಲ್ಲಿ ತೆರೆಕಂಡ ಗುಬ್ಬಿ ಕರ್ನಾಟಕ ಫಿಲ್ಮ್ಸ್‌ನ 'ಬೇಡರ ಕಣ್ಣಪ್ಪ' ಚಿತ್ರದ ಮೂಲಕ ಮುಂದೆ ಕನ್ನಡ ಚಿತ್ರರಂಗಕ್ಕೆ ಒಳಬಲವನ್ನು ನೀಡಿದ ಕಲಾವಿದ ರಾಜ್‌ಕುಮಾರ್ ಅವರ ಆಗಮನವಾಯಿತು. ಅದೇ ಸುಮಾರಿಗೆ ನಟರಾದ ಉದಯ ಕುಮಾರ್ (ಭಾಗ್ಯೋದಯ) ಮತ್ತು ಕಲ್ಯಾಣ್ ಕುಮಾರ್ (ನಟಶೇಖರ) ಚಿತ್ರರಂಗ ಪ್ರವೇಶಿಸಿದರು. ಜೊತೆಗೆ ಅಶ್ವಥ್, ಬಾಲಕೃಷ್ಣ, ಸಂಪತ್, ನರಸಿಂಹರಾಜುರವರಂಥ ಕಲಾವಿದರು, ಹರಿಣೀ, ಬಿ. ಸರೋಜಾದೇವಿ, ಲೀಲಾವತಿಯವರಂಥ ನಟಿಯರು ಸರಿಸುಮಾರು ಏಕಕಾಲದಲ್ಲೇ ಸಿನಿಮಾರಂಗಕ್ಕೆ ಬಂದರು. ಕನ್ನಡ ಚಿತ್ರರಂಗದಲ್ಲಿ ಹೊಸ ಉತ್ಸಾಹ ಕಾಣಿಸಿಕೊಂಡಿತು. ಗುಬ್ಬಿ ಕಂಪನಿಯ ಜೊತೆಗೆ ಡಿ. ಶಂಕರ ಸಿಂಗ್ ಮತ್ತು ಬಿ. ವಿಠಲಾಚಾರ್ಯ ಅವರು ಮಹಾತ್ಮ ಪಿಕ್ಚರ್ಸ್ ಅಡಿಯಲ್ಲಿ ವರ್ಷಕ್ಕೆ ಮೂರು–ನಾಲ್ಕು ಚಿತ್ರಗಳನ್ನು ನಿರ್ಮಿಸಿ ಕನ್ನಡ ಚಿತ್ರೋದ್ಯಮಕ್ಕೆ ಚೇತರಿಕೆ ತಂದರು. ಪಂತುಲು ಅವರ 'ಸ್ಕೂಲ್ ಮಾಸ್ಟರ್' ತನ್ನ ವಾಸ್ತವವಾದಿ ನಿರೂಪಣೆಯಿಂದ ಗಮನಾರ್ಹ ಪ್ರಯೋಗವಾಗಿ ಯಶಸ್ಸು ಪಡೆಯಿತು. ಈ ಅವಧಿಯಲ್ಲಿ ಶಂಕರ ಸಿಂಗ್ ಅವರ 'ಜಗನ್ಮೋಹಿನಿ' ಮತ್ತು 'ಸ್ಕೂಲ್ ಮಾಸ್ಟರ್' ಮೂವತ್ತು ವಾರಗಳಿಗೂ ಹೆಚ್ಚು ಕಾಲ ಸತತವಾಗಿ ಪ್ರದರ್ಶನಗೊಂಡರೆ, 'ಬೇಡರ ಕಣ್ಣಪ್ಪ' ಶತದಿನಗಳನ್ನು ಹಲವು ಚಿತ್ರಮಂದಿರಗಳಲ್ಲಿ ಪೂರೈಸಿತು. ವೈ.ಆರ್. ಸ್ವಾಮಿ ಅವರ 'ಭಕ್ತ ಕನಕದಾಸ,' ರಾಜ್, ಜಿ.ವಿ. ಅಯ್ಯರ್, ಬಾಲಕೃಷ್ಣ ಮತ್ತು ನರಸಿಂಹರಾಜು ಅವರು ನಿರ್ಮಿಸಿದ 'ರಣಧೀರ ಕಂಠೀರವ', ಆರ್.ಎನ್.ಆರ್ ಅವರ 'ಜಾತಕಫಲ'. ಕು.ರಾ.ಸೀ ಅವರ ನಿರ್ದೇಶನದ ಹೊನ್ನಪ್ಪ ಭಗವತರ್ ಅಭಿನಯದ 'ಮಹಾಕವಿ ಕಾಳಿದಾಸ', 'ಅಣ್ಣ ತಂಗಿ', ಟಿ.ವಿ. ಸಿಂಗ್ ಠಾಕೂರ್ ಅವರ 'ಜಗಜ್ಯೋತಿ ಬಸವೇಶ್ವರ', ಬಿ.ಎಸ್. ರಂಗಾ ಅವರ 'ಮಹಿಷಾಸುರ ಮರ್ದಿನಿ', ಪಂತುಲು ಅವರ 'ರತ್ನಗಿರಿ ರಹಸ್ಯ', ಕೆಂಪರಾಜ ಅರಸು ಅವರ 'ನಳ ದಮಯಂತಿ' ಮತ್ತು ಜಲದುರ್ಗ 1951–60 ರ ದಶಕದಲ್ಲಿ ಜನಮನ್ನಣೆ ಪಡೆದ ಚಿತ್ರಗಳು.

ಅರವತ್ತರ ದಶಕದಲ್ಲಿ (1961–70) ಇನ್ನೂರ ಮೂವತ್ತು (230) ಚಿತ್ರಗಳು ತೆರೆಕಾಣುವ ಮೂಲಕ ಕನ್ನಡ ಚಿತ್ರರಂಗವು ಭದ್ರವಾದ ನೆಲೆಯನ್ನು ಕಂಡುಕೊಂಡಿತು. ಈ ದಶಕದಲ್ಲಿ ಕಂಡದ್ದು ತೀವ್ರ ಕಲಿಕೆಯ ಹಾಗೂ ಹುಡುಕಾಟದ ದಿನಗಳನ್ನು. ಅರವತ್ತರ ದಶಕದ ಆರಂಭದಿಂದ ಅಂತ್ಯದವರೆಗೆ ಅದು ತನ್ನದೇ ಆದ ಜಾಡಿನ ಶೋಧನೆಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿತು. ಕನ್ನಡ ಚಿತ್ರಗಳ ಬಗೆಗಿನ ಅಸಡ್ಡೆ ಕ್ರಮೇಣ ಕರಗಿ, ಅದರ ಸ್ಥಾನದಲ್ಲಿ ಅಭಿಮಾನ ಸ್ಥಾಪನೆಯಾಯಿತು. ಅದರಿಂದಾಗಿ ಕನ್ನಡದ ಮಾರುಕಟ್ಟೆಯೂ ವಿಸ್ತಾರಗೊಂಡಿತು. ಅರವತ್ತರ ದಶಕದ ಚಿತ್ರಗಳು ಪ್ರಧಾನವಾಗಿ ಮದರಾಸಿನಲ್ಲೇ ತಯಾರಾದರೂ ಅವುಗಳಲ್ಲಿ 'ಕನ್ನಡತನ'ಕ್ಕೆ ಕೊರತೆಯುಂಟಾಗದಂತೆ ಅಂದಿನ ಚಿತ್ರ ನಿರ್ಮಾಪಕ–ನಿರ್ದೇಶಕರು ನೋಡಿಕೊಂಡದ್ದು ಆ ದಶಕದ ವಿಶೇಷ.

ಅರವತ್ತರ ದಶಕದಲ್ಲಿ ಅನೇಕ ಪ್ರಯೋಗಗಳು ಹೋರಾಟಗಳು, ದಾಖಲೆಗಳು ಸಂಭವಿಸಿದವು. ಮುಖ್ಯವಾಗಿ ಕನ್ನಡ ಚಿತ್ರೋದ್ಯಮಕ್ಕೆ ಪಿಡುಗು ಎಂದೇ ಭಾವಿಸಿದ್ದ ಪರಭಾಷೆಯ ಡಬ್ಬಿಂಗ್ ಚಿತ್ರಗಳ ವಿರುದ್ಧ ಜನರೇ ಹೋರಾಡಿ ಯಶಸ್ಸು ಕಂಡರು. ಅರವತ್ತರ ದಶಕದಲ್ಲಿ ರಾಜ್ಯದಲ್ಲಿ ಸಂಭವಿಸಿದ ಭೀಕರ ಬರ ಮತ್ತು ಪ್ರವಾಹದಂಥ ಸಂಕಷ್ಟಗಳಿಗೆ ನೆರವಾಗಲು ಚಿತ್ರರಂಗದ ಕಲಾವಿದರು, ತಂತ್ರಜ್ಞರು, ನಿರ್ದೇಶಕರು, ಪತ್ರಕರ್ತರ ಜೊತೆಗೂಡಿ, ಮನರಂಜನೆಯ





Downloaded From:www.kpscvaani.com



ಕಾರ್ಯಕ್ರಮಗಳನ್ನು ನೀಡಿ ಜನರಿಂದ ಹಣ ಸಂಗ್ರಹಿಸಿದರು. ಇದು ಚಿತ್ರರಂಗ ಮತ್ತು ಜನತೆಯ ನಡುವೆ ಗಾಢವಾದ ನಂಟು ಬೆಸೆಯಲು ನಾಂದಿ ಹಾಡಿತು. ಸರ್ಕಾರ 1966ರಲ್ಲಿ ಉತ್ತಮ ಚಿತ್ರಗಳ ಪ್ರಯತ್ನಗಳನ್ನು ಪ್ರೋತ್ಸಾಹಿಸಲು ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಸ್ಥಾಪಿಸಿತು. ಹಾಗೆಯೇ ಚಿತ್ರಗಳಿಗೆ ಸಹಾಯಧನ ಯೋಜನೆ ಸಹ ಜಾರಿಗೆ ಬಂದದ್ದು ಇದೇ ದಶಕದಲ್ಲಿ.

ಕಲಾವಿದ ರಾಜ್‌ಕುಮಾರ್ ಅವರ ಜನಪ್ರಿಯತೆ ತುಟ್ಟತುದಿಗೇರಿತು. 1968ರ ವೇಳೆಗೆ ಅಂದರೆ ಚಿತ್ರರಂಗಕ್ಕೆ ಬಂದು ಹದಿನಾಲ್ಕು ವರ್ಷ ತುಂಬುವ ಮೊದಲೇ ಶತಚಿತ್ರಗಳ ನಾಯಕನಟನಾಗಿ ಕನ್ನಡಿಗರ ಮನ ಗೆದ್ದರು. ಅವರು ತಮ್ಮ ವೃತ್ತಿ ಬದುಕಿನ ಎಲ್ಲ ಬಗೆಯ ಪಾತ್ರಗಳನ್ನು ನಿರ್ವಹಿಸಿದ್ದು ಇದೇ ಅವಧಿಯಲ್ಲಿ. ನಟರಾಗಿ ರಾಜೇಶ್, ರಮೇಶ್ ಮೊದಲಾದವರು ಪ್ರವರ್ಧಮಾನಕ್ಕೆ ಬಂದರೆ, ಮುಂದೆ ನಟರಾಗಿ ಬೆಳೆದ ಶ್ರೀನಾಥ್, ಗಂಗಾಧರ್ ಅವರ ಆಗಮನವೂ ಆಯಿತು. ಲೀಲಾವತಿ ಅವರ ಜೊತೆಗೆ ಕಲ್ಪನಾ, ಜಯಂತಿ, ಭಾರತಿ, ಚಂದ್ರಕಲಾ, ಉದಯಚಂದ್ರಿಕಾ, ಬಿ.ವಿ.ರಾಧಾ, ಶೈಲಶ್ರೀ ಮುಂತಾದ ನಾಯಕಿಯರು ಚಿತ್ರರಂಗ ಪ್ರವೇಶಿಸಿದರು. ಈ ಅವಧಿಯಲ್ಲಿ ಆಗಮಿಸಿದ ನಿರ್ದೇಶಕರ ಸಂಖ್ಯೆಯೂ ಅಷ್ಟೇ ಕುತೂಹಲಕಾರಿ. ವೈ.ಆರ್. ಸ್ವಾಮಿಯವರಿಂದ ಹಿಡಿದು, ಮುಂದೆ ಚಿತ್ರರಂಗದ ಗತಿಯನ್ನು ದೀರ್ಘಕಾಲ ಮುನ್ನಡೆಸಿದ ಎಂ.ಆರ್. ವಿಠಲ್, ಎನ್. ಲಕ್ಷ್ಮೀನಾರಾಯಣ, ಪುಟ್ಟಣ್ಣ ಕಣಗಾಲ್, ಸಿದ್ಧಲಿಂಗಯ್ಯ, ದೊರೈ ಭಗವಾನ್‌ರವರು ತಮ್ಮ ಪ್ರಯೋಗಶಾಲೆಗಳನ್ನು ಆರಂಭ ಮಾಡಿದ್ದು ಸಹ ಇದೇ ಅವಧಿಯಲ್ಲಿ.

ಕನ್ನಡದಲ್ಲಿ 'ಅಮರಶಿಲ್ಪಿ ಜಕಣಾಚಾರಿ' ಚಿತ್ರದ ಮೂಲಕ ವರ್ಣಚಿತ್ರ ನಿರ್ಮಾಣ ಪರಂಪರೆಯನ್ನು ಬಿ.ಎಸ್.ರಂಗಾ ಅವರು ಉದ್ಘಾಟಿಸಿದರು. 'ಕರುಣೆಯೇ ಕುಟುಂಬ ಕಣ್ಣು' ಚಿತ್ರದ ಮೂಲಕ ಕನ್ನಡದ ಕಾದಂಬರಿಗಳನ್ನು ತೆರೆಗೆ ಅಳವಡಿಸುವ ಸಂಪ್ರದಾಯವನ್ನು ಆರಂಭಿಸಿದ ಟಿ.ವಿ. ಸಿಂಗ್ ಠಾಕೂರ್, ಹುಣಸೂರು ಕೃಷ್ಣಮೂರ್ತಿ, ಕೆ.ಎಸ್.ಎಲ್. ಸ್ವಾಮಿ(ರವಿ) ಅವರು ಹೆಚ್ಚು ಚಿತ್ರಗಳನ್ನು ನಿರ್ಮಿಸಿ/ ನಿರ್ದೇಶಿಸಿ ಜನಪ್ರಿಯ ಶೈಲಿಯೊಂದರ ಹುಡುಕಾಟ ನಡೆಸಿದರು. ಪುಟ್ಟಣ್ಣ ಕಣಗಾಲ್, ಸಿದ್ಧಲಿಂಗಯ್ಯ, ದೊರೈ ಭಗವಾನ್‌ರವರು ನಿರಂತರವಾಗಿ ಪ್ರಯೋಗಗಳನ್ನು ಕೈಗೊಂಡು ತಮ್ಮ ಒಳನೋಟಗಳ ಮೂಲಕ ಚಿತ್ರರಂಗಕ್ಕೆ ತನ್ನದೇ ಆದ ಸ್ವರೂಪವನ್ನು ಬಿಂಬಿಸಲು ಪ್ರಯತ್ನಿಸಿ ಯಶಸ್ವಿಯಾದರು.

ಇದೇ ವೇಳೆ ಅಬ್ಬಾಯಿ ನಾಯ್ಡು, ಎಂ.ಪಿ. ಶಂಕರ್ ಅವರಂಥ ಹೊಸ ನಿರ್ಮಾಪಕರು ಸಹ ಚಿತ್ರರಂಗದಲ್ಲಿ ತೊಡಗಿಸಿಕೊಂಡರು. ಇವೆಲ್ಲಕ್ಕೂ ಕಳಶಪ್ರಾಯವೆಂಬಂತೆ 1970 ರಲ್ಲಿ ತೆರೆಕಂಡ ಟಿ. ಪಟ್ಟಾಭಿ ರಾಮರೆಡ್ಡಿ ಅವರು ನಿರ್ದೇಶಿಸಿದ 'ಸಂಸ್ಕಾರ' ಕನ್ನಡದಲ್ಲಿ ಹೊಸ ಸಂಚಲನವನ್ನು ಮೂಡಿಸಿ ಕನ್ನಡಚಿತ್ರಗಳಿಗೆ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮನ್ನಣೆಯನ್ನು ತಂದುಕೊಟ್ಟಿತು. ಮುಂದೆ ಈ ಬಗೆಯ ಚಿತ್ರಗಳು ಹೊಸ ಅಲೆ ಎಂಬ ಹೆಸರಿನಲ್ಲಿ ಸಾಲು ಸಾಲು ತಯಾರಾಗಿ ಅದರ ಪರಂಪರೆಯನ್ನು ಮುಂದುವರೆಸಿದವು.

ಅರವತ್ತರ ದಶಕದ ಮತ್ತೊಂದು ವಿಶೇಷವೆಂದರೆ ಚಿತ್ರಸಂಗೀತ ಮತ್ತು ಗೀತ ಗಾಯನದಲ್ಲಿ ಮೂಡಿದ ಹೊಸತನ. ಟಿ.ಜಿ. ಲಿಂಗಪ್ಪ, ಜಿ.ಕೆ. ವೆಂಕಟೇಶ್, ರಾಜನ್ ನಾಗೇಂದ್ರ, ಎಂ. ವೆಂಕಟರಾಜು, ವಿಜಯ ಭಾಸ್ಕರ್, ಆರ್. ರತ್ನ, ಸತ್ಯಂ, ಉಪೇಂದ್ರಕುಮಾರ್, ಎಂ. ರಂಗಾರಾವ್ ಮೊದಲಾದ ಸಂಗೀತ ನಿರ್ದೇಶಕರು ಸುಮಧುರ ಗೀತೆಗಳನ್ನು ಸಂಯೋಜಿಸಿ ಚಿತ್ರರಸಿಕರ ಮನಗೆದ್ದರು. ಕುವೆಂಪು, ಬೇಂದ್ರೆ, ಕೆ.ಎಸ್. ನರಸಿಂಹಸ್ವಾಮಿ, ಪು ತಿ ನ, ಅವರಂಥ ಪ್ರಸಿದ್ಧ ಕವಿಗಳ ಕವನಗಳೂ ಸಹ ಚಿತ್ರಗೀತೆಗಳಾಗಿ ಜನರ ಮನಗೆದ್ದವು. ಇಂದಿಗೂ ಅರವತ್ತರ ದಶಕದ ಚಿತ್ರಗೀತೆಗಳ ಜನಪ್ರಿಯತೆಗೆ ಕುಂದುಂಟಾಗಿಲ್ಲ.

ಈ ದಶಕದಲ್ಲಿ ತೆರೆಕಂಡ 'ಕಿತ್ತೂರು




Downloaded From:www.kpscvaani.com

ಚೆನ್ನಮ್ಮ'. 'ಭಕ್ತ ಕನಕದಾಸ', 'ಸಂತ ತುಕಾರಾಂ', 'ನಾಂದಿ', 'ನಂದಾದೀಪ'. 'ಚಂದವಳ್ಳಿಯ ತೋಟ', 'ಸುಬ್ಬಾಶಾಸ್ತ್ರಿ', 'ಸತ್ಯ ಹರಿಶ್ಚಂದ್ರ', 'ಬಂಗಾರದ ಹೂವು', 'ನಮ್ಮ ಮಕ್ಕಳು', 'ಬೆಳ್ಳಿ ಮೋಡ', 'ಗೆಜ್ಜೆ ಪೂಜೆ', 'ಮೇಯರ್ ಮುತ್ತಣ್ಣ', 'ಶ್ರೀ ಕೃಷ್ಣದೇವರಾಯ', 'ಹಣ್ಣೆಲೆ ಚಿಗುರಿದಾಗ, 'ನಮ್ಮ ಊರು', 'ನಕ್ಕರೇ ಅದೇ ಸ್ವರ್ಗ', 'ಸರ್ವಮಂಗಳ', 'ಸಂಸ್ಕಾರ' ಮುಂತಾದ ಚಿತ್ರಗಳು ಕನ್ನಡ ಚಿತ್ರಂಗದಲ್ಲಿ ನಡೆದ ಯಶಸ್ವೀ ಪ್ರಯೋಗಗಳಿಗೆ ಸಾಕ್ಷಿಯಾಗಿವೆ.

ಕನ್ನಡ ಚಿತ್ರರಂಗದ ಸುವರ್ಣಯುಗ ಆರಂಭವಾದದ್ದು ಎಪ್ಪತ್ತರ ದಶಕದಲ್ಲಿ (1971–80). ಕನ್ನಡ ಚಿತ್ರರಂಗವು ಮೈ ಕೊಡವಿ ಎದ್ದು ನಿಂತಿತು. ಸೀಮಿತ ಮಾರುಕಟ್ಟೆಯ ಹಿನ್ನೆಲೆಯಲ್ಲಿಯೂ ಹಲವರ ಆಗಮನದಿಂದ ಅನೇಕ ಸಾಹಸಗಳು ನಡೆದವು. ಹಲವು ಬಗೆಯ ಯಶಸ್ವೀ ಚಿತ್ರಗಳು ನಿರ್ಮಾಣವಾದವು. ಸರ್ಕಾರ ಚಿತ್ರರಂಗದ ಅಭಿವೃದ್ಧಿಗೆ ಕೈಗೊಂಡ ಸುಧಾರಣೆಗಳು ಮತ್ತು ರಾಜ್ಯದಲ್ಲಾಗುತ್ತಿದ್ದ ಸಾಮಾಜಿಕ ಬದಲಾವಣೆಗಳು ಸಹ ಚಿತ್ರರಂಗದ ಬೆಳವಣಿಗೆಗೆ ಪೂರಕವಾಗಿ, ಕನ್ನಡ ಚಿತ್ರೋದ್ಯಮವು ಮದರಾಸಿನಿಂದ ರಾಜ್ಯಕ್ಕೆ ಸ್ಥಳಾಂತರವಾಗುವ ಪ್ರಕ್ರಿಯೆ ಆರಂಭವಾಯಿತು.

1970ರಲ್ಲಿ ತೆರೆಕಂಡ ಸಂಸ್ಕಾರ ಚಿತ್ರವು ಮೂಡಿಸಿದ ಸಂಚಲನವನ್ನು ಅನುಸರಿಸಿ ಕನ್ನಡ ಚಿತ್ರರಂಗದಲ್ಲಿ ವಾಣಿಜ್ಯ ಚಿತ್ರಗಳಿಗೆ ಸಮಾನಾಂತರವಾಗಿ ಭಿನ್ನ ಪಂಥದ ಚಿತ್ರ ಪರಂಪರೆಯೊಂದು ಬೆಳೆಯಿತು. ರಂಗಭೂಮಿ, ಸಾಹಿತ್ಯ ಮತ್ತು ಚಲನಚಿತ್ರ ಸಂಸ್ಥೆಗಳಿಂದ ಶೈಕ್ಷಣಿಕವಾಗಿ ತರಬೇತಿ ಪಡೆದ ಯುವ ತಂತ್ರಜ್ಞರು ತೀವ್ರ ಪ್ರಯೋಗಗಳಲ್ಲಿ ತೊಡಗಿಸಿಕೊಂಡು ಯಶಸ್ಸು ಕಂಡದ್ದು ಮಾತ್ರವಲ್ಲ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದರು. ಮುಖ್ಯವಾಗಿ ಹವ್ಯಾಸಿ ರಂಗಭೂಮಿಯ ಕಲಾವಿದರ ಮತ್ತು ನಿರ್ದೇಶಕರ ಚಿತ್ರರಂಗ ಪ್ರವೇಶವು ಸಹ ದೊಡ್ಡಮಟ್ಟದಲ್ಲಾಯಿತು. ಪೂನಾ ಫಿಲಂ ಸಂಸ್ಥೆಯಲ್ಲಿ ತರಬೇತು ಪಡೆದ ಕೆ.ಎಂ. ಶಂಕರಪ್ಪ, ಗಿರೀಶ್ ಕಾಸರವಳ್ಳಿ, ಸಂಕಲನಕಾರ ಉಮೇಶ್ ಕುಲಕರ್ಣಿ, ಛಾಯಾಗ್ರಾಹಕರಾದ ಎಸ್.ರಾಮಚಂದ್ರ, ಗೌರಿಶಂಕರ್ ಮೊದಲಾದ ನಿರ್ದೇಶಕರು/ತಂತ್ರಜ್ಞರು, ರಂಗಭೂಮಿ ಹಿನ್ನೆಲೆಯ ಬಿ.ವಿ.ಕಾರಂತ, ಗಿರೀಶ



ಕಾರ್ನಾಡ್, ಟಿ.ಎಸ್.ನಾಗಾಭರಣ, ಪಿ.ವಿ.ನಂಜರಾಜೇ ಅರಸು, ಟಿ.ಎಸ್. ರಂಗ, ಸಾಹಿತಿಗಳಾದ ಪಿ.ಲಂಕೇಶ್, ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಕಂಬಾರ, ಹಾಗೆಯೇ ಚಿತ್ರನಿರ್ಮಾಣದ ಬಗ್ಗೆ ತೀವ್ರ ವ್ಯಾಮೋಹವಿದ್ದ ಕಾಶೀನಾಥ್ ಮೊದಲಾದವರು ತಮ್ಮ ಕ್ರಿಯಾಶೀಲತೆಯಿಂದ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದರು.

ಡಾ. ರಾಜ್ ಕುಮಾರ್ ಅವರ ಜನಪ್ರಿಯತೆ ತುತ್ತತುದಿಗೇರಿತು. ಈ ಅವಧಿಯಲ್ಲಿ ತೆರೆಕಂಡ 'ಸಿಪಾಯಿ ರಾಮು', 'ಬಂಗಾರದ ಮನುಷ್ಯ', 'ಗಂಧದಗುಡಿ', 'ಭಕ್ತ ಕುಂಬಾರ, 'ಸಂಪತ್ತಿಗೇ ಸವಾಲ್', 'ಎರಡು ಕನಸು', 'ದಾರಿ ತಪ್ಪಿದ ಮಗ', 'ಮಯೂರ', 'ಪ್ರೇಮದ ಕಾಣಿಕೆ', 'ನಾ ನಿನ್ನ ಮರೆಯಲಾರೆ', 'ಬಬ್ರುವಾಹನ', 'ಸನಾದಿ ಅಪ್ಪಣ್ಣ', 'ಶಂಕರ್ ಗುರು' ಮೊದಲಾದ ಚಿತ್ರಗಳು ಗಲ್ಲಾ ಪೆಟ್ಟಿಗೆಯಲ್ಲಿ ಸಾರ್ವಕಾಲಿಕ ದಾಖಲೆ ಬರೆದವು.

ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರೂ ಸಹ ತಮ್ಮ 'ಶರಪಂಜರ', 'ನಾಗರಹಾವು', 'ಶುಭಮಂಗಳ', 'ಎಡಕಲ್ಲುಗುಡ್ಡದ ಮೇಲೆ', 'ಉಪಾಸನೆ', 'ಕಥಾಸಂಗಮ', 'ಪಡುವಾರಹಳ್ಳಿ ಪಾಂಡವರು' ಚಿತ್ರಗಳ ಯಶಸ್ಸಿನಿಂದ ಜನಪ್ರಿಯತೆಯ ತುತ್ತತುದಿಗೇರಿದರು. ಸಿದ್ಧಲಿಂಗಯ್ಯನವರು 'ಬಂಗಾರದ ಮನುಷ್ಯ' ಮತ್ತು 'ಭೂತಯ್ಯನ ಮಗ ಅಯ್ಯು' ಚಿತ್ರದ ಮೂಲಕ ಹೊಸ ಇತಿಹಾಸ ಬರೆದರು. ಕನ್ನಡ ಸಾಹಿತ್ಯಕೃತಿಗಳನ್ನು ತೆರೆಗೆ ಅಳವಡಿಸುವಲ್ಲಿ ತೋರಿದ ಕುಶಲತೆಯಿಂದ ದೊರೈ ಭಗವಾನ್ ಜೋಡಿಯು ಅಭೂತಪೂರ್ವ ಯಶಸ್ಸು ಕಂಡಿತು. ಕಲಾವಿದರಲ್ಲಿ 'ನಾಗರಹಾವು' ಮೂಲಕ ನಾಯಕರಾಗಿ ಆಗಮಿಸಿದ ನಟ ವಿಷ್ಣುವರ್ಧನ್ ಅವರು ಮುಂದೆ ಕನ್ನಡ ಚಲನಚಿತ್ರರಂಗದಲ್ಲಿ ತಮ್ಮದೇ ಸ್ಥಾನವೊಂದನ್ನು ಗುರುತಿಸಿಕೊಂಡರು. ಹಾಗೆಯೇ ಈ ಅವಧಿಯಲ್ಲಿ ಆಗಮಿಸಿದ ಅನಂತನಾಗ್, ಲೋಕೇಶ್, ಅಂಬರೀಶ್, ಶ್ರೀನಾಥ್, ಶಂಕರ್‌ನಾಗ್, ಆರತಿ, ಮಂಜುಳ, ಪದ್ಮಪ್ರಿಯ, ಎಲ್.ವಿ.ಶಾರದಾ ಅವರು ಬೇಡಿಕೆಯ ಕಲಾವಿದರೆನಿಸಿದರು. ಮುಖ್ಯವಾಹಿನಿಯ ಚಿತ್ರಗಳನ್ನು ನಿರ್ದೇಶಿಸಿ ಮುಂಚೂಣಿಗೆ ಬಂದ ಪ್ರಮುಖರಲ್ಲಿ ವಿಜಯಾ ರೆಡ್ಡಿ, ವಿ. ಸೋಮಶೇಖರ್, ಎಸ್.ವಿ. ರಾಜೇಂದ್ರ ಸಿಂಗ್, ಭಾರ್ಗವ, ಕಾಶೀನಾಥ್ ಅವರು ಮುಂದೆ ಕಂಡುಕೊಂಡ ಯಶಸ್ಸು ಸಹ ಗಮನಾರ್ಹ.

ಕನ್ನಡದ ಪ್ರಯೋಗಗಳಿಂದ ಸ್ಫೂರ್ತಿ ಪಡೆದ ಪರಭಾಷೆಯ ಕ್ಯಾಮೆರಾಮೆನ್ ಬಾಲು ಮಹೇಂದರ್ (ಕೋಕಿಲಾ–1977) ಹಾಗೂ ಮಣಿರತ್ನಂ (ಪಲ್ಲವಿ–ಅನುಪಲ್ಲವಿ) ತಮ್ಮ ಮೊದಲ ಪ್ರಯತ್ನಗಳನ್ನು ಕನ್ನಡದಲ್ಲೇ ಮಾಡಿದ್ದು ವಿಶೇಷ. ತಮಿಳಿನ ಯಶಸ್ವೀ ನಿರ್ದೇಶಕರಾದ ಕೆ. ಬಾಲಚಂದರ್ (ತಪ್ಪಿದ ತಾಳ–1978) ಸಹ ಕನ್ನಡಕ್ಕೆ ತಮ್ಮ ಪ್ರಯೋಗಗಳನ್ನು ವಿಸ್ತರಿಸಿದರು.

ಹೀಗೆ ಕನ್ನಡ ಚಲನಚಿತ್ರರಂಗ ಒಂದೆಡೆ ಹೊಸ ಅಲೆಯ ರೋಮಾಂಚನದಲ್ಲಿ ಅನೇಕ ಹುಡುಕಾಟಗಳನ್ನು ನಡೆಸಿದರೆ



Downloaded From:www.kpscvaani.com

ಮುಖ್ಯವಾಹಿನಿಯ ಚಿತ್ರಗಳು ಅನೇಕ ಪ್ರಭಾವಗಳನ್ನು ಅರಗಿಸಿಕೊಳ್ಳುತ್ತಾ ಹೊಸ ಸಂವೇದನೆಯನ್ನು ಹೊತ್ತು ತಂದವು.

ಎಂಬತ್ತರ ದಶಕದ ಆರಂಭದ ವೇಳೆಗೆ ಒಂದು ಉದ್ಯಮವಾಗಿ ನೆಲೆ ಕಂಡುಕೊಂಡ ಕನ್ನಡ ಚಿತ್ರರಂಗ ಅದರ ಅಸ್ತಿಭಾರದ ಮೇಲೆಯೇ ಮುಂದಿನ ದಿನಗಳಲ್ಲಿ ತೀವ್ರ ಹುಡುಕಾಟ ನಡೆಸಿ ದಶದಿಕ್ಕುಗಳಿಗೂ ಕೈಚಾಚಿತು. ಮುಂದಿನ ಎರಡು ದಶಕಗಳಲ್ಲಿ (1981–2000) ಹಲವು ದಾಖಲೆಗಳು ಸೃಷ್ಟಿಯಾದವು. ಯುವ ಸಮೂಹ ಚಿತ್ರರಂಗಕ್ಕೆ ದಾಳಿ ಇಟ್ಟಿತು. ಹೊಸ ಪ್ರೋತ್ಸಾಹಕರ ಯೋಜನೆಗಳು ಜಾರಿಯಾದವು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಬಾಚಿಕೊಂಡ ಕನ್ನಡ ಚಿತ್ರಗಳು ಜಾಗತಿಕ ಮಟ್ಟದಲ್ಲಿ ಒಂದು ಗೌರವಸ್ಥಾನವನ್ನು ಪಡೆದವು.

ಈ ಅವಧಿಯಲ್ಲಿ ಡಾ. ರಾಜ್ ಅವರು ಇನ್ನೂರು ಚಿತ್ರಗಳಲ್ಲಿ ನಾಯಕ ನಟನಾಗಿ ಅಭಿನಯಿಸಿ ಹೊಸ ದಾಖಲೆ ಬರೆದರು. ಪುಟ್ಟಣ್ಣನವರ ಹೆಸರಿನಲ್ಲಿ ಅತ್ಯುತ್ತಮ ನಿರ್ದೇಶಕರಿಗೆ ವಾರ್ಷಿಕ ಪ್ರಶಸ್ತಿ ನೀಡುವ ಪರಂಪರೆ ಆರಂಭವಾಯಿತು. ಆನಂದ್ ಚಿತ್ರದ ಮೂಲಕ ತೆರೆಗೆ ಬಂದು ಯಶಸ್ಸು ಕಂಡ ಶಿವರಾಜ್ ಕುಮಾರ್ ಅವರನ್ನು ಅನುಸರಿಸಿ ಹೊಸ ಕಲಾವಿದರು ಲಗ್ಗೆ ಹಾಕಿದರು. ಪ್ರೇಮಲೋಕ ಚಿತ್ರದ ಮೂಲಕ ಹೊಸ ಸಂಚಲನ ಮೂಡಿಸಿದ ವಿ. ರವಿಚಂದ್ರನ್ ಅವರು ಕನ್ನಡದ ಚಿತ್ರಸಂಗೀತ ಮತ್ತು ಚಿತ್ರಗಳ ಮಾರುಕಟ್ಟೆಯನ್ನು ವಿಸ್ತರಿಸಿದರು. ಕಲಾವಿದರಾದ ರಾಮಕೃಷ್ಣ, ರಮೇಶ್ ಅರವಿಂದ್, ಜಗ್ಗೇಶ್, ವಿನೋದ್ ಆಳ್ವ, ವಿನೋದ್ ರಾಜ್, ದೇವರಾಜ್, ಪ್ರಭಾಕರ್, ಶಶಿಕುಮಾರ್, ಸುಧಾರಾಣಿ, ತಾರಾ, ಶೃತಿ, ಮಾಲಾಶ್ರೀ, ಉಮಾಶ್ರೀ, ಮೊದಲಾದವರು, ಹಿಂದಿನ ಯಶಸ್ವಿ ನಿರ್ದೇಶಕರ ಜೊತೆಗೆ ದಿನೇಶ್ ಬಾಬು, ಸುನೀಲ್ ಕುಮಾರ್ ದೇಸಾಯಿ, ಸುರೇಶ್ ಹೆಬ್ಳೀಕರ್, ಉಪೇಂದ್ರ, ನಾಗತಿಹಳ್ಳಿ ಚಂದ್ರಶೇಖರ್, ಕೋಡ್ಲು ರಾಮಕೃಷ್ಣನ್ ನಾರಾಯಣ್, ಓಂಪ್ರಕಾಶ್ ರಾವ್, ಸಾಯಿಪ್ರಕಾಶ್, ನಂಜುಂಡೇಗೌಡ, ಪಿ.ಎಚ್.ವಿಶ್ವನಾಥ್, ಫಣಿ ರಾಮಚಂದ್ರ, ಮೊದಲಾದವರು ಕನ್ನಡ ಚಿತ್ರರಂಗವನ್ನು ಮುನ್ನಡೆಸಿದರು.

ಸಂಗೀತ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಿದ ಹಂಸಲೇಖ ಅವರು ಕನ್ನಡ ಚಿತ್ರಗಳ ಯಶಸ್ಸಿನಲ್ಲಿ ಬಹುಮುಖ್ಯ ಪಾತ್ರ ವಹಿಸಿದರು. ಸಮಾನಾಂತರ ಚಿತ್ರಗಳ ಪರಂಪರೆಯನ್ನು ಜೀವಂತವಾಗಿಟ್ಟವರಲ್ಲಿ ಗಿರೀಶ್ ಕಾಸರವಳ್ಳಿ, ನಾಗಾಭರಣ ಅವರು ಪ್ರಮುಖರು. ಅವರ 'ಮೂರು ದಾರಿಗಳು', 'ತಬರನ ಕತೆ', 'ಬಣ್ಣದ ವೇಷ', 'ಮನೆ, ಕ್ರೌರ್ಯ', 'ತಾಯಿ ಸಾಹೇಬ' ಮತ್ತು 'ದ್ವೀಪ' ಚಿತ್ರಗಳು ಈ ಎರಡು ದಶಕಗಳಲ್ಲಿ ಬಿಡುಗಡೆಯಾಗಿ ಜಾಗತಿಕ ಮನ್ನಣೆ ಪಡೆದವು. 2000ದಲ್ಲಿ ತೆರೆಕಂಡ ನಿರ್ದೇಶಕ ಪಿ. ಶೇಷಾದ್ರಿ ಅವರ 'ಮುನ್ನುಡಿ' ಚಿತ್ರದ ಮೂಲಕ ಈ ಪರಂಪರೆ ಮುಂದುವರೆಯಿತು.

2001ರ ನಂತರ ಚಲನಚಿತ್ರಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಾಣವಾಗತೊಡಗಿದವು. ಇದಕ್ಕೆ ಮುಖ್ಯ ಕಾರಣ ಅನ್ಯ ಕ್ಷೇತ್ರದಲ್ಲಿ ಯಶಸ್ಸು ಕಂಡ ಉದ್ಯಮಿಗಳು, ಕಿರುತೆರೆಯಲ್ಲಿ ಅನುಭವ ಪಡೆದ ತಜ್ಞರು ಮತ್ತು ಸಿನಿಮಾಸಕ್ತ ಯುವಕರು ತಮ್ಮ ವೃತ್ತಿಯನ್ನು ತೊರೆದು ಚಲನಚಿತ್ರ ಕ್ಷೇತ್ರದಲ್ಲಿ ತೊಡಗಿಸಿಕೊಂಡದ್ದು. ಹೀಗಾಗಿ ಕನ್ನಡ ಸಿನೆಮಾಗಳೇ ಪರಸ್ಪರ ಸ್ಪರ್ಧೆ ಹುಡುವ ವಾತಾವರಣ ಸೃಷ್ಟಿಯಾಯಿತು. 2019ರಲ್ಲಿ ಭಾರತದ ಭಾಷೆಗಳಲ್ಲಿ ತಯಾರಾದ ಚಿತ್ರಗಳ ಪಟ್ಟಿಯಲ್ಲಿ ಕನ್ನಡಚಿತ್ರಗಳದ್ದು ಮೊದಲ ಸ್ಥಾನ ಪಡೆಯಿತು. ಕೊನೆಯ ಈ ಇಪ್ಪತ್ತು ಚಿಲ್ಲರೆ ವರ್ಷಗಳಲ್ಲಿ ಕನ್ನಡ ಚಿತ್ರಗಳು ಸಂಖ್ಯೆಯಲ್ಲಿ ಹೆಚ್ಚಿನಿಸಿದರೂ ಯಶಸ್ಸು ಕಂಡ ಚಿತ್ರಗಳ ಪ್ರಮಾಣ ಕಡಿಮೆಯೇ. ಅದರೂ ಹುಚ್ಚ, ಮುಂಗಾರು ಮಳೆ, ದುನಿಯಾ, ಅರಸು, ಅಪ್ಪು, ಸಾರಥಿ, ರಂಗಿ ತರಂಗ, ಕಿರಿಕ್ ಪಾರ್ಟಿ, ಕಾಂತಾರ, ರಾಜಕುಮಾರ, ಕಾಟೇರಾ, ಮುಂತಾದ ಚಿತ್ರಗಳು ಗಲ್ಲಾ ಪೆಟ್ಟಿಗೆಯಲ್ಲಿ ಅಭೂತಪೂರ್ವ ದಾಖಲೆಯನ್ನು ಸೃಷ್ಟಿಸಿದವು. ಕಲಾವಿದರಾದ ಸುದೀಪ್, ದರ್ಶನ್, ಗಣೇಶ್, ದುನಿಯಾ ವಿಜಯ್, ಯಶ್, ದಿಗಂತ್, ರಂಗಾಯಣ ರಘು, ಮುಂತಾದ ಕಲಾವಿದರು ಜನಪ್ರಿಯರಾದರು. ಅಪಾರ ಜನಪ್ರಿಯತೆ ಪಡೆದಿದ್ದ ಪುನೀತ್ ರಾಜ್‌ಕುಮಾರ ಅವರ ಅನಿರೀಕ್ಷಿತ ಮರಣದಿಂದ ಕನ್ನಡ ಚಿತ್ರರಂಗ ಒಬ್ಬ ಕಲಾವಿದ, ನಿರ್ಮಾಪಕ ಮತ್ತು ಕ್ರಿಯಾಶೀಲ ಚೇತನವೊಂದನ್ನು ಕಳೆದುಕೊಂಡಿತು.

ಇಪ್ಪತ್ತೊಂದನೇ ಶತಮಾನದ ಆದಿಭಾಗವು ಹೊಸ ನಿರ್ದೇಶಕರ ಕ್ರಿಯಾಶೀಲತೆಯ ಯಶಸ್ಸಿಗೆ ಸೇರಿದೆ. ಯೋಗರಾಜ್ ಭಟ್ (ಮುಂಗಾರು ಮಳೆ) ಸೂರಿ (ದುನಿಯಾ), ಪವನ್ ಕುಮಾರ್ (ಲೂಸಿಯಾ, ಯೂ ಟರ್ನ್), ಅನೂಪ್ ಭಂಡಾರಿ (ರಂಗಿ ತರಂಗ) ಡಿ. ಸತ್ಯ ಪ್ರಕಾಶ್ (ರಾಮ ರಾಮ ರೇ), ಬಿ. ಗಿರಿರಾಜ್ (ಜಟ್ಟ) ಕೆ.ಎಂ. ಚೈತನ್ಯ (ಆ ದಿನಗಳು), ಹೇಮಂತ ರಾವ್ (ಕವಲುದಾರಿ) ರಕ್ಷಿತ್ ಶೆಟ್ಟಿ, (ಉಳಿದವರು ಕಂಡಂತೆ), ಕವಿತಾ ಲಂಕೇಶ್ (ದೇವೀರಿ) ಲಿಂಗದೇವರು ಬಿ.ಎಸ್ (ನಾನು ಅವನಲ್ಲ, ಅವಳು), ಮನ್ಸೋರೆ (ನಾತಿ ಚರಾಮಿ), ಪ್ರಶಾಂತ್ ನೀಲ್ (ಕೆಜಿಎಫ್ ಸರಣಿ), ರಿಷಭ್ ಶೆಟ್ಟಿ (ಕಾಂತಾರ), ತರುಣ್ ಸುಧೀರ್ (ಕಾಟೇರಾ).

ಈ ಶತಮಾನದ ಅತ್ಯಂತ ಅಚ್ಚರಿಯ ಮತ್ತು ಶ್ರೇಷ್ಠ ಚಿತ್ರವೆಂದರೆ ನಿಸ್ಸಂದೇಹವಾಗಿ 'ತಿಥಿ' ಚಿತ್ರ. ರಾಮ್ ರೆಡ್ಡಿ ಅವರ ವಿಶಿಷ್ಟ ಪ್ರಯೋಗದಲ್ಲಿ ಅರಳಿದ ಈ ಚಿತ್ರ 68ನೇ ಲೋಕೋರ್ನೋ ಜಾಗತಿಕ ಚಿತ್ರೋತ್ಸವದಲ್ಲಿ ಎರಡು ಪ್ರಶಸ್ತಿಗಳನ್ನು ಗೆದ್ದ ಮೊದಲ ಭಾರತೀಯ ಚಿತ್ರವೆನಿಸಿತು. ನಿರ್ದೇಶಕ ರಾಮ್ ರೆಡ್ಡಿ ಅವರು ನಿರ್ದೇಶನಕ್ಕಾಗಿ ಗೋಲ್ಡನ್ ಲೆಪರ್ಡ್ ಪ್ರಶಸ್ತಿ ಪಡೆದರು. ನಟನೆಗೆ, ಅಪರಿಚಿತರಾದ ಚಿತ್ರೀಕರಣ ನಡೆದ ಹಳ್ಳಿಯ ಬಹುತೇಕ ಜನರೇ ಅಭಿನಯಿಸಿದ್ದ ಈ ಚಿತ್ರ ಸಿದ್ಧಜಾಡನ್ನು ತೊರೆದು ನಿರೂಪಣೆಯಲ್ಲಿ ಹೊಸ ಮಾರ್ಗವೊಂದನ್ನು ತೆರೆಯಿತು.

ಹೀಗೆ ವಾಣಿಜ್ಯ ಮತ್ತು ಕಲಾತ್ಮಕ ಎರಡೂ ಚಿತ್ರ ಪಂಥದಲ್ಲಿ ಯಶಸ್ವೀ ಚಿತ್ರಗಳನ್ನು ನಿರ್ಮಿಸುತ್ತಾ ಬಂದಿರುವ ಕನ್ನಡ ಚಿತ್ರರಂಗ ಅತ್ಯಂತ ಸ್ಪಂದನಶೀಲ ಉದ್ಯಮವಾಗಿ ಬೆಳೆದು ಬಂದಿದೆ. ಒಂದು ಕಾಲದಲ್ಲಿ ಮದ್ರಾಸಿನಲ್ಲಿ ನೆಲೆಯಾಗಿದ್ದ ಚಿತ್ರರಂಗವು ರಾಜ್ಯದಲ್ಲಿಯೇ ಈಗ ಆಳವಾಗಿ ಬೇರು ಬಿಟ್ಟಿದೆ. ಮಾರುಕಟ್ಟೆಯ ಹಾಗೂ ಸೌಲಭ್ಯಗಳ ಮಿತಿಯಲ್ಲಿಯೂ ಅದರ ಪ್ರಯೋಗಶೀಲತೆಗೆ ಕೊರತೆಯಾಗದಂತೆ ಸೃಜನಶೀಲತೆಯನ್ನು ಮೆರೆದು ಕಾಲಕಾಲಕ್ಕೆ ಹಲವು ಅಚ್ಚರಿಗಳನ್ನು ಹೊರಹಾಕುತ್ತಾ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಇರುವುದನ್ನು ಗುರುತಿಸಿಕೊಂಡಿದೆ.


Downloaded From:www.kpscvaani.com

# ಬೇಸಿಗೆಯ ಬೇಗೆ ನೀಗುವ ಬಗೆ



**ಬೇಸಿಗೆಯಲ್ಲಿ ದೇಹದಲ್ಲಾಗುವ ಪರಿಣಾಮಗಳು ಮತ್ತು ದೇಹದ ರಕ್ಷಣೆ ಮಾಡಿಕೊಳ್ಳುವುದನ್ನು ತಿಳಿಯುವುದು ಅವಶ್ಯಕ.**

ಡಾ॥ ಕರವೀರಪ್ರಭು ಕ್ಯಾಲಕೊಂಡ

ರಗ್ಗು ಹೊದ್ದರೂ, ಬೆನ್ನ ಹುರಿಯಲ್ಲಿ ಚಳಿ ಹುಟ್ಟಿಸುವ ಚಳಿಗಾಲದ ನಡುಗು ಕಡಿಮೆಯಾಗುತ್ತಿದ್ದಂತೆ, ಬೇಸಿಗೆ ಸದ್ದಿಲ್ಲದೇ ಹೆಜ್ಜೆ ಹಾಕುವುದು. ಎಳ್ಳಮಾವಾಸ್ಯೆಗೆ ಎಳ್ಳು ಕಾಳಿನಷ್ಟು ಕಾಣುವ ಬಿಸಿಲು ಮೈಗೆ ಹಿತಕರ. ಅವರಾತ್ರಿಗೆ ಅವರೆಕಾಳಿನಷ್ಟು ಬಿಸಿಲು ಹೆಚ್ಚಾದರೂ, ಅದು ಮನಸ್ಸಿಗೆ ಅಹ್ಲಾದ, ಆನಂದವನ್ನು ನೀಡುತ್ತದೆ. ಅತಿಯಾದರೆ ಅಮೃತವೂ ವಿಷವಂತೆ, ಇದಕ್ಕೆ ಬೇಸಿಗೆಯೂ ಹೊರತಾಗಿಲ್ಲ. ಶಿವರಾತ್ರಿ ಬರುತ್ತಿದ್ದಂತೆ ಬಿಸಿಲಿನ ತಾಪಕ್ಕೆ ಅರಿವಿಲ್ಲದಂತೆ ಶಿವ ಶಿವ ಎಂದು ಶಿವಧ್ಯಾನ ಮಾಡುವರು. ಹೋಳಿಯ ರಂಗಿನಾಟದಿಂದ ಬೇಸಿಗೆಯ ರಂಗುಬರುತ್ತದೆ, ಬಿಸಿಲಿನ ಬಣ್ಣವೇರುತ್ತದೆ, ತಾಪದ ಬಿಸಿ ತಟ್ಟುತ್ತದೆ. ಇದು ಪ್ರತಿವರ್ಷವೂ ಬೇಸಿಗೆಯಲ್ಲಿ ಇದ್ದದ್ದೇ.

**" ಬ್ಯಾಸಗಿ ದಿವಸಕ ಬೇವಿನ ಮರತಂಪ**
**ಭೀಮಾರತಿಯಂಬ ಹೊಳಿತಂಪ: ಹಡದವ್ವ**
**ನೀ ತಂಪ ನನ್ನ ತವರಿಗೇ......"**

ಹಾಗೆಂದು ಬೇಸಿಗೆಯನ್ನು ಬೇವಿನ ಮರದ ಬುಡದಲ್ಲಾಗಲೀ, ಭೀಮಾರತಿ ಹೊಳೆಯಲ್ಲಾಗಲೀ ಕಳೆಯಲಾಗುವುದಿಲ್ಲ. ಬೇಸಿಗೆಯಲ್ಲಿ ಬಾನಿನಲ್ಲಿ ಕೆಂಡ ಕಾರುವ ಸೂರ್ಯ, ಧರೆಯಲ್ಲಿ ದಾಹ, ಉರಿಯ ವರ್ತುಲದೊಳಗೆ ಬದುಕು ಗಿರಕಿ ಹೊಡೆಯುತ್ತದೆ. ಈ ವರ್ಷ ಬೇಸಿಗೆಯ ಬೇಗೆ ಈಗಾಗಲೇ ಕಲ್ಪನಾತೀತ ಮಟ್ಟಕ್ಕೆ



Downloaded From:www.kpscvaani.com

ಮುಟ್ಟಿದೆ. ಮೈಗೆ ಮುಳ್ಳು ಚುಚ್ಚಿದ ಅನುಭವವಾಗುತ್ತದೆ. ಹಾಗೆಂದು ಬಿಸಿಲಿನ ಬೇಗೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ನಮ್ಮ ಜಾಣತನ ಅಡವಿರುವುದು ಬ್ಯಾಸಗಿ ಬಿಸಲಾಗ ಬದುಕುವುದ್ಯಾಂಗ ಎಂಬುದನ್ನು ಅರಿಯುವಲ್ಲಿ ಬೇಸಿಗೆ ಬೇಗೆ ನೀಗುವ ಬಗೆ ತಿಳಿಯುವಲ್ಲಿ.

ಮಾನವನು ಉಷ್ಣಾಂಶವನ್ನು ಎಷ್ಟರ ಮಟ್ಟಿಗೆ ಸಹಿಸಬಲ್ಲನು ? ಎನ್ನುವುದರ ಬಗ್ಗೆ ಅನೇಕ ಸಂಶೋಧನೆಗಳು, ಅಧ್ಯಯನಗಳು ಅವ್ಯಾಹತವಾಗಿ ನಡೆದಿವೆ. ಮರುಭೂಮಿಯಲ್ಲಿ ವಾಸಿಸುವ ಜನರನ್ನು ಅಭ್ಯಸಿಸಿ ಅನೇಕ ಮಾಹಿತಿಗಳನ್ನು ಕಲೆ ಹಾಕಿರುವ ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ, ಚರ್ಚಿಸಿದ್ದಾರೆ. ಅಮೆರಿಕೆಯ ಡಾ॥ ನ್ಯೂಬರ್ಗ್ ಈ ಕ್ಷೇತ್ರದ ಸಂಶೋಧನೆಯಲ್ಲಿ ಅಗ್ರಗಣ್ಯರು. ಶರೀರ ನಾವು ಸಾಮಾನ್ಯವಾಗಿ ಎಣಿಸುವುದಕ್ಕಿಂತ ಹೆಚ್ಚು ಪಟ್ಟು ಉಷ್ಣಾಂಶತೆಯನ್ನು ತಡೆಯುವ ತಾಕತ್ತು ಹೊಂದಿದೆ ಎಂಬುದು ಅವರ ಅಧ್ಯಯನಗಳಿಂದ ಸ್ಪಷ್ಟವಾಗಿದೆ.

**ಪ್ರಕೃತಿದತ್ತ ವರ**

ತಲೆಯಲ್ಲಿರುವ ಹೈಪೋಥಲಮಸ್‌ದ ಮುಂಭಾಗದಲ್ಲಿರುವ ಕೇಂದ್ರ ಉಷ್ಣಾಂಶ ಹೆಚ್ಚಾದಾಗ ಪ್ರಚೋದನೆಗೊಂಡು, ಉಷ್ಣಾಂಶ ನಿಯಂತ್ರಣಕ್ಕೆ ಅವಶ್ಯವಿರುವ, ಕಾರ್ಯಕಲಾಪಗಳನ್ನು ಚಲಾವಣೆಗೆ ತರುತ್ತದೆ. ಚರ್ಮಕ್ಕೆ ಮೊದಲು ಬಿಸಿ ತಟ್ಟುತ್ತದೆ. ಅದರಲ್ಲಿಯ ಉಷ್ಣ ಗ್ರಹಿಕೆಗಳು ಚುರುಕಾಗುತ್ತವೆ. ನರಗಳ ಮೂಲಕ ಸಂದೇಶವನ್ನು ಉಷ್ಣಾಂಶ ನಿಯಂತ್ರಣ ಕೇಂದ್ರಕ್ಕೆ ರವಾನಿಸುತ್ತವೆ. ಪ್ರತಿಫಲವಾಗಿ ಅದು ರಕ್ತ ಸಂಚಾರ ಹೆಚ್ಚಿಸಿ, ಶರೀರಾದ್ಯಂತ ಬೆವರು ಗ್ರಂಥಿಗಳಿಂದ ಜಾಸ್ತಿ ಬೆವರು ಹೊರ ಸೂಸುವಂತೆ ಮಾಡುತ್ತದೆ. ಒಮ್ಮೆ ಶರೀರ ಬೆವರಿದರೆ ಉಷ್ಣಾಂಶ ಕಡಿಮೆಯಾಗುತ್ತದೆ. ಬಿಸಿಲಿನ ತಾಪಕ್ಕೆ ಬೆವರಿನ ತೇವ ಆವಿಯಾಗತೊಡಗಿದಾಗ ತಣ್ಣಗಿನ ಅನುಭವವಾಗುತ್ತದೆ. ಇದಕ್ಕೆ 'ಕೂಲಿಂಗ್ ಎಫೆಕ್ಟ್' ಎನ್ನುವರು. ಇದು ಶರೀರಕ್ಕೆ ಬಿಸಿಲಿನ ತಾಪ ತಡೆಯಲು ಪ್ರಕೃತಿದತ್ತ ವರ. ಬೆವರಿನೊಡನೆ ಶರೀರದಲ್ಲಿಯ ನೀರು ಹೊರ ಹೋಗಿ, ಅದರ ಪ್ರಮಾಣ ಕಡಿಮೆಯಾಗುತ್ತದೆ. ಆಗ ಶರೀರ ಬಾಯಾರಿಕೆಯ ಮೂಲಕ ನೀರು ಬೇಕೆಂದು ತಿಳಿಸುತ್ತದೆ. ಅದಕ್ಕೇ ಬೇಸಿಗೆಯಲ್ಲಿ ಹೆಚ್ಚು ಬಾಯಾರಿಕೆಯಾಗುವುದು, ನೀರು ಕುಡಿಯುವುದು ಎರಡೂ ಸ್ವಾಭಾವಿಕ. ನೀರು ಕುಡಿಯದಿದ್ದಲ್ಲಿ ನಿರ್ಜಲೀಕರಣವಾಗುವುದು.

**ಬೆವರಿಗೆ ಬೇಡ ಬೇಸರಿಕೆ**

ಬೆವರು ಎಂದರೇನು ? ಅದರಲ್ಲಿ ಏನಿರುತ್ತದೆ ? ಅದು ಹೇಗೆ ಉತ್ಪತ್ತಿಯಾಗುತ್ತದೆ ? ಎಂಬುದನ್ನು ತಿಳಿದುಕೊಂಡರೆ ಬೆವರು ಶರೀರಕ್ಕೆ ಎಷ್ಟು ಮುಖ್ಯ, ಅದರ ಪಾತ್ರ ಏನು ಎನ್ನುವುದು ಗೊತ್ತಾಗುತ್ತೆ. ಮಾನವನ ಶರೀರದಾದ್ಯಂತ ಸಹಸ್ರಾರು ಬೆವರು ಗ್ರಂಥಿಗಳಿರುತ್ತವೆ. ಹೆಂಗಸರು ಗಂಡಸರಲ್ಲಿ ಸಮ ಸಂಖ್ಯೆಯಲ್ಲಿ ಇರುತ್ತವೆ. ಆದರೆ ಪ್ರಕೃತಿ ನಿಯಮದಂತೆ ಹೆಂಗಸರ ಗ್ರಂಥಿಗಳು ಗಂಡಸರ ಗ್ರಂಥಿಗಳಿಗಿಂತ ಕಮ್ಮಿ ಬೆವರನ್ನು ಉತ್ಪಾದಿಸುತ್ತವೆ.

**" ಜೀವಾಮೃತ "**

ಐದು ಲೋಟ ಕಾದಾರಿದ ನೀರಿಗೆ ಬೊಗಸೆ ಸಕ್ಕರೆ, ಮೂರು ಬೆರಳಿನಿಂದ ಚಿಟಿಕೆ ಉಪ್ಪು, ಎರಡು ಬೆರಳಿನಿಂದ ಚಿಟಿಕೆ ಅಡುಗೆ ಸೋಡ ಹಾಗೂ ಒಂದು ಹೋಳು ನಿಂಬೆಹಣ್ಣಿನ ರಸ ಹಿಂಡಿ ಜೀವಾಮೃತವನ್ನು ತಯಾರಿಸಿ. ಈ ಪಾನಕವನ್ನು ಅತಿ ಬಿಸಿಲಿನಲ್ಲಿ ಕೆಲಸ ಮಾಡಿ ದಣಿದು ಬಂದವರಿಗೆ ನೀಡಿ. ಇದು ಅಗತ್ಯ ನೀರು, ಲವಣ ಹಾಗೂ ಶಕ್ತಿಯನ್ನು ಪೂರೈಸುತ್ತದೆ.



ಬೆವರು ಗ್ರಂಥಿಗಳಲ್ಲಿ ಎರಡು ವಿಧ: ಎಕ್ರಿನ್ ಮತ್ತು ಅಪೋಕ್ರಿನ್, ತುಟಿಗಳು, ಗುಪ್ತಾಂಗಗಳು, ಮೂಗಿನ ಸೆಲೆಯ ಒಳಭಾಗ, ಕಿವಿಯ ಒಳಭಾಗಗಳನ್ನು ಬಿಟ್ಟು ದೇಹದ ಮಿಕ್ಕ ಕಡೆಯೆಲ್ಲಾ ಎಕ್ರಿನ್ ಗ್ರಂಥಿಗಳು ಇರುತ್ತವೆ. ನಮಗೆ ಗೊತ್ತಾಗದ ಪ್ರಮಾಣದಲ್ಲಿ ಇವು ಬೆವರು ಸೂಸುತ್ತಿರುತ್ತವೆ. ಅಪೋಕ್ರಿನ್ ಗ್ರಂಥಿಗಳು ಕಂಕುಳಲ್ಲಿ, ಗುಪ್ತಾಂಗಗಳ ಸುತ್ತ ಇದ್ದು ಅವು ಹೊರ ಸೂಸುವ ಬೆವರು ನಮಗೆ ಗೊತ್ತಾಗುವ ಪ್ರಮಾಣದಲ್ಲಿ ಇರುತ್ತದೆ. ಈ ಅಪೋಕ್ರಿನ್ ಗ್ರಂಥಿಗಳು ಬರೀ ಬಿಸಿಲಿನ ತಾಪಕ್ಕಲ್ಲದೆ, ಮನಸ್ಸು ಉದ್ರೇಕಗೊಂಡಾಗಲೂ ಬೆವರು ಸುರಿಸುತ್ತವೆ.

ಬೆವರಿನಲ್ಲಿ ಶೇಕಡ 99 ಭಾಗ ನೀರು, ಮಿಕ್ಕ ಭಾಗದಲ್ಲಿ ಸೋಡಿಯಂ ಕ್ಲೋರೈಡ್, ಪೊಟ್ಯಾಸಿಯಂ, ಗ್ಲೂಕೋಸ್ ಮತ್ತು ಇತರ ರಾಸಾಯನಿಕ ವಸ್ತುಗಳಿರುತ್ತವೆ. ಬೆವರು ಉತ್ಪತ್ತಿಯಾದಾಗ ಯಾವ ವಾಸನೆಯೂ ಇರುವುದಿಲ್ಲ. ನಂತರ ಅದು ಚರ್ಮದ ಮೇಲಿರುವ ಬ್ಯಾಕ್ಟೀರಿಯಾ ಜೊತೆ ಸೇರಿ ವಾಸನೆಯುಕ್ತವಾಗುತ್ತದೆ. ಈ ವಾಸನೆಯನ್ನು ನಿವಾರಿಸಲು ಬಹಳಷ್ಟು ಮಂದಿ ಕಾಸ್ಮೆಟಿಕ್ ಸಾಧನಗಳನ್ನು ಬಳಸುತ್ತಾರೆ.

ಉದಾ : ಆ್ಯಂಟಿಪರ್‌ಸ್ಪಿರೆಂಟ್, ಡಿಯೋಡರೆಂಟ್ ಇತ್ಯಾದಿ. ಇವುಗಳನ್ನು ಉಪಯೋಗಿಸುವುದರಿಂದ ಅಡ್ಡಿಯೇನಿಲ್ಲ. ಆದರೆ ಇಲ್ಲಿ ಬಹುಮುಖ್ಯವಾಗಿ ಗಮನದಲ್ಲಿಡಬೇಕಾದ ಅಂಶವೇನೆಂದರೆ ಬೆವರಿನ ವಾಸನೆಯನ್ನು ತಡೆಗಟ್ಟುವ ನೆವದಲ್ಲಿ ಬೆವರುವುದನ್ನೇ ತಡೆಗಟ್ಟಬಾರದು. ಬೇಸಿಗೆಯಲ್ಲಿ ಬೆವರುವುದು ಉಸಿರಾಡುವಷ್ಟೇ ಸಹಜ. ಪ್ರಕೃತಿ ನಿಯಮಿತ ರೀತಿಗೆ ಅಡ್ಡಿಯಾದರೆ ಶರೀರಕ್ಕೆ ಹಾನಿ. ಹೆಚ್ಚು ಬೆವರಿನ ವಾಸನೆ ಇದ್ದರೆ ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡುವುದು ಒಳಿತು.

**ತಪ್ಪು ತಿಳವಳಿಕೆಗಳು**

ಬೇಸಿಗೆಯ ಬೇಗೆಯನ್ನು ತಡೆಯುವ ಬಗ್ಗೆ ನಾನಾ ರೀತಿಯ ತಪ್ಪು ತಿಳವಳಿಕೆಗಳು ನಮ್ಮಲ್ಲಿ ಇವೆ. ಅಜ್ಞಾನ,



Downloaded From:www.kpscvaani.com

ಅಶಿಕ್ಷಿತತೆಗಳ ಲಾಭ ಪಡೆದ ಅವು ಸಾಕಷ್ಟು ಶಕ್ತಿಯುತವಾಗಿ ಬೆಳೆದಿವೆ. ಹೊಗೆ ಸೊಪ್ಪು ಅಥವಾ ಬಬಲ್‌ಗಮ್ ಅಗಿಯುತ್ತಾರೆ, ಮಾದಕ ದ್ರವ್ಯಗಳನ್ನು ಸೇವಿಸಿದರೆ ಬಾಯಾರಿಕೆ ಆಗುವುದಿಲ್ಲ ಎನ್ನುತ್ತಾರೆ. ಇವು ಕೆಲಹೊತ್ತು ನಮ್ಮ ಮನಸ್ಸನ್ನು ಬಾಯಾರಿಕೆಯ ಬಯಕೆಯಿಂದ ದೂರವಾಗಿಸಬಹುದೇ ವಿನಃ ದಾಹವನ್ನು ದಮನಮಾಡುವುದಿಲ್ಲ. ಸ್ವಲ್ಪ ಹೊತ್ತಿನ ನಂತರ ನೀರು ಕುಡಿಯುವುದು ಅನಿವಾರ್ಯವಾಗುತ್ತದೆ. ಹಾಗೆಯೇ ಐಸ್-ಕ್ರೀಂ, ತಂಪು ಪಾನೀಯಗಳನ್ನು ಸೇವಿಸಿದಾಗ ತಂಪು ಅನುಭವ ನೀಡುತ್ತವೆಯೇ ಹೊರತು ಬಾಯಾರಿಕೆಯನ್ನು ಹೋಗಲಾಡಿಸುವುದಿಲ್ಲ. ವೈಜ್ಞಾನಿಕ ಜ್ಞಾನದ ಅಭಾವದಿಂದ ಇಂಥ ತಪ್ಪು ತಿಳವಳಿಕೆಗಳು ನಮ್ಮ ಜನರಲ್ಲಿ ಇವೆ.

ಸೂರ್ಯನ ಪ್ರಖರ ಕಿರಣಗಳಿಗೆ ದೀರ್ಘಕಾಲದವರೆಗೆ ಮೈಯೊಡ್ಡುವುದರಿಂದ ಸೂರ್ಯಾಘಾತ ಸಂಭವಿಸುತ್ತದೆ. ಸಿಡಿಯುವಂತಹ ತಲೆನೋವಿನೊಂದಿಗೆ ವಿಪರೀತ ಜ್ವರ ಸೂರ್ಯಾಘಾತದ ಮುಖ್ಯ ಲಕ್ಷಣ. ತಲೆ ಸುತ್ತಬಹುದು, ವಾಂತಿ ಆಗಬಹುದು, ಚರ್ಮವು ಬಿಸಿಯಾಗಿ ಒಣಗುವುದು, ಮುಖ ಕೆಂಪಗಾಗಬಹುದು, ಇಷ್ಟಾದರೂ ಮೈ ಬೆವರುವುದಿಲ್ಲ. ಹೊಟ್ಟೆಯಲ್ಲಿ ಕಿಚ್ಚು ತುಂಬಿದಷ್ಟು ಸಂಕಟವಾಗುವುದು. ಚಡಪಡಿಸಿ ಒಮ್ಮಿಂದೊಮ್ಮೆಲೆ ಪ್ರಜ್ಞಾಹೀನರಾಗಬಹುದು. ನಾಡಿ ಬಡಿತ ತ್ವರಿತಗೊಳ್ಳುವುದು, ಜ್ವರ 108 ಡಿಗ್ರಿ ಫೇರನ್ ಹೀಟ ಅಥವಾ ಅದಕ್ಕಿಂತ ಅಧಿಕವಾಗಬಹುದು. ಜ್ವರದ ಹೆಚ್ಚಳದಿಂದ ದೇಹಕ್ಕೆ ಹಾನಿಯಾಗಬಹುದು. ಚಿಕಿತ್ಸೆಯಿಂದ ವಂಚಿತರಾದಲ್ಲಿ ಸಾವು ಕೂಡ ಸಂಭವಿಸಬಹುದು.

**ಪ್ರಥಮ ಉಪಚಾರ**

ಜ್ವರ ಒಂದೇ ಸಮನೆ ಹೆಚ್ಚಾದಾಗ ವೈದ್ಯರ ಬಳಿಗೆ ಕರೆದುಕೊಂಡು ಹೋಗಲು ಆತುರ ಪಡದೇ ಪ್ರಥಮೋಪಚಾರ ನೀಡುವುದು ಅತ್ಯಂತ ಪ್ರಮುಖವಾದದ್ದು. ರೋಗಿಯನ್ನು ಮಲಗಿಸಿ ಹಣೆಯ ಮೇಲೆ ತಣ್ಣೀರ ಪಟ್ಟಿ ಹಾಕಬೇಕು. ಮೈಯನ್ನು ಒದ್ದೆ ಬಟ್ಟೆಯಿಂದ ಒರೆಸಬೇಕು, ಒದ್ದೆ ಬಟ್ಟೆಗಳನ್ನು ತೊಡಿಸಬೇಕು. ಐಸ್ ತುಂಡುಗಳನ್ನು ಬಟ್ಟೆಗಳಲ್ಲಿ ಸುತ್ತಿ ತಲೆ, ಕುತ್ತಿಗೆ ಮತ್ತು ಶರೀರದ ಸುತ್ತ ಇಡಬೇಕು. ರೋಗಿಯ ಸುತ್ತ ಮುತ್ತ ಜನರು ಮುತ್ತುವುದನ್ನು ತಪ್ಪಿಸಿ, ಸಾಕಷ್ಟು ಗಾಳಿ ಆಡುವಂತೆ ಮಾಡಬೇಕು. ಫ್ಯಾನು ಹಾಕಬೇಕು. ರೋಗಿಯ ಕೈಕಾಲುಗಳನ್ನು ಉಜ್ಜಿ, ರಕ್ತ ಸಂಚಾರವಾಗುವಂತೆ ಮಾಡಬೇಕು. ರೋಗಿಯು ಪ್ರಜ್ಞಾವಂತನಾದ ಮೇಲೆ ತಂಪಾದ ಪಾನೀಯವನ್ನು ಕುಡಿಸಬೇಕು.

**ಮುಂಜಾಗ್ರತಾ ಕ್ರಮಗಳು**

"ಪ್ರಕ್ಷಾಲನಾತ್ ಹಿ ಪಂಕಸ್ಯ ದೂರಾದ ಸ್ಪರ್ಶನಂವರ" ಅಂದರೆ ರೋಗ ಬಾರದ ಹಾಗೆ ನೋಡಿ ಕೊಳ್ಳುವುದರಲ್ಲಿಯೇ ಜಾಣತನವಿರುವುದು. ಆದ್ದರಿಂದ ಬೇಸಿಗೆಯ ಬಿಸಿಲಿನಲ್ಲಿ ಅನಾವಶ್ಯಕ ಅಡ್ಡಾಡದಿರುವುದು ಕ್ಷೇಮಕರ. ತಲೆಗೆ ಟೋಪಿ ಇಲ್ಲವೆ ಹ್ಯಾಟನ್ನು ಹಾಕಿ ಬಿಸಿಲಿನ ರಕ್ಷಣೆ ಪಡೆಯಬೇಕು. ಛತ್ರಿಯನ್ನು ಬಳಸಬಹುದು. ಇಂಥ ರಕ್ಷಣಾ ಸಾಧನಗಳನ್ನು ಬಳಸದೇ ಬಿಸಿಲಲ್ಲಿ ತಿರುಗಾಡುವುದೆಂದರೆ ಬಿಸಿಲಿನಿಂದಾಗುವ ದುಷ್ಪರಿಣಾಮಗಳನ್ನು ಸ್ವಾಗತಿಸಿದಂತೆ. ಮರಳುಗಾಡಿನಲ್ಲಿಯ ಜನ ಅಡಿಯಿಂದ ಮುಡಿವರೆಗೆ ಬಟ್ಟೆ ಏಕೆ ಧರಿಸುತ್ತಾರೆಂದುಕೊಂಡಿದ್ದೀರಿ? ಸೂರ್ಯನ ತೀಕ್ಷ್ಣ ಕಿರಣಗಳಿಗೆ ಸತತವಾಗಿ ಗುರಿಯಾದರೆ ಚರ್ಮದ ನೈಜ ಸೌಂದರ್ಯವೂ ಕುಂದುತ್ತದೆ. ಕೆಲವೊಮ್ಮೆ ಸುಟ್ಟಂತಾಗುತ್ತದೆ. ಅದಕ್ಕೆ ಬಿಸಿಲಿಗೆ ನೇರವಾಗಿ ಮೈ ಒಡ್ಡುವುದು ಒಳ್ಳೆಯದಲ್ಲ. ಪಾಶ್ಚಿಮಾತ್ಯ ದೇಶದಲ್ಲಿ ಬಿಸಿಲಿನ ಅಭಾವ ಇರುವುದರಿಂದ "ಡಿ" ಜೀವಸತ್ವದ ಕೊರತೆಯನ್ನು ನಿವಾರಿಸಲು ಅವರು 'ಸೂರ್ಯಸ್ನಾನ'ದ ಮೊರೆ ಹೋಗುತ್ತಾರೆ. ಆದರೆ ನಮಗೆ ಅವರ ಅನುಕರಣೆ ಅನಾವಶ್ಯಕ.

ಬಿಸಿಲಿನಲ್ಲಿ ಎಂದೂ ದಣಿವಾಗುವಂತಹ ವ್ಯಾಯಾಮ ಮಾಡಬಾರದು. ಯಥೇಚ್ಛ ಭೋಜನ, ಮದ್ಯಪಾನ ಮಾಡುವುದು ಒಳ್ಳೆಯದಲ್ಲ. ಜನ ನಿಬಿಡ ಪ್ರದೇಶದಲ್ಲಿ ಉಸಿರು ಕಟ್ಟಿಸುವ ಬಿಸಿ ಹವೆಯ ಕೋಣೆಯಲ್ಲಿ ವಾಸಿಸಬಾರದು, ವಾಹನಗಳು ಉಗುಳುವ ಹೊಗೆಯ ಪ್ರದೇಶದಲ್ಲಿಯೂ ಸಹ ಇರಬಾರದು, ಬೇಸಿಗೆಯ ಬಿಸಿಲಲ್ಲಿ ಮನೆ ಬಿಟ್ಟು ಹೊರಗೆ ಹೋಗುವ ಪೂರ್ವದಲ್ಲಿ ಮತ್ತು ಹೋಗಬೇಕಾದ ಸ್ಥಳಕ್ಕೆ ಹೋಗಿ ಮುಟ್ಟಿದ ನಂತರ ಸಾಕಷ್ಟು ನೀರು ಕುಡಿಯಬೇಕು. ಬೇಸಿಗೆಯ ಬಿಸಿಲಿನ ತಾಪಕ್ಕೆ ವಯೋವೃದ್ಧರು, ಸಣ್ಣ ಮಕ್ಕಳು ಮತ್ತು ಹೃದ್ರೋಗಿಗಳು ತಲ್ಲಣಗೊಳ್ಳುವುದು ಸರ್ವೇ ಸಾಮಾನ್ಯ. ಅವರಿಗೆ ವಿಶೇಷ ಕಾಳಜಿ ವಹಿಸಬೇಕು.

ಬೇಸಿಗೆಯ ಕಾಲದಲ್ಲಿ ಹತ್ತಿ ಬಟ್ಟೆಗಳಲ್ಲಿ ಚಿಕ್ಕ ಚಿಕ್ಕ ರಂಧ್ರಗಳಿರುವುದರಿಂದ ಗಾಳಿಯ ಚಲನೆಗೆ ಸಹಾಯಕ. ಆದರೆ ಪಾಲಿಸ್ಟರ್ ಬಟ್ಟೆಗಳು ರಂಧ್ರರಹಿತವಾಗಿರುವುದರಿಂದ ಗಾಳಿ ಸಂಚಾರವಿಲ್ಲದೆ, ಮೈಗೆ ಅಂಟಿಕೊಂಡಂತಾಗಿ ಸೆಕೆ ಹೆಚ್ಚಾಗಿ ಹಿಂಸೆಯಾಗುತ್ತದೆ.


ಕೊನೆಗೊಂದು ಮಾತು. ಸೂರ್ಯನ ಸುತ್ತ ಭೂಮಿ ಸುತ್ತುತ್ತಿರುವವರೆಗೆ ಬೇಸಿಗೆ ಬರುತ್ತದೆ. ಇದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಮುಂಜಾಗೃತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಿಂದ ಆಗುವ ಅನಾಹುತಗಳನ್ನು ತಪ್ಪಿಸಲು ಸಾಧ್ಯ. ಇದು ನಮ್ಮ ಕೈಯಲ್ಲಿ ಇದೆ. ■





Downloaded From:www.kpscvaani.com

# ಕನ್ನಡ ನಾಡಿನ ತಂಪಿನ ಅಂಗಳಗಳು



**ಬೇಸಿಗೆಯ ಕಾಲದಲ್ಲಿ ಪ್ರವಾಸ ಕೈಗೊಳ್ಳಬಹುದಾದ ತಂಪಿನ ಅನುಭೂತಿ ನೀಡುವ ತಾಣಗಳ ಕಿರು ಪರಿಚಯ.**

ಪಿ.ಮಮತಾ

ದ.ರಾ.ಬೇಂದ್ರೆಯವರು ಬರೆದಿರುವ 'ಹೊಂಗೆ ಹೂವ ತೊಂಗಲಲ್ಲಿ, ಭೃಂಗದ ಸಂಗೀತ ಕೇಳಿ, ಮತ್ತೆ ಕೇಳಬರುತಿದೆ...' ಎಂಬ ಪದ್ಯ ಬೇಸಿಗೆಯ ಬಿಸಿಲು ದಳ್ಳುರಿಯಾಗಿ ಸುಡುತ್ತಿರುವ ಈ ಹೊತ್ತಿನಲ್ಲಿ ನೆನಪಿಗೆ ಬರುತ್ತಿದೆ. ಇಂತಹ ರಣಬಿಸಿಲಿನಲ್ಲಿ ಹೊಂಗೆ ಮರದ ತಂಪಿನ ಅಂಗಳವನ್ನು ಈ ಪದ್ಯ ನೆನೆಪಿಗೆ ತರುತ್ತದೆ. ಜೊತೆಗೆ, ಆದಿಕವಿ ಪಂಪ ಹೇಳಿರುವ 'ತೀರದೊಡಂ ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್' ಎಂಬ ಪದ್ಯವೂ ನೆನಪಿನ ಪುಟದಲ್ಲಿ ಸುಳಿದು, ಬಿರು ಬೇಸಿಗೆಯಲ್ಲೂ ಮನಸ್ಸಿಗೆ ತಂಪಿನ ಅನುಭೂತಿಯನ್ನು ನೀಡುತ್ತದೆ.

ಈ ಬಾರಿಯ ಬೇಸಿಗೆಯು ಕಳೆದ ಬಾರಿಗಿಂತಲೂ ಅತಿ ಹೆಚ್ಚಾಗಿಯೇ ಸುಡುತ್ತಿದೆ. ತಂಪು ಗಾಳಿ ಇಲ್ಲದೇ, ಬಿಸಿಗಾಳಿ ವ್ಯಾಪಿಸಿ, ಸುಡುತ್ತಿದೆ. ಉತ್ತರ ಕರ್ನಾಟಕದಲ್ಲಿಯಂತೂ ಈ ವೇಳೆ ಭೂಮಿ ಕಾದು ನಿಗಿನಿಗಿ ಕೆಂಡದಂತಾಗಿದೆ. ಮಕ್ಕಳಿಗೆ ಬೇಸಿಗೆ ಕಾಲದ ರಜೆ ಸಿಗುವುದರಿಂದ ಬಿಸಿಲಿನಿಂದ ಬಸವಳಿದ ಜನರಿಗೆ ತಂಪನ್ನರಸಿ ಎಲ್ಲಿಯಾದರೂ ಹೋಗಬೇಕು ಎನ್ನಿಸುತ್ತದೆ. ಬಿಸಿಲಿನ ಬೇಗುದಿಯಲ್ಲೂ ಮೈಮನಗಳಿಗೆ ತಂಪು ನೀಡುವ, ಕರ್ನಾಟಕದಲ್ಲೇ ಇರುವ ಕೆಲವು ಪ್ರದೇಶಗಳ ಒಂದಿಷ್ಟು ಕಿರು ಮಾಹಿತಿಯನ್ನು ನಿಮಗಾಗಿ ಇಲ್ಲಿ ನೀಡಲಾಗಿದೆ.

### ಹಿಮವದ್ ಗೋಪಾಲಸ್ವಾಮಿ ಬೆಟ್ಟ

ಹಿಮವದ್ ಗೋಪಾಲಸ್ವಾಮಿ ಬೆಟ್ಟವು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಬಂಡೀಪುರ ಅರಣ್ಯದಲ್ಲೇ ಅತಿ ಎತ್ತರದ ಬೆಟ್ಟವಾಗಿದೆ. ಹೆಸರಿಗೆ ತಕ್ಕಂತೆ ವರ್ಷದ ಸದಾ ಕಾಲ



Downloaded From:www.kpscvaani.com

ಇಲ್ಲಿ ಹಿಮ ಆವರಿಸಿರುತ್ತದೆ.



ಸಮುದ್ರ ಮಟ್ಟದಿಂದ 1,454 ಮೀ ಎತ್ತರದಲ್ಲಿರುವ ಈ ಬೆಟ್ಟವನ್ನು ಏರುತ್ತಿದ್ದಂತೆ ತಂಪಾದ ವಾತಾವರಣ ಅನುಭವಕ್ಕೆ ಬಂದು ತುದಿ ತಲುಪುತ್ತಿದ್ದಂತೆ ಬೆಕ್ಕಸ ಬೆರಗನ್ನು ಮೂಡಿಸುವ ಹಿಮ ನಿಮ್ಮನ್ನು ಸ್ವಾಗತಿಸುತ್ತದೆ. ಇಲ್ಲಿರುವ ವೇಣುಗೋಪಾಲಸ್ವಾಮಿ ದೇಗುಲವನ್ನು ವೀಕ್ಷಿಸಿ, ಸ್ವಲ್ಪ ಹೊತ್ತು ಕೂತರೆ ನಿಮಗೆ ಸಂಜೆಯಾದರೂ ಅಲ್ಲಿಂದ ಹೊರಡಲು ಮನಸ್ಸಾಗದು. ಇಲ್ಲಿಗೆ ಬೆಳಗಿನ ಜಾವ ಹೋದರೆ ಪ್ರಕೃತಿಯ ಸೊಬಗನ್ನು ಸವಿಯಬಹುದು.

**'ಸ್ಕಾಟ್‌ಲ್ಯಾಂಡ್ ಆಫ್ ಇಂಡಿಯಾ'!**



ಭಾರತದ ಸ್ಕಾಟ್‌ಲ್ಯಾಂಡ್, ದಕ್ಷಿಣದ ಕಾಶ್ಮೀರ ಎಂಬ ಹೆಸರು ಪಡೆದಿರುವ ಕೊಡಗು ಜಿಲ್ಲೆ ಬೇಸಿಗೆಯಲ್ಲಿ ಭೇಟಿ ನೀಡಬಹುದಾದ ಮಾತ್ರವಲ್ಲ ತಂಗಬಹುದಾದ ಅತ್ಯುತ್ತಮ ಜಿಲ್ಲೆ. ಇಲ್ಲಿರುವ ಅನೇಕ ಪ್ರದೇಶಗಳು ಬೇಸಿಗೆಯಲ್ಲಿ ತಂಪಿನ ಅನುಭವ ನೀಡುತ್ತವೆ. ಮುಖ್ಯವಾಗಿ, ಮಂಜಿನ ನಗರಿ ಎನಿಸಿದ ಮಡಿಕೇರಿಗೆ ಬರುತ್ತಿರುವಾಗಲೇ ತಂಪು ಎನಿಸಲಾರಂಭಿಸುತ್ತದೆ.

ಕುಶಾಲನಗರ ದಾಟಿ, ಸುಂಟಿಕೊಪ್ಪವನ್ನು ಬಿಡುತ್ತಿದ್ದಂತೆ ಒಂದು ಬಗೆಯ ಆಹ್ಲಾದಕರ ವಾತಾವರಣ ನಿಮ್ಮನ್ನು ಬರಸೆಳೆಯುತ್ತದೆ. ಬಿಸಿಲು ಹೆಚ್ಚು ಎನಿಸಿದರೂ ಮಡಿಕೇರಿಯಲ್ಲಿ ಬೀಸುವ ಗಾಳಿ ತಂಪಾಗಿಯೇ ಇರುತ್ತದೆ. ಬಿಸಿಗಾಳಿಯ ಕಿರಿಕಿರಿ ಇಲ್ಲಿ ಇಲ್ಲ. ಮಡಿಕೇರಿಯ ರಾಜಾಸೀಟು ಉದ್ಯಾನದಲ್ಲಿ ಕುಳಿತು, ಹಚ್ಚ ಹಸಿರಿನ ಬೆಟ್ಟಗಳನ್ನು ಕಣ್ತುಂಬಿಕೊಳ್ಳುತ್ತಿದ್ದರೆ ಹೊತ್ತು ಹೋಗುವುದೇ ಗೊತ್ತಾಗುವುದಿಲ್ಲ. ಈಗಂತೂ ಇಲ್ಲಿ ಗ್ರೇಟರ್ ರಾಜಾಸೀಟ್ ನಿರ್ಮಿಸಿ, ಪ್ರವಾಸಿಗರು ಬೇಸಿಗೆಯಲ್ಲಿ ತಂಪಾದ ವಾತಾವರಣದಲ್ಲಿ ವಿಹರಿಸಲು ಇನ್ನಷ್ಟು ಹೆಚ್ಚಿನ ಅವಕಾಶ ಮಾಡಿಕೊಡಲಾಗಿದೆ.

ರಾಜಾಸೀಟಿನ ನಂತರ ಸಮೀಪದಲ್ಲೇ ಇರುವ ಅಬ್ಬಿಫಾಲ್ಸ್‌ನ್ನು ನೋಡಬಹುದು. ಧುಮ್ಮಿಕ್ಕುವ ಜಲರಾಶಿಯ ಮುಂದೆ ಬೀಸುವ ಗಾಳಿಗೆ ಮೈಯೊಡ್ಡಿ ನಿಂತರೆ, ಮತ್ತೊಂದಷ್ಟು ಹೊತ್ತು ನಿಂತೇ ಇರೋಣ ಎಂದೆನಿಸುತ್ತದೆ. ಇದಲ್ಲದೆ ಇರ್ಪು, ಮಲ್ಲಳ್ಳಿ ಫಾಲ್ಸ್ ಸೇರಿದಂತೆ ಹಲವು ಜಲಪಾತಗಳು ಜಿಲ್ಲೆಯ ಸುತ್ತಮುತ್ತಲಿವೆ. ಒಂದೆರಡು ದಿನ ಮಡಿಕೇರಿಯ ಯಾವುದಾದರೂ ತೋಟದೊಳಗಿನ ಹೋಂಸ್ಟೇನಲ್ಲೋ, ರೆಸಾರ್ಟ್‌ನಲ್ಲೋ, ಹೋಟೆಲ್‌ನಲ್ಲೋ ತಂಗಿ, ಒಂದಷ್ಟು ದಿನ ತಂಪಾದ ಜಗತ್ತಿನಲ್ಲಿ ವಿಹರಿಸಬಹುದು.

ಇಲ್ಲಿರುವ ಬ್ರಹ್ಮಗಿರಿ ಪರ್ವತಶ್ರೇಣಿ, ಸಮುದ್ರಮಟ್ಟದಿಂದ 1,748 ಅಡಿಗಳಷ್ಟು ಎತ್ತರದಲ್ಲಿರುವ ತಡಿಯಂಡಮೋಲ್ ಸೇರಿದಂತೆ ಅನೇಕ ಕಡೆ ಟ್ರೆಕ್ಕಿಂಗ್‌ಗೆ ಅವಕಾಶವೂ ಇದೆ. ಇನ್ನು ಮಾಂದಲ್‌ಪಟ್ಟಿಯ ಮೇಲೇರಿದರೆ ಸ್ವರ್ಗವೇ ಧರೆಗಿಳಿದಂತೆ ಕಾಣುತ್ತದೆ.

**ನಾಗರಹೊಳೆ**



ಕೊಡಗಿಗೆ ಹಾಗೂ ಮೈಸೂರಿಗೆ ವ್ಯಾಪಿಸಿರುವ ನಾಗರಹೊಳೆ ಅಭಯಾರಣ್ಯ ಮೇಲ್ನೋಟಕ್ಕೆ ಎಲೆ ಉದುರಿಸಿಕೊಂಡು, ಬೆಂಗಾಡಿನಂತೆ ಕಂಡರೂ ಹೊಳ ಹೊಕ್ಕು ನೋಡಿದರೆ ತಂಪಾದ ವಾತಾವರಣವನ್ನೂ ಇಲ್ಲಿ ಕಾಣಬಹುದು. ಇಲ್ಲಿನ ಸಫಾರಿಯಲ್ಲಿ ಹೊರಟರೆ ಒಂದಷ್ಟು ತಂಪಾದ ಅನುಭವ ಸಿಕ್ಕೇಸಿಗುತ್ತದೆ. ಸಮೀಪದ ಕಬಿನಿ ಹಿನ್ನೀರು ಸಹ ತಂಪಾದ ಅನುಭವ ನೀಡುತ್ತದೆ.

**ಕೆಮ್ಮಣ್ಣುಗುಂಡಿ**



ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ಹಲವು ತಂಪಾದ ಸ್ಥಳಗಳಿವೆ. ಇಲ್ಲಿನ ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಮಾಣಿಕ್ಯಧಾರಾ, ಝರಿ ಜಲಪಾತ, ಅಬ್ಬಿ ಜಲಪಾತ, ಕುದುರೆಮುಖ, ಕಳಸ, ಹೊರನಾಡು, ಶೃಂಗೇರಿ, ಎತ್ತಿನಭುಜ, ಬಲ್ಲಾಳರಾಯನದುರ್ಗ, ರಾಣಿಝರಿ, ಸಂಸೆ–ಟೀ–ಎಸ್ಟೇಟ್, ದೇವರ ಮನೆ, ಗಾಳಿಕೆರೆ ವ್ಯೂ ಪಾಯಿಂಟ್‌ಗಳು ಪ್ರಸಿದ್ಧವಾಗಿವೆ. ಇದಲ್ಲದೇ ಹೆಚ್ಚು ಪ್ರಸಿದ್ಧಿಗೆ ಬಾರದ ಉಕ್ಕಡ ಫಾಲ್ಸ್, ಕ್ಯಾತನಮಕ್ಕಿ ವ್ಯೂ ಪಾಯಿಂಟ್, ಕೊಡಿಗೆ ಫಾಲ್ಸ್ ಸಹಿತ ಸೇರಿದಂತೆ ಚಿಕ್ಕಮಗಳೂರು ಜಿಲ್ಲೆಯ ಅನೇಕ ಪ್ರವಾಸಿ ತಾಣಗಳು ಬೇಸಿಗೆಯಲ್ಲಿಯೂ ತಂಪಾದ ವಾತಾವರಣ ನೀಡುತ್ತವೆ.

**ಮುಳ್ಳಯ್ಯನಗಿರಿ**



ಪಶ್ಚಿಮಘಟ್ಟಗಳ ಸಾಲಿನಲ್ಲಿ ಸೂಜಿಗಲ್ಲಿನಂತೆ ಸೆಳೆಯುವ ಮುಳ್ಳಯ್ಯನಗಿರಿ ಕೇವಲ ಚಾರಣಕ್ಕೆ ಮಾತ್ರವಲ್ಲ ಪ್ರಕೃತಿ ಪ್ರಿಯರಿಗೂ ಬಲು ಇಷ್ಟವಾಗುವ ಸ್ಥಳ. ಬೇಸಿಗೆಗೆ ತಂಪಾದ ಸ್ಥಳ ಎನಿಸುತ್ತದೆ. ಸಮುದ್ರಮಟ್ಟದಿಂದ 1,930 ಮೀಟರ್ ಎತ್ತರ ಇರುವ ಈ ಗಿರಿ ರಾಜ್ಯದಲ್ಲೇ ಅತಿ ಎತ್ತರದ ಬೆಟ್ಟ ಎಂಬ ಹೆಸರು ಪಡೆದಿದೆ. ತಂಪಾದ ಗಾಳಿ ಪ್ರವಾಸಿಗರನ್ನು ಇಲ್ಲಿ ಬರಸೆಳೆಯುತ್ತದೆ. ಇಲ್ಲಿನ ಸೀತಾಳಯ್ಯನಗಿರಿ, ಬಾಬಾಬುಡನಗಿರಿ ಮತ್ತು ಮಾಣಿಕ್ಯಾಧಾರ ಜಲಪಾತಗಳು ಸಹ ನೋಡಬಹುದಾದ ಸ್ಥಳಗಳಾಗಿವೆ.


**ನಂದಿ ಹಿಲ್ಸ್**



ಬೆಂಗಳೂರಿನಿಂದ ಕೇವಲ 60 ಕಿ.ಮೀ ದೂರದಲ್ಲಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ಬೆಟ್ಟ ಪ್ರವಾಸಿಗರ ಸ್ವರ್ಗ. ಸಮುದ್ರ ಮಟ್ಟದಿಂದ 1,478 ಮೀಟರ್ ಎತ್ತರ ಇರುವ



Downloaded From:www.kpscvaani.com



ಪ್ರದೇಶದಲ್ಲಿ ಟಿಪ್ಪು ಸುಲ್ತಾನ್ ಬೇಸಿಗೆ ಅರಮನೆಯನ್ನು ಕಟ್ಟಿಸಿದ್ದಾನೆ. ಇಲ್ಲಿನ ತಂಪು ಹವೆ ಬೇಸಿಗೆಯಲ್ಲಿ ಹಿತ ಎನಿಸುತ್ತದೆ.

**ಆಗುಂಬೆ**

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ, ದಕ್ಷಿಣ ಭಾರತದ ಚಿರಾಪುಂಜಿ ಎಂದೇ ಹೆಸರಾಗಿರುವ ಆಗುಂಬೆಯೂ ಬೇಸಿಗೆಯಲ್ಲಿ ಭೇಟಿ ನೀಡಬಹುದಾದ ತಾಣ. ಆಗುಂಬೆಯಾ ಪ್ರೇಮ ಸಂಜೆಯಾ... ಎಂಬ ಹಾಡಿನಂತೆ ಇದು ಕೇವಲ ಪ್ರೇಮಿಗಳಿಗೆ ಮಾತ್ರ ಸಂಜೆಯಲ್ಲ. ಬಿಸಿಲಿನ ಬೇಗೆಯಲ್ಲಿ ಬಂದವರಿಗೆ ಒಂದು ತಂಪಾದ ಸಂಜೆಯನ್ನು ಇದು ನೀಡಬಲ್ಲುದು. ಈ ಪ್ರದೇಶದಲ್ಲಿ ಬೀಸುವ ತಂಗಾಳಿಗೆ ಮೈಯೊಡ್ಡಿ, ಸೂರ್ಯಾಸ್ತವನ್ನು ಕಣ್ತುಂಬಿಕೊಳ್ಳುವುದೆಂದರೆ ಅದೊಂದು ಸ್ವರ್ಗ.



**ಕೊಡಚಾದ್ರಿ**

ಶಿವಮೊಗ್ಗ ಜಿಲ್ಲೆಯಲ್ಲೇ ಇರುವ ಕೊಡಚಾದ್ರಿ ಸಹ ಬೇಸಿಗೆಯಲ್ಲಿ ತಂಪಿನ ಅನುಭವ ನೀಡುವ ತಾಣ. ಸಮುದ್ರ ಮಟ್ಟದಿಂದ 1,343 ಮೀಟರ್ ಎತ್ತರವಿರುವ ಈ ಗಿರಿಶ್ರೇಣಿಯಲ್ಲಿ ಜಲಧಾರೆಗಳು, ಜಲಪಾತಗಳಿದ್ದು, ಪ್ರಕೃತಿ ಅದ್ಭುತ ರಮ್ಯತಾಣಗಳಿವೆ. ಇದರ ಹತ್ತಿರದಲ್ಲೇ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನವಿರುವುದರಿಂದ ದೇವಸ್ಥಾನಕ್ಕೂ ಕೂಡ ಭೇಟಿ ನೀಡಬಹುದು. ಕೊಡಚಾದ್ರಿ ಬೆಟ್ಟವು ಚಾರಣ ಸ್ನೇಹಿ ಬೆಟ್ಟ ಆಗಿರುವುದರಿಂದ ಬಹಳಷ್ಟು ಜನರು ಇಲ್ಲಿಗೆ ಚಾರಣಕ್ಕಾಗಿ ಬರುತ್ತಾರೆ.



**ಹಸಿರನ್ನು ಹೊದ್ದಿರುವ ದಾಂಡೇಲಿ**



ಹಸಿರನ್ನು ಹೊದ್ದಿರುವ ದಾಂಡೇಲಿ ಇರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಸಮುದ್ರಮಟ್ಟದಿಂದ ಸುಮಾರು 1,800 ಅಡಿ ಎತ್ತರದಲ್ಲಿರುವ ಇಲ್ಲಿ, ಬೇಸಿಗೆಯಲ್ಲಿ ಒಂದಷ್ಟು ತಂಪು ನೀಡುವ ಪ್ರದೇಶಗಳಿವೆ. ಇಲ್ಲಿ ಹರಿಯುವ ಕಾಳಿ ನದಿ ಹಾಗೂ ಅದರ ಉಪನದಿಗಳು ಪ್ರದೇಶವನ್ನು ತಂಪಾಗಿಟ್ಟಿವೆ. ಕಾಳಿನದಿಯಲ್ಲಿ ಜಲಸಾಹಸ ಕ್ರೀಡೆಗಳೂ ಇವೆ. ಇಲ್ಲಿಂದ 25 ಕಿ.ಮೀ ದೂರದಲ್ಲಿ ಶಿರೋಲಿ ಶಿಖರ, ಸಿಂಥೆರಿ ರಾಕ್ ಮೊದಲಾದ ಪ್ರದೇಶಗಳನ್ನು ವೀಕ್ಷಿಸಲು ಒಂದೆರಡು ದಿನಗಳಾದರೂ ಬೇಕಾಗಬಹುದು.

ಈ ಮೇಲ್ಕಂಡ ಎಲ್ಲಾ ಪ್ರವಾಸಿ ಸ್ಥಳಗಳು ಇತರೆ ಪ್ರವಾಸಿ ತಾಣಗಳಿಗೆ ಹೋಲಿಕೆ ಮಾಡಿದರೆ ಅವುಗಳಿಗಿಂತ ಸ್ವಲ್ಪ ತಂಪಾಗಿರುತ್ತದೆ. ಬೇಸಿಗೆ ಕಾಲ ಆಗಿರುವುದರಿಂದ ಜಲಪಾತಗಳು ಬತ್ತಿರಬಹುದು. ಆದರೆ ಈ ತಾಣಗಳಲ್ಲಿ ತಂಪಿನ ವಾತಾವರಣವಂತೂ ಇದ್ದೇ ಇರುತ್ತದೆ. ■



Downloaded From:www.kpscvaani.com



# ಚೈತ್ರದ ಚೈತನ್ಯ: ಯುಗಾದಿ

ಡಾ. ಗುರುರಾಜ ಪೋಶೆಟ್ಟಿಹಳ್ಳಿ

**ಸುಖ:ದುಃಖಗಳ ಸಮರಸ ಜೀವನವನ್ನು ಜನ:ಮನಕ್ಕೆ ತಿಳಿಸುವ ಹಬ್ಬವೇ ಯುಗಾದಿ.**

**ಮಾ**ನವನ ಬದುಕು ಸುಖ-ದುಃಖಗಳ ಸಂಗಮ, ಮನುಕುಲ ಸಿಹಿ-ಕಹಿ, ಹಸಿ-ಬಿಸಿ, ಸೋಲು-ಗೆಲುವು, ನಗು-ಅಳು, ರಾತ್ರಿ-ಹಗಲುಗಳೊಂದಿಗೆ ಬಾಳುತ್ತಾ ಬಂದಿದೆ. ಬದುಕಿನ ಯಶಸ್ಸು ಇವುಗಳ ಸಮತೋಲನವನ್ನೇ ಅವಲಂಬಿಸಿದೆ. 'ಸುಖ-ದುಃಖಗಳ ಸಮರಸ ಜೀವನವೇ' ಎಂದಿದ್ದಾರೆ ಅನುಭವಿಗಳು. ಜಯ-ಅಪಜಯ ಬದುಕಿನ ಅವಿಭಾಜ್ಯ ಅಂಶಗಳು. ಇವುಗಳನ್ನು ಸಮಾನವಾಗಿ ನೋಡುವ ದೃಷ್ಟಿಯನ್ನು ಮಾನವ ಬೆಳಸಿಕೊಳ್ಳಬೇಕು ಎಂಬ ತಿಳಿವಳಿಕೆಯನ್ನು ಜನ-ಮನಕ್ಕೆ ತಿಳಿಸುವ ಹಬ್ಬವೇ ಯುಗಾದಿ.

ಹೊಸತನವನ್ನು ನಿರೀಕ್ಷಿಸುವುದು, ಹೊಸತನ್ನು ಆಚರಿಸುವುದು ಬದುಕಿನ ನಿತ್ಯ ಮಂತ್ರ. ಹಳೆಯ ಕಳೆಯನ್ನು ಕಳೆದು, ಹೊಸ ಭಾವದ ಜಲದಿಯಲ್ಲಿ ಮಿಂದು ನೆನ್ನೆಯನ್ನು ಮರೆತು ನಾಳೆಗಾಗಿ ಹಂಬಲಿಸುವುದು ಯುಗಧರ್ಮ. ಸರಸ, ಸಂಭ್ರಮ ಉತ್ಸಾಹದೊಂದಿಗೆ ಹೊಸ ಕಾಲವನ್ನು ಸ್ವಾಗತಿಸುವ ಸಾಂಸ್ಕೃತಿಕ ಆಚರಣೆಯೇ ಯುಗಾದಿ. ಜೀವನ ಎಂದೂ ಹಳತಾಗದು. ಭೂಮಿಗೆ, ಬದುಕಿಗೆ ಹೊಸ ಚೈತನ್ಯ ನೀಡಲು ಪ್ರತಿವರ್ಷವೂ ಬರುವ ಯುಗಾದಿ ಪುನರ್ಜನ್ಮದ ಸಂಕೇತ.

ಪ್ರಾಚೀನ ರೋಮನ್ ಕವಿ ಓವಿಡ್ ಒಮ್ಮೆ ಜ್ಯೋತಿಷಿ ಜಾನುಸ್ ಅನ್ನು 'ಹೊಸ ವರ್ಷ ಜನವರಿಯಿಂದಲೇ ಏಕೆ ಆರಂಭವಾಗಬೇಕು'? ಎಂದು ಕೇಳುತ್ತಾರೆ. ಅದಕ್ಕೆ ಜ್ಯೋತಿಷಿ, 'ಜನವರಿ ತಿಂಗಳಿನಲ್ಲಿ ಸೂರ್ಯ ಮಕರ ರಾಶಿ ಪ್ರವೇಶಿಸುತ್ತಾನೆ. ಅಂದಿನವರೆಗೆ ಹಿಮದಿಂದ ಮಂಕಾಗಿದ್ದ ಜಗತ್ತು ಸ್ವಚ್ಛವಾಗಿ ಜನತೆಯಲ್ಲಿ ಹೊಸ ಉತ್ಸಾಹ, ನವೋದಯ ಆರಂಭವಾಗುವುದರಿಂದ, ಅಂದಿನಿಂದ ಹೊಸ ವರ್ಷದ ಆರಂಭ' ಎಂದು ಉತ್ತರವಿತ್ತ.

ಹಿಂದೂ ಸಂವತ್ಸರಾರಂಭದ ಶುಭದಿನವಾದ ಯುಗಾದಿಯೂ, ಚೈತ್ರ ಶುದ್ಧ ಪಾಡ್ಯಮಿಯೂ ಅಷ್ಟೇ ಮಹತ್ವ ಪೂರ್ಣವಾದದ್ದು. ಕಾಲಚಕ್ರ ಆಭಾದಿತವಾಗಿ ತಿರುಗುತ್ತಲೇ ಇರುತ್ತದೆ. ಕಲ್ಪ ಮನ್ವಂತರವಾಗಿ, ಮನ್ವಂತರ ಯುಗವಾಗಿ, ಯುಗಗಳು ವರ್ಷವಾಗಿ, ವರ್ಷಗಳು ಋತು-ಮಾಸ-ದಿನವಾಗಿ ಕಾಲಚಕ್ರ ಸುತ್ತುತ್ತಲೇ ಇರುತ್ತದೆ. ಈ ಕಾಲಗಣನೆಗೆ ನಮ್ಮ ಪೂರ್ವಿಕರು ಅಪ್ಪಟ ಸ್ವಂತಿಕೆಯುಳ್ಳ ಭರತಭೂಮಿಗೆ ನಿಷ್ಠವಾದ ಕೆಲವು ಸೂತ್ರಗಳನ್ನು ಕಂಡುಕೊಂಡಿದ್ದರು.

ಈ ಸೂತ್ರಗಳಲ್ಲಿ ನಿಸರ್ಗದ ನಿರಂತರತೆಯಿದೆ. ಪ್ರಕೃತಿಯ ಪರಾಕಾಷ್ಠೆ ಇದೆ. ಎಲ್ಲೆಲ್ಲೂ ಚೈತ್ರದ ವೈಭವವೋ ವೈಭವ. ನೂರು ತರುವಿನ ತಳಿರ ಕೈಯಲಿ ನೂರು ಹೂವಿನ ದೀಪವು; ನೂರು ವರ್ಣದ ನೂರು ರಾಗದ ಚಿಲುಮೆ ಚಿಮ್ಮಲಿದೆ ಎಲ್ಲೆಡೆ.

ನಿಸರ್ಗ ಹೃದಯದಂತೆಯೇ ಜಗ ಹೃದಯವೂ ಆನಂದಮಯ. ಎಲ್ಲೆಲ್ಲೂ ಆನಂದ, ಉತ್ಸಾಹ. ವರ್ಷಾರಂಭದ ವಸಂತ ಋತು ಹಾಗೂ ಮಧ್ಯದ ಶರದ್ ಋತುಗಳಿಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷ ಆದ್ಯತೆಗಳಿದ್ದು, ನಿಸರ್ಗದಲ್ಲಾಗುವ ಬದಲಾವಣೆಗಳಿಗೆ ಈ ಋತುಗಳ ಆಗಮನ ಪೂರಕವಾಗಿದೆ. ಅನಿಷ್ಟ ನಿವಾರಣೆ ಹಾಗೂ ದೇವತಾನುಗ್ರಹಕ್ಕೆ ಈ ಋತುಗಳ ಆರಂಭ ಕಾಲ ಅತ್ಯಂತ ಶ್ರೇಷ್ಠ ಎಂಬ ಪರಿಗಣನೆ ಇದೆ.

ಚೈತ್ರ ಮಾಸದ ಶುಕ್ಲ ಪಕ್ಷದ ಪ್ರಥಮ ದಿನ ಸೂರ್ಯೋದಯದ ವೇಳೆಗೆ ಬ್ರಹ್ಮನು ಜಗತ್ತನ್ನು ಸಮಗ್ರವಾಗಿ



Downloaded From:www.kpscvaani.com



**ಹೊಸ ವರ್ಷದ ಆರಂಭವೆಂದು ಈ ಯುಗಾದಿ ಹಬ್ಬವನ್ನು ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶಗಳಲ್ಲಿ ಅದ್ದೂರಿಯಾಗಿ ಸಂಭ್ರಮಿಸಲಾಗುತ್ತದೆ.**

ಸೃಷ್ಟಿಸಿದಂದಿನಿಂದಲೇ ಆರಂಭವಾಯಿತು ಕಾಲಗಣನೆ. ಮೊದಲು ಯುಗಾದಿಯನ್ನು ಬ್ರಹ್ಮನ ಪೂಜೆಯಿಂದಲೇ ಆರಂಭಿಸುತ್ತಿದ್ದರು. ಇಂದು ಕೂಡ ರಾಜಸ್ಥಾನದ ಪುಷ್ಕರ ಸರೋವರದಲ್ಲಿಯ ಬ್ರಹ್ಮ ಮಂದಿರದಲ್ಲಿ ಯುಗಾದಿ ಹಬ್ಬದಂದು ವಿಶೇಷ ಪೂಜೆ ನಡೆಯುತ್ತದೆ.

ಚಂದ್ರ ಹಾಗೂ ಸೂರ್ಯರ ಚಲನೆಗನುಸಾರವಾಗಿ ಭಾರತದಲ್ಲಿ ಆಚರಿಸುವ ಎರಡು ಮುಖ್ಯ ಯುಗಾದಿಗಳೆಂದರೆ ಚಾಂದ್ರಮಾನ ಮತ್ತು ಸೌರಮಾನ ಯುಗಾದಿ. ಚಾಂದ್ರಮಾನ ಯುಗಾದಿಯನ್ನು ಚೈತ್ರ ಮಾಸದ ಪ್ರಥಮ ದಿನವಾದ ಪಾಡ್ಯದಿಂದ ಆಚರಿಸುತ್ತಾರೆ. ಸೌರಮಾನ ಯುಗಾದಿಯನ್ನು ಸೂರ್ಯನು ಮೇಷರಾಶಿಯನ್ನು ಪ್ರವೇಶಿಸುವ ದಿನ ಆಚರಿಸುತ್ತಾರೆ. ತುಳುನಾಡು, ಕೇರಳ ಮತ್ತು ತಮಿಳುನಾಡುಗಳಲ್ಲಿ ಸೌರಮಾನ ರೀತ್ಯಾ ಮೇಷ ಸಂಕ್ರಮಣದ ಮರುದಿನ ಏಪ್ರಿಲ್ 14 ರಂದು ಆಚರಿಸುತ್ತಾರೆ.

ಆದಿತೀರ್ಥಂಕರನ ಜ್ಯೇಷ್ಠ ಪುತ್ರ ಭರತ ಚಕ್ರವರ್ತಿಯ ಭೂಮಂಡಲ ದಿಗ್ವಿಜಯ ಮಹೋತ್ಸವವೂ ಯುಗಾದಿಯಂದೇ ನಡೆದದ್ದು, ಅಂದಿನಿಂದಲೇ ಶಾಲಿವಾಹನ ಶಕೆಯ ಪ್ರಾರಂಭ. ಈ ದಿವಸದಲ್ಲಿ ಯಾವ ವಾರ ಇರುತ್ತದೆಯೋ ಅದರ ಗ್ರಹವನ್ನೇ ಇಡೀ ವರ್ಷದ ಅಧಿಪತಿ ಎಂದು ಕರೆಯುತ್ತಾರೆ.

ವೈದಿಕ ಸಂಪ್ರದಾಯದವರು ಮಾತ್ರವಲ್ಲದೆ, ಇರಾನಿಗರೂ ಕೂಡ ತಮ್ಮ ವರ್ಷ ಪ್ರಾರಂಭವನ್ನು ಈ ದಿನದಿಂದಲೇ ಆರಂಭ ಮಾಡಿ, ಅದನ್ನು 'ನೌರೋಜ್ ' ಎಂದು ಕರೆಯುತ್ತಾರೆ.

'ಉಂಡದ್ದೇ ಉಗಾದಿ: ಮಿಂದದ್ದೇ ದೀಪಾವಳಿ' ಎಂಬ ಅನುಭವ ಜನ್ಯ ನುಡಿಯಿದೆ. ದೀಪಾವಳಿಯಂದು ಅಭ್ಯಂಜನಕ್ಕೆ ಆದ್ಯತೆಯಾದರೆ, ಯುಗಾದಿಯಂದು ಭೋಜನಕ್ಕೆ ಆದ್ಯತೆ. ಕರ್ನಾಟಕದ ಹೆಚ್ಚಿನ ಪ್ರದೇಶಗಳಲ್ಲಿ ವಸಂತಾಗಮನದ ಸಮಯಕ್ಕೆ ಸುಗ್ಗಿ ಮುಗಿದಿರುತ್ತದೆ. ಬೆವರು ಸುರಿಸಿ ಬೆಳೆದ ಫಲ ರೈತನ ಮನೆ ತುಂಬಿರುತ್ತದೆ. ಭೂಮಾತೆ ಕರುಣಿಸಿದ ಫಲವನ್ನು ಸಡಗರ ಸಂಭ್ರಮದಿಂದ ರೈತ ಮಕ್ಕಳು ಯುಗಾದಿಯಂದು ಮೃಷ್ಟಾನ್ನ ಭೋಜನದ ಸವಿಯನ್ನು ಉಣ್ಣುತ್ತಾರೆ.

ಮಂಗಳ ಸ್ನಾನ, ನೂತನ ವಸ್ತ್ರಧಾರಣೆ, ಇಷ್ಟದೇವತಾರಾಧನೆ ಇವೇ ಮುಂತಾದವು ಎಲ್ಲ ಹಬ್ಬಗಳಲ್ಲೂ ಸಾಮಾನ್ಯ ಸಂಪ್ರದಾಯಗಳು. ಯುಗಾದಿ ಹಬ್ಬದ ಎರಡು ವಿಶೇಷವೆಂದರೆ ಬೇವು–ಬೆಲ್ಲದ ಸೇವನೆ ಮತ್ತು ಪಂಚಾಂಗ ಶ್ರವಣ.

ಬೇವು ಬೆಲ್ಲದ ಸೇವನೆ ಅತ್ಯಂತ ಮಹತ್ವಪೂರ್ಣವಾದದು ಮತ್ತು ಅರ್ಥಗರ್ಭಿತವಾದದ್ದು. ಅದು ಮನುಷ್ಯ ಜೀವನದ ಮಹಾನ್ ತತ್ವವೊಂದನ್ನು ಸೂಚಿಸುತ್ತದೆ. ಮನುಷ್ಯನಾದವನು ಸುಖ–ದುಃಖಗಳನ್ನು ಸಮಾನವಾಗಿ ಕಾಣುವ ಸ್ಥಿತಪ್ರಜ್ಞತೆಯನ್ನು ಗಳಿಸಿಕೊಳ್ಳಬೇಕೆಂಬ ತತ್ವವನ್ನು ತಿಳಿಸುತ್ತದೆ. ಬೇವಿನ ಕಹಿಯುಂಡವನೇ ಬೆಲ್ಲದ ಸಿಹಿಯನ್ನು ಅನುಭವಿಸಬಲ್ಲ.

ಶಾಕ್ತ ಸಂಪ್ರದಾಯದಲ್ಲಿ ರೇಣುಕಾದಿ ಮಾತೃದೇವತೆಗಳ ಪೂಜೆಯಲ್ಲಿ ಬೇವಿನ ಮರಕ್ಕೆ ವಿಶೇಷ ಪ್ರಾಶಸ್ತ್ಯ ಉಂಟು. ಬೇವಿನ ಚಿಗುರೆಲೆಯು ಉಗಾದಿಯ ದೇವತೆಯಾದ ಪ್ರಜಾಪತಿ ಕಾಲಪುರುಷನಿಗೆ ಅತಿಪ್ರಿಯವಾಗಿದೆ. ಅಂತೆಯೇ ವೈದ್ಯಕೀಯ ದೃಷ್ಟಿಯಿಂದ ಅದರ ಕ್ರಿಮಿನಾಶಕ, ರೋಗನಿವಾರಕ ಗುಣ ವಿಶೇಷಗಳು ಅಮೂಲ್ಯವಾದವು.

ಯುಗಾದಿ ಆಚರಣೆಯ ಆಶಯ ಒಂದೇ ಆಗಿದ್ದರೂ ಕೂಡ ಪ್ರದೇಶಕ್ಕನುಗುಣವಾಗಿ ತನ್ನ ರೂಪ ವೈವಿಧ್ಯಗಳನ್ನು ವಿಸ್ತರಿಸಿಕೊಂಡಿದೆ.

ಉತ್ತರ ಕರ್ನಾಟಕದಲ್ಲಿ ಯುಗಾದಿ 'ಗುಡಿ ಪಾಡವ' ಎಂಬ ಮರಾಠಿ ಸಂಪ್ರದಾಯದ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಅಂದು ಮನೆಯ ಮುಂದೆ ಒಂದು ಕೋಲನ್ನು ನಿಲ್ಲಿಸಿ ಅದಕ್ಕೆ ಬಣ್ಣದ ಬಟ್ಟೆಯೊಂದನ್ನು ಸಿಕ್ಕಿಸಿ, ಅದರ ಮೇಲೆ ಒಂದು ತಂಬಿಗೆಯನ್ನು ಬೋರಲಾಗಿ ಹಾಕಿ, ಅದನ್ನು ಬೇವಿನ ತೋರಣದಿಂದ ಸಿಂಗರಿಸುತ್ತಾರೆ.

ಈ ಧ್ವಜಕ್ಕೆ 'ಇಂದ್ರಧ್ವಜ'ವೆಂದು ಹೆಸರು. ಪುರುವಂಶದ ವಸುರಾಜನು ಇಂದ್ರನಿಂದ ಯುದ್ಧದಲ್ಲಿ ಜಯಗಳಿಸಿ ಪುಷ್ಪಹಾರವನ್ನು ಪಡೆದು ಯುಗಾದಿಯ ಶುಭದಿನದಂದು ತನ್ನ ನಗರವನ್ನು ಪ್ರವೇಶಿಸಿ, ಇಂದ್ರನ ಗೌರವಾರ್ಥ ಉತ್ಸವವನ್ನು ನಡೆಸಿದನಂತೆ.

ಯುಗಾದಿಯನ್ನು ಕೇರಳ ಹಾಗೂ ತುಳುನಾಡುಗಳಲ್ಲಿ 'ವಿಷು' ಹಬ್ಬವಾಗಿ ಆಚರಿಸುತ್ತಾರೆ. ಅಂದು ಪ್ರತಿ ಮಲೆಯಾಳಿಗಳ ಮನೆಯಲ್ಲಿ ವಿಷು ಕಣಿಯಿಡುವ ಸಂಭ್ರಮವಿರುತ್ತದೆ. 'ಕಣಿ' ಎಂದರೆ ಕಾಣುವುದು. ಸಮೃದ್ಧಿಯಾದುದನ್ನು ಸರ್ವಶ್ರೇಷ್ಠವಾದುದನ್ನೂ ನೋಡುವುದು ಎಂದರ್ಥ.

ಹಿಂದಿನ ರಾತ್ರಿಯೇ ದೇವರ ಕೋಣೆಯಲ್ಲಿ ಅಥವಾ ತುಳಸಿಕಟ್ಟೆಯ ಎದುರು ರಂಗೋಲಿ ಹಾಕಿ ಹರಿವಾಣದಲ್ಲಿ ಅಕ್ಕಿ, ತೆಂಗಿನಕಾಯಿ, ಹಣ್ಣು, ತರಕಾರಿ ಮುಂತಾದ ಪವಿತ್ರ ವಸ್ತುವನ್ನಿಟ್ಟು ಬದಿಯಲ್ಲಿ ಕನ್ನಡಿಯಿಟ್ಟು, ಚಿನ್ನದ ಸರ, ವಸ್ತ್ರಗಳಿಂದ ಸಿಂಗರಿಸುತ್ತಾರೆ. ಬೆಳಗ್ಗೆ ಎದ್ದು ದೀಪ ಹಚ್ಚಿ ಬೇರೆ ಏನನ್ನೂ ನೋಡುವುದಕ್ಕಿಂತ ಮೊದಲು ಕಣಿ ನೋಡಿ ನಮಸ್ಕರಿಸುತ್ತಾರೆ. ಬದಿಯಲ್ಲಿಟ್ಟ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಾರೆ. ಆ ವರ್ಷವಿಡೀ ಮಂಗಳಕಾರಕ ದೃಶ್ಯಗಳು ತಮಗೆ ಕಾಣಸಿಗುತ್ತವೆ ಎಂಬ ನಂಬಿಕೆ ಅವರದು.

ಇಲ್ಲಿ ಮುಪ್ಪಿಗೆ ಎಡೆಯಿಲ್ಲ; ನಿರಾಶೆಗೆ ಆಸ್ಪದವಿಲ್ಲ, ವೈರಾಗ್ಯಕ್ಕೆ ನೆಲೆಯಿಲ್ಲ. ಪ್ರತಿದಿನವೂ ಮಾನವರಿಗೆ ಹೊಸ ಚೈತನ್ಯ, ಹೊಸ ಹುರುಪು, ಹೊಸ ಹುಟ್ಟು, ದಿನದಿನವೂ, ವರ್ಷ ವರ್ಷವೂ ನಾವು ಜಗತ್ತಿನೊಂದಿಗೆ ಪ್ರೀತಿ–ಪ್ರೇಮಗಳ ಸುಮಧುರ ಬಾಂಧವ್ಯವನ್ನು ಪುನರುಜ್ಜೀವನಗೊಳಿಸಿ, ನವೀಕರಿಸಿ ಕೃತಾರ್ಥರಾಗುತ್ತೇವೆ. ಇದುವೇ ಬದುಕಿನ ಸವಿ, ಸ್ವಾರಸ್ಯ, ಸಾರ್ಥಕ್ಯ. ಇದೇ ಯುಗಾದಿಯ ದಿವ್ಯ, ಚಿರನೂತನ ಸಂದೇಶವೂ ಹೌದು. ■


Downloaded From:www.kpscvaani.com



# ಜಗತ್ತಿನ ಗಮನ ಸೆಳೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
Bengaluru International Film Festival
29 FEB - 07 MAR | 2024

**ಬೆಂಗಳೂರಿನಲ್ಲಿ ಜಗತ್ತು ಎಂಬ ಘೋಷವಾಕ್ಯದೊಂದಿಗೆ ಜರುಗಿದ 15 ನೇ ಬೆಂಗಳೂರು ಅಂತಾರಾಷ್ಟ್ರೀಯ**

ಎನ್. ವಿದ್ಯಾಶಂಕರ್

**ಈ**ಗ ಅಂತಾರಾಷ್ಟ್ರೀಯ ಚಲನಚಿತ್ರಗಳು ಸುಲಭವಾಗಿ ಡಿಜಿಟಲ್ ರೂಪದಲ್ಲಿ ನೋಡಸಿಗುತ್ತಿವೆ. ವಿಪರ್ಯಾಸವೆಂದರೆ ಅದೇ ವೇಳೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳ ಸಂಖ್ಯೆಯೂ ಹೆಚ್ಚುತ್ತಿದೆ. ಇದಕ್ಕೊಂದು ತಾರ್ಕಿಕ ಕಾರಣವಿರಬೇಕು. ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳು ನೋಡುಗರಿಗೆ ಅವರವರ ಸಾಂಸ್ಕೃತಿಕ ವಲಯದಲ್ಲೇ ರೂಪಿತವಾದ ತಮಗೇನು ಬೇಕು, ತಮ್ಮ ಆಯ್ಕೆ ಯಾವುದು ಎನ್ನುವ ಮೂಲಭೂತ ಅಧಿಕಾರ ನೀಡುತ್ತದೆ. ಪ್ರೇಕ್ಷಕರು ಟೆಲಿವಿಷನ್ ಮೂಲಕ, ಲ್ಯಾಪ್‌ಟಾಪ್ ಮೂಲಕ ಹಾಗೂ ಮೊಬೈಲ್ ಫೋನ್‌ಗಳ ಮೂಲಕ ಮತ್ತು ಇತರ ಮಾಧ್ಯಮಗಳ ಮೂಲಕ  ಕುಳಿತಲ್ಲೇ ತಮಗೆ ಬೇಕಾದುದನ್ನು ಪಡೆಯಬಹುದು.

ಆದರೆ ಅವು ಯಾವುವೂ ಚಲನಚಿತ್ರದ ನಿಜವಾದ ಅನುಭವವನ್ನು ನೀಡುವುದಿಲ್ಲ. ಮಾರುಕಟ್ಟೆಯಲ್ಲಿ, ಓಟಿಟಿ ವೇದಿಕೆಗಳಲ್ಲಿ ಕಾಣಸಿಗದ ಅನೇಕ ದೇಶಗಳ, ಅನೇಕ ಭಾಷೆಗಳ ಚಿತ್ರಗಳನ್ನು ವೀಕ್ಷಿಸುವ ಅವಕಾಶವನ್ನು ಚಿತ್ರೋತ್ಸವಗಳು ಒದಗಿಸುತ್ತವೆ. ಅಷ್ಟೇ ಅಲ್ಲದೆ, ಸ್ಥಳೀಯ ಚಲನಚಿತ್ರ ನಿರ್ಮಾಪಕರಿಗೆ, ನಿರ್ದೇಶಕರಿಗೆ, ತಂತ್ರಜ್ಞರಿಗೆ ತಮ್ಮ ಊರಿನಲ್ಲೇ ಕುಳಿತು ಸೃಜನಾತ್ಮಕ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳಬಹುದಾದ ಅವಕಾಶವನ್ನು ಕಲ್ಪಿಸುತ್ತದೆ. ಅಲ್ಲದೆ ಸಿನಿಮಾಗಳು ವಿವಿಧ ಸಂಸ್ಕೃತಿಗಳು, ಅದರೊಳಗಿನ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಅರಿಯಲು ಸಹಕರಿಸುತ್ತದೆ.

ಸಿನಿಮಾ ಇತರೇ ಮಾಧ್ಯಮದ ರೀತಿಯಲ್ಲೇ ಇಂದಿನ ಜಾಗತಿಕ ಮಾನವೀಯ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಯಾದರೂ, ಅದು ಬೇರೆಲ್ಲಾ ಮಾಧ್ಯಮಗಳಿಗಿಂತ ಭಿನ್ನವಾದದ್ದು ಮತ್ತು ಅವುಗಳಿಗಿಂತ ಹೆಚ್ಚು ಸಮಕಾಲೀನ ವಿಷಯಗಳನ್ನು ಒಳಗೊಳ್ಳುವಂತಹದು. ಅದು ಅದರದ್ದೇ ಆದ ವಿಶೇಷ ಸ್ವಭಾವವೂ ಹೌದು. ಅಲ್ಲದೆ ಚಲನಚಿತ್ರೋತ್ಸವ ಸಮಕಾಲೀನ ವಾಸ್ತವ, ಚಲನಚಿತ್ರಗಳನ್ನು ತಯಾರಿಸುವಲ್ಲಿ ಮೂಡಿಬರುವ ಹೊಸ ಶೈಲಿ, ವಿಧಾನಗಳಿಗೆ ಮಾತ್ರ ವೇದಿಕೆಯಾಗದೆ, ಮನರಂಜನಾ ಮಾಧ್ಯಮದ, ತಂತ್ರಜ್ಞಾನದ, ಸಮೂಹ ಸಂಸ್ಕೃತಿಯ ಆರ್ಥಿಕ ಸ್ಥಿತಿಗತಿಗಳನ್ನು ಹಂಚಿಕೊಳ್ಳುವ ವೇದಿಕೆಯಾಗಿಯೂ ಮುಖ್ಯಪಾತ್ರವನ್ನು ನಿರ್ವಹಿಸುತ್ತಿದೆ.


Downloaded From:www.kpscvaani.com

## ಚಿತ್ರೋತ್ಸವದಲ್ಲಿ ಗಮನ ಸೆಳೆದ ಪ್ರಮುಖ ಚಿತ್ರಗಳು

ಸಂವಿಧಾನ ಜಾರಿಯಾಗಿ 75 ವರ್ಷಗಳು ತುಂಬುತ್ತಿರುವ ಹಿನ್ನಲೆಯಲ್ಲಿ ಚಿತ್ರೋತ್ಸವದಲ್ಲಿ ಸಂವಿಧಾನದ ಮೌಲ್ಯಕ್ಕೆ ತಕ್ಕಂತಹ ಸಿನಿಮಾಗಳನ್ನು ಆಯ್ಕೆ ಮಾಡಲಾಗಿತ್ತು. ಈ ಬಾರಿ ವಿಶೇಷವಾಗಿ ಮಹಿಳಾ ಪ್ರಧಾನ ಚಿತ್ರಗಳ ಜೊತೆಗೆ ಯುವಪ್ರತಿಭೆಗಳ ಚಿತ್ರಗಳು ಪ್ರದರ್ಶನಗೊಂಡಿದ್ದು ಹೆಮ್ಮೆಯ ವಿಷಯ. ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಚಿತ್ರಗಳ ಬಗ್ಗೆ ಹೇಳುವುದಾದರೆ, ಜರ್ಮನ್ ಭಾಷೆಯ 'ಪರ್ಫೆಕ್ಟ್ ಡೇಸ್' ಚಿತ್ರವು ಇಂದಿನ ಸಮಕಾಲಿನ ಯುವ ಜನತೆಗೆ ಒಂದು ಉತ್ತಮ ಪಾಠದಂತಿತ್ತು. ಏನಾದರೂ ಜೀವನದಲ್ಲಿ ಕಹಿ ಘಟನೆ ನಡೆದಾಗ ಎಲ್ಲವೂ ಮುಗಿದೇ ಹೋಯಿತು ಎನ್ನುವ ನಕಾರಾತ್ಮಕ ಭಾವನೆಗೆ ಬಂದುಬಿಡುವ ನಮ್ಮ ಯುವಕರು ಇದರಿಂದ ಸಾಕಷ್ಟು ಕಲಿಯುವುದಿದೆ. ವೃತ್ತಿ ಯಾವುದಾದರೂ ನಿಷ್ಠೆಯಿಂದ ಮಾಡಿದರೆ ಖುಷಿಯ ಜೊತೆಗೆ ನೆಮ್ಮದಿಯ ಬದುಕು ಸಿಗುತ್ತದೆ ಎಂಬುದಕ್ಕೆ ಈ ಚಿತ್ರ ಸಾಕ್ಷಿ. ಈ ಚಿತ್ರದ ಹೀರೋ ತನ್ನ ಬದುಕಿನಲ್ಲಿ ನಡೆದ ಕಹಿ ಘಟನೆಗಳನ್ನು ಮರೆತು ಟಾಯ್ಲೆಟ್ ತೊಳೆಯುವ ಕೆಲಸವನ್ನೇ ನಿಷ್ಠೆಯಿಂದ ಮಾಡುತ್ತಾ, ಎಲ್ಲರಲ್ಲೂ ಪ್ರೀತಿ ವಿಶ್ವಾಸ ಗಳಿಸುವ ಸಿನೆಮಾ ಒಂದು ಅದ್ಭುತ ಸಾಮಾಜಿಕ ಸಿನೆಮಾ ಎಂದರೆ ತಪ್ಪಿಲ್ಲ.

'ದಿ ಬುರ್ಡೆನ್ಡ್' ಯಮನ್ ದೇಶದ ಅರೇಬಿಕ್ ಭಾಷೆಯ ಈ ಚಿತ್ರ ಒಂದು ಮುಸ್ಲಿಂ ಕುಟುಂಬದ ಸುತ್ತ ನಡೆಯುವ ಕಥೆ. ಮಕ್ಕಳ ಉತ್ತಮ ವಿದ್ಯಾಭ್ಯಾಸಕ್ಕಾಗಿ ಬೇಡವಾದ ಗರ್ಭ ತೆಗೆಸಲು ಮುಸ್ಲಿಂ ಕಾನೂನಿನ ವಿರುದ್ಧವಾಗಿ ಹೋರಾಡಿ ಜಯಗಳಿಸುವ ಕಥೆ. ಇಂದಿನ ನಮ್ಮ ಮುಸ್ಲಿಂ ಕುಟುಂಬಗಳು ಇದರಿಂದ ಕಲಿಯುವುದು ಸಾಕಷ್ಟಿದೆ. 'ದಿ ಟೀಚರ್' ಮತ್ತು 'ದಿ ಟೀಚರ್ ಲಾಂಜ್' ಎರಡೂ ವಿಭಿನ್ನ ಕತೆಗಳು. ಯುವ ಮನಸಿನ ಉತ್ಸಾಹದಲ್ಲಿ ಹುಡುಗಾಟಿಕೆಯ ಸಹೋದರ ವಿದ್ಯಾರ್ಥಿಗಳು ಸಾರ್ವಜನಿಕವಾಗಿ ಹೊಡೆದ ಒಂದು ಕಲ್ಲು ಪೊಲೀಸ್ ಸ್ಟೇಷನ್ ಮೆಟ್ಟಿಲೇರಿ, ಶಿಕ್ಷೆಗೆ ಗುರಿಯಾಗುತ್ತಾನೆ. ಈ ಸಮಯದಲ್ಲಿ ಅವನು ಲೋಕಲ್ ಟೆರರಿಸ್ಟ್ ಮುಖಂಡನ ಗುಂಡಿಗೆ ಬಲಿಯಾಗುತ್ತಾನೆ. ಅದೇ ದ್ವೇಷದಿಂದ ಕುದಿಯುತ್ತಿದ್ದ ಮತ್ತೊಬ್ಬ ಅವನನ್ನು ಕೊಲ್ಲಲು ಅವಣಿಸುತ್ತಾನೆ. ಆದರೆ ಶಾಲೆಯ ಇಂಗ್ಲಿಷ್ ಶಿಕ್ಷಕ ಈ ಎಳೆಯ ವಯಸ್ಸಿನಲ್ಲಿ ಕುದಿಯುವ ರೋಷಾವೇಶಕ್ಕೆ ಬಲಿಯಾಗದಂತೆ ಹೇಳಿ, ಕೊನೆಯಲ್ಲಿ ಅವನ ಕೇಸನ್ನು ತನ್ನ ಮೇಲೆ ಹಾಕಿಕೊಂಡು ಈ ವಿದ್ಯಾರ್ಥಿಗೆ ಉನ್ನತ ಶಿಕ್ಷಣಕ್ಕೆ ನೆರವಾಗುವ ಶಿಕ್ಷಕ ನಮಗೆಲ್ಲ ಮಾದರಿ ಎಂದರೆ ಅತಿಶಯೋಕ್ತಿಯಲ್ಲ.

'ದಿ ಬ್ಯಾಟಲ್' ಎಡಪಂಥೀಯ ವಿದ್ಯಾರ್ಥಿಗಳ ಮೇಲೆ ನಡೆವ ಶೋಷಣೆ ತೆರೆದಿಟ್ಟರೆ, 'ಎಕ್ಸಡಿಸ್' ಎಂಬ ಸ್ವೀಡನ್ ಚಿತ್ರ ಮಾನವ ಕಳ್ಳ ಸಾಗಣೆಯ ಕರಾಳ ಮುಖವನ್ನು ಪರಿಚಯಿಸುತ್ತದೆ. ಇನ್ನು ಇಸ್ರೇಲ್ ಪ್ರಧಾನಿ ಗೋಲ್ಡಮ್ ಮೇರಿಯವರ ಬಯೋ ಪಿಕ್ 'ಗೋಲ್ಡ್' ಇಂದಿನ ಇಸ್ರೇಲ್ ಮತ್ತು ಪ್ಯಾಲೆಸ್ತೀನಿ ಆಡಳಿತದ ಮೇಲೆ ಪರಿಣಾಮ ಬೀರುತ್ತದೆ. ಹೀಗೆ ಹಲವಾರು ಚಿತ್ರಗಳು ಇಂದಿನ ಸಾಮಾಜಿಕ ವ್ಯವಸ್ಥೆಯನ್ನು ಬಿಂಬಿಸುವುದರಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಇನ್ನು ಸಮಕಾಲೀನ ಚಿತ್ರಗಳ ಪಟ್ಟಿಯಲ್ಲಿ ಅತ್ಯುತ್ತಮ ಚಿತ್ರ 'ವಿತೌಟ್ ಏರ್' ಒಬ್ಬ ಸಾಹಿತ್ಯದ ಪಾಠ ಮಾಡುವ ಶಿಕ್ಷಕಿ ಮಕ್ಕಳಿಗೆ ಸಿನಿಮ ನೋಡಿ ಎಂದು ಹೇಳುವ ಕಥೆ. ವಿಭಿನ್ನ ತಿರುಹು ಪಡೆದು ಶಾಲಾ ಆಡಳಿತ ಮಂಡಳಿಯಿಂದ ಬಹಿಷ್ಕಾರಕ್ಕೆ ಒಳಗಾಗಿ ಕೆಲಸ ತೊರೆಯುವ ಸನ್ನಿವೇಶ ಎಂತವರಲ್ಲೂ ಒಂದು ನಿಮಿಷ ಚಿಂತೆಗೆ ಹಚ್ಚುವಂತೆ ಮಾಡುತ್ತದೆ. ಭಾರತೀಯ ಸಿನಿಮಾ ವಿಭಾಗದಲ್ಲಿ ಅತ್ಯುತ್ತಮ ಡಾಕ್ಯುಮೆಂಟರಿ ಪ್ರಶಸ್ತಿ ಪಡೆದ 'ರೈಟಿಂಗ್ ವಿತ್ ಫೈರ್' ಎಂಬ ಮಹಿಳಾ ಪ್ರಧಾನ ಚಿತ್ರ ಗ್ರಾಮೀಣ ಪತ್ರಕರ್ತೆಯರ ಸವಾಲುಗಳನ್ನು ಒಂದುಕಡೆ ಹಾಗೂ ಗ್ರಾಮೀಣ ಭಾಗದಲ್ಲಿ ಜಾತೀಯತೆಯ ಕರಾಳ ಮುಖವನ್ನು ಚಿತ್ರದುದ್ದಕ್ಕೂ ಕಣ್ಣು ತರೆಯುವಂತೆ ಮಾಡಿದೆ ಎಂದರೆ ತಪ್ಪಾಗುವುದಿಲ್ಲ.

**– ವೆಂಕಟೇಶ್ ತೂಬಿನಕೆರೆ**

ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಈ ವಿಶಾಲ ದೃಷ್ಟಿಯಿಂದ ರೂಪಿಸಲಾಗಿದೆ. ವಿಶ್ವ ಸಿನಿಮಾಕ್ಕೆ ಸ್ಥಳೀಯ ವೇದಿಕೆ, ಸಿನಿಮಾ ಮಾಧ್ಯಮದ ಸಾಂಸ್ಕೃತಿಕ ಹಾಗೂ ಬೌದ್ಧಿಕ ಬೆಳವಣಿಗೆಗಳ ವೇದಿಕೆಯನ್ನಾಗಿಯೂ ಚಿತ್ರೋತ್ಸವದ ಕಲ್ಪನೆ ಮೂಡಿದೆ.

ಭಾರತೀಯ ಚಲನಚಿತ್ರೋತ್ಸವಗಳ ಗುಣಮಟ್ಟದ ಪಟ್ಟಿಯಲ್ಲಿ ಈಗಾಗಲೇ ಅದು ನಮೂದಿತವಾಗಿದೆ. ಹಾಗೂ ವಿಶ್ವದ ಎಲ್ಲ ಕಡೆಯಿಂದ ಆಗಮಿಸಿದ್ದ ಪ್ರತಿನಿಧಿಗಳ ಅಭಿಪ್ರಾಯದ ಪ್ರಕಾರ ಬೆಂಗಳೂರು ಚಿತ್ರೋತ್ಸವ ಭಾರತದ ಅತಿದೊಡ್ಡ ಚಿತ್ರೋತ್ಸವಗಳಲ್ಲಿ ಒಂದು. ಚಿತ್ರೋತ್ಸವಕ್ಕೆ ಮಾನ್ಯತೆ ನೀಡಿರುವ ಬ್ರೂಸೆಲ್ಸ್‌ನಲ್ಲಿರುವ ಅಂತಾರಾಷ್ಟ್ರೀಯ ಚಲನಚಿತ್ರ ನಿರ್ಮಾಪಕರ ಸಂಘಟನೆಗಳ ಒಕ್ಕೂಟ (ಫಿಯಾಫ್) ಕೂಡ, ದೊಡ್ಡ ಚಲನಚಿತ್ರೋತ್ಸವವಾಗಿದೆ ಎಂದು ಪ್ರಶಂಸಿಸಿದೆ. ಗುಣಮಟ್ಟ, ಪ್ರಮಾಣ, ಸಾರ್ವಜನಿಕರು ಮತ್ತು ಚಿತ್ರೋದ್ಯಮದವರ ಪಾಲ್ಗೊಳ್ಳುವಿಕೆ, ಯುವ ಸಿನಿಮಾಸಕ್ತರ ಉತ್ಸಾಹ ಹಾಗೂ ಶೈಕ್ಷಣಿಕ ಚಟುವಟಿಕೆಗಳು ಚಿತ್ರೋತ್ಸವದ ಗುಣಮಟ್ಟವನ್ನು ಹೆಚ್ಚಿಸಿದವು.

ಯಾವುದೇ ತಾಂತ್ರಿಕ ಅಡಚಣೆಗಳಿಲ್ಲದೆ, 215 ಚಲನಚಿತ್ರಗಳನ್ನು 13 ಚಿತ್ರಮಂದಿರಗಳಲ್ಲಿ ಸತತವಾಗಿ ಪ್ರದರ್ಶಿಸಿದ್ದು ತೆರೆಮರೆಯಲ್ಲಿ ದುಡಿದ ಯುವ ಸಿನಿಮಾ ತಂಡದ ಕೌಶಲ್ಯಕ್ಕೆ ಉದಾಹರಣೆಯಾಗಿದೆ. ಚಿತ್ರೋತ್ಸವದ ಯಶಸ್ಸು ಎನ್ನುವುದು ಆ ಚಿತ್ರೋತ್ಸವದಲ್ಲಿ ಪಾಲ್ಗೊಳ್ಳುವ ಸಿನಿಮಾಸಕ್ತರ ಸಂಖ್ಯೆಯನ್ನು ಆಧರಿಸಿದೆ. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ಗುಣಮಟ್ಟದ ಸಿನಿಮಾ, ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು, ತಂತ್ರಜ್ಞರು, ಚಿತ್ರೋತ್ಸವದ ಕಾರ್ಯಕ್ರಮ ಯೋಜಕರು ಹಾಗೂ ಸಿನಿಮಾ ಕಲಾವಿದರ ಪಾಲ್ಗೊಳ್ಳುವಿಕೆ ಚಿತ್ರೋತ್ಸವದ ಯಶಸ್ಸಿನ ಅಳತೆಗೋಲಾಗಿದೆ. ಹತ್ತು ಸಾವಿರ ಪ್ರತಿನಿಧಿಗಳು ಚಿತ್ರೋತ್ಸವದಲ್ಲಿ ಭಾಗವಹಿಸಿದ್ದರು. ಶೇ.90 ರಷ್ಟು ಹಾಜರಾತಿ ಇರುತ್ತಿತ್ತು. ನೂರಕ್ಕಿಂತ ಹೆಚ್ಚು ವಿದೇಶಿ ಪ್ರತಿನಿಧಿಗಳು ಮತ್ತು ದೇಶದ ಇತರ ಭಾಗಗಳಿಂದ ಆಗಮಿಸಿದ್ದ ಸಿನಿಮಾ ಲೋಕದ ಗಣ್ಯರು ಈ ಚಿತ್ರೋತ್ಸವದಲ್ಲಿ ಭಾಗವಹಿಸಿದ್ದರು.

ಚಲನಚಿತ್ರ ನಿರ್ಮಾಪಕರು, ತಂತ್ರಜ್ಞರು, ವಿಮರ್ಶಕರು,


Downloaded From:www.kpscvaani.com

ಮಾಧ್ಯಮದವರು, ಚಿತ್ರೋತ್ಸವ ಸಂಘಟಕರು, ಕಾರ್ಯಕ್ರಮ ಆಯೋಜಕರು ವಿಶ್ವದ ಎಲ್ಲ ಕಡೆಯಿಂದ ಆಗಮಿಸಿದ್ದರು. ಕನ್ನಡ ಚಿತ್ರರಂಗದ ನಿರ್ಮಾಪಕರು, ನಿರ್ದೇಶಕರು, ಕಲಾವಿದರು, ತಂತ್ರಜ್ಞರು ಮತ್ತು ಸಿನಿಮಾಕ್ಕೆ ಸಂಬಂಧಿಸಿದ ಗಣ್ಯರು ಅತಿದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು ದೊಡ್ಡ ತೆರೆಯಲ್ಲಿ ವಿವಿಧ ದೇಶಗಳ ಸಿನಿಮಾ ನೋಡಿ ಅನುಭವ ಪಡೆದರು. ಆಸ್ಟ್ರೇಲಿಯಾ, ಶ್ರೀಲಂಕಾ, ರಷ್ಯಾ, ಜೆಕ್‌ರಿಪಬ್ಲಿಕ್, ತೈವಾನ್, ಬಲ್ಗೇರಿಯಾ, ಬ್ರಿಟನ್, ಜರ್ಮನಿ, ಸ್ಪೈನ್, ಅಲ್ಲದೆ, ಬೆಂಗಳೂರಿನ ಸಾಗರೋತ್ತರ ಕಾನ್ಸುಲೇಟ್ ಮತ್ತು ಸಂಸ್ಕೃತಿ ಕೇಂದ್ರಗಳ ಪ್ರತಿನಿಧಿಗಳು ಚಿತ್ರೋತ್ಸವದಲ್ಲಿ ಭಾಗವಹಿಸಿದ್ದರು.



ಚಿತ್ರೋತ್ಸವದಲ್ಲಿ ಭಾಗವಹಿಸಿದ್ದ ದೇಶದ ಇತರ ಭಾಗಗಳ ಅತಿಥಿಗಳೆಂದರೆ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಹಾರಾಷ್ಟ್ರದ ಪ್ರಖ್ಯಾತ ಸಿನಿಮಾ ನಿರ್ದೇಶಕ ಹಾಗೂ ರಂಗತಜ್ಞ ಡಾ.ಜಬ್ಬಾರ್ ಪಟೇಲ್, ಪುಣೆಯ ಖ್ಯಾತ ನಟ ಹಾಗೂ ನಿರ್ಮಾಪಕ ಡಾ.ಮೋಹನ್ ಅಗಸೆ, ಭಾರತೀಯ ಚಲನಚಿತ್ರೋತ್ಸವ ನಿರ್ದೇಶನಾಲಯ ಗೋವಾ, ಕೇರಳ ಮತ್ತು ಅಜಂತಾ/ಎಲ್ಲೋರಾ ಚಿತ್ರೋತ್ಸವಗಳ ಕಲಾತ್ಮಕ ನಿರ್ದೇಶಕರುಗಳು, ಮತ್ತು ಸ್ಪರ್ಧಾತ್ಮಕ ವಿಭಾಗಗಳಲ್ಲಿ ಭಾಗವಹಿಸಿದ್ದ ಚಿತ್ರಗಳ ನಿರ್ದೇಶಕರು. ಎನ್‌ಡಿಟಿವಿಯ ಸೈಬಲ್ ಚಟರ್ಜಿ, ನವದೆಹಲಿಯ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪ್ರತಿನಿಧಿ ಶ್ರೀಮತಿ ನಮ್ರತಾ ಜೋಶಿ, ಚೆನ್ನೈ ಹಿಂದೂಸ್ತಾನ್ ಟೈಮ್ಸ್‌ನ ಕೆ.ವಾಸುದೇವನ್, ಮುಂಬೈ ಸಿನಿ ಬ್ಲಿಟ್ಜ್ ಪತ್ರಿಕೆಯ ಶ್ರೀ ಜ್ಯೋತಿ ವೆಂಕಟೇಶ್ ಮಾಧ್ಯಮ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಹೆಸರಾಂತ ಚಲನಚಿತ್ರ ವಿಮರ್ಶಕರಾದ ಕೇರಳದ ವಿ.ಕೆ.ಜೋಸೆಫ್, ಶ್ರೀ ಪ್ರೇಮೇಂದ್ರ ಮುಜುಂದಾರ್ (ಕೋಲ್ಕತ್ತಾ), ಮೇಘಚಂದ್ರ ಕೊಂಗ್‌ಬಾಮ್ (ಮಣಿಪುರ), ಶ್ರೀಮತಿ ರಿತಾದತ್ತ (ಕೋಲ್ಕತ್ತಾ), ಅಶೋಕ್ ರಾಣೆ (ಮುಂಬೈ), ಲಲಿತ ರಾವ್ (ಜೈಪುರ) ಮತ್ತೂ ಅನೇಕ ಮಂದಿ ಭಾಗವಹಿಸಿದ್ದರು.

ಅಂತಾರಾಷ್ಟ್ರೀಯ ಮಾಧ್ಯಮ ಪ್ರತಿನಿಧಿಗಳಾಗಿ ಚಲನಚಿತ್ರ ವಿಮರ್ಶಕರಾದ ಶ್ರೀಮತಿ ವೈರಾ ಲಾಂಗ್ರೋವ (ಜೆಕ್ ರಿಪಬ್ಲಿಕ್), ಶ್ರೀಮತಿ ನಿನಾ ಕೊಚೆಲೆವ್ಯಾ (ರಷ್ಯಾ), ಶ್ರೀಮತಿ ರೋಸಾನ್ನ ಅಲಾನ್ಸೊ (ಸ್ಪೈನ್) ಹಾಗೂ ತೈವಾನಿನ ಹಾನ್‌ಟಿಯೆನ್ ಭಾಗವಹಿಸಿದ್ದರು. ಅಂತಾರಾಷ್ಟ್ರೀಯ ನಿರ್ದೇಶಕರಾದ ಶ್ರೀಲಂಕಾದ ಪ್ರಸನ್ನ ವಿತನಗೆ, ಆಸ್ಟ್ರೇಲಿಯಾದ ಶ್ರೀಮತಿ ಮೇಡಲೀನ್ ಬ್ಲಾಕ್ವೆಲ್ ಸೇರಿದಂತೆ ಹಲವು ವಿದೇಶಿ ಗಣ್ಯರು ಭಾಗವಹಿಸಿದ್ದರು.

ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಹದಿನಾರು ವಿಭಾಗಗಳಿದ್ದವು. ಸಮಕಾಲೀನ ವಿಶ್ವಸಿನಿಮಾ, ನಿರ್ದೇಶಕರ ಪುನರಾವಲೋಕನ, ದೇಶ ಕೇಂದ್ರಿತ ಚಿತ್ರಗಳು, ಸ್ಮರಣೆ, ನೆನಪು..ಇತ್ಯಾದಿ ವಿಭಾಗಗಳಿದ್ದವು. ಕೇಳರಿಯದ ಉಪಭಾಷಾ ಚಿತ್ರಗಳ ವಿಭಾಗ ವಿನೂತನ ಅನುಭವ ನೀಡಿತು. ಆತ್ಮಚರಿತ್ರೆ, ಸಿನಿಮಾದಲ್ಲಿ ಮಹಿಳಾ ಶಕ್ತಿ, ಸಮಾನತೆ, ಬಂಧುತ್ವ, ಲಿಂಗಸಮಾನತೆ, ಪರಿಸರ ಕಾಳಜಿ ವಸ್ತುಗಳನ್ನೊಳಗೊಂಡ ಸಾಕ್ಷ್ಯ ಚಿತ್ರ ವಿಭಾಗ ಹೆಚ್ಚಿನ ಗಮನ ಸೆಳೆಯಿತು. ದೇಶ ಕೇಂದ್ರಿತವಾಗಿ ಜರ್ಮನಿ ದೇಶದ ಚಲನಚಿತ್ರಗಳಿದ್ದವು. ಕನ್ನಡ ಚಿತ್ರರಂಗದಲ್ಲಿ ಅಪಾರ ಕಲಾಸೇವೆ ಮಾಡಿದ ನಟಿ ಲೀಲಾವತಿ, ನಿರ್ದೇಶಕ ಭಗವಾನ್ ಮತ್ತು ನಿರ್ದೇಶಕ ಸಿ.ವಿ.ಶಿವಶಂಕರ್ ಅವರಿಗೆ ನಮನಗಳನ್ನು ಸಲ್ಲಿಸಲಾಯಿತಲ್ಲದೆ, ಅವರ ಪ್ರಾತಿನಿಧಿಕ ಚಲನಚಿತ್ರಗಳನ್ನು ಪ್ರದರ್ಶಿಸಲಾಯಿತು.

ಜಗತ್ತಿನ ಅತ್ಯುತ್ತಮ ನಿರ್ದೇಶಕರೆನಿಸಿದ ಭಾರತದ ಮೃಣಾಲ್ ಸೇನ್ ಹಾಗೂ ಇರಾನಿನ ನಿರ್ದೇಶಕ ಅಬ್ಬಾಸ್ ಕಿರೋಸ್ತೊಮಿ ಅವರು ಚಲನಚಿತ್ರ ರಂಗಕ್ಕೆ ನೀಡಿದ ಅಸಾಧಾರಣ ಕೊಡುಗೆಯನ್ನು ಸ್ಮರಿಸಲಾಯಿತು. ಈ ನಿರ್ದೇಶಕರ ಆಯ್ದ ಚಲನಚಿತ್ರಗಳು ಪ್ರದರ್ಶನಗೊಂಡವು. ಮೃಣಾಲ್ ಸೇನ್ ಅವರಿಗೆ ನೂರು ತುಂಬಿದ ಸಂದರ್ಭವನ್ನೂ ಆಚರಿಸಲಾಯಿತು. ಕೋಲ್ಕತ್ತಾದ ನಿರ್ದೇಶಕ ಶೇಖರ್ ದಾಸ್ ಅವರು ಮೃಣಾಲ್ ಸೇನ್ ಅವರ ಬಗ್ಗೆ ಉಪನ್ಯಾಸ ನೀಡಿದರು. ಕನ್ನಡದ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಅವರಿಗೂ ನೂರು ತುಂಬಿದ್ದು, ಈ ಸಂದರ್ಭಕ್ಕಾಗಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಹಾಗೂ ಸಂಗೀತ ನಿರ್ದೇಶಕ ಎಸ್.ಆರ್.ರಾಮಕೃಷ್ಣ ಅವರು ಉಪನ್ಯಾಸ ನೀಡಿದರು.






Downloaded From:www.kpscvaani.com



ಚಿತ್ರೋತ್ಸವದಲ್ಲಿ ಶೈಕ್ಷಣಿಕ ಸಂವಾದದ ಅಂಗವಾಗಿ ಸೆಮಿನಾರುಗಳು, ಸಿನಿಮಾ ಕಾರ್ಯಾಗಾರಗಳು, ಮಾಸ್ಟರ್ ಕ್ಲಾಸ್ ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಿನಿಮಾ ಬಗ್ಗೆ ಆಸಕ್ತಿ ಹೊಂದಿರುವ ವೃತ್ತಿಪರರು, ವಿದ್ಯಾರ್ಥಿಗಳು, ಹಾಗೂ ಸಿನಿಮಾ ಆಸಕ್ತರಿಗೆ ಇದು ಉಪಯುಕ್ತ ವೇದಿಕೆಯಾಗಿತ್ತು. ಈ ವೇದಿಕೆಗಳಲ್ಲಿ ಚರ್ಚೆಗಳು ಅದರಲ್ಲೂ ಸಿನಿಮಾದಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ, ಛಾಯಾಗ್ರಹಣದ ಅಭ್ಯಾಸ, ಹಿನ್ನೆಲೆ, ಪ್ರೊಡಕ್ಷನ್ ಡಿಸೈನ್, ಕಲಾ ನಿರ್ದೇಶನ, ಲಿಂಗ ಸಮಾನತೆ, ಚಲನಚಿತ್ರ ಸಂಗೀತದಲ್ಲಿ ಶಾಂತಿ ಉಪಕ್ರಮ ವಿಧಾನಗಳು, ಚಲನಚಿತ್ರ ಸಂಗೀತಕ್ಕೆ ವಿಜಯಭಾಸ್ಕರ್ ಅವರ ಕೊಡುಗೆ, ಶೈಕ್ಷಣಿಕ ಕ್ಷೇತ್ರದಲ್ಲಿ ವಿಮರ್ಶೆಯ ಪಾತ್ರ, ಚಲನಚಿತ್ರೋತ್ಸವಗಳಲ್ಲಿ ಚಲನಚಿತ್ರಗಳ ಮಾರ್ಕೆಟಿಂಗ್, ಸಹಭಾಗಿತ್ವ ಚಲನಚಿತ್ರ ನಿರ್ಮಾಣ ಮೊದಲಾದವು ಈ ಸಂವಾದದಲ್ಲಿ ಉಪಯುಕ್ತ ಚರ್ಚೆಗಳಾಗಿದ್ದವು.

ಈ ಸಂವಾದಗಳಲ್ಲಿ ಭಾಗವಹಿಸಿದವರೆಲ್ಲರೂ ವೃತ್ತಿಪರರೇ ಆಗಿದ್ದರು. ಜರ್ಮನಿಯ ಸಂಕಲನಕಾರ ಕಾಯ್ ಏರ್ಮನ್, ಲಂಡನ್‌ನಲ್ಲಿ ಭಾರತೀಯ ಚಲನಚಿತ್ರೋತ್ಸವದ ನಿರ್ದೇಶಕ ಕ್ಯಾರಿ ಸಾಹ್ನಿ, ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಛಾಯಾಗ್ರಾಹಕ ಎಚ್.ಎಂ.ರಾಮಚಂದ್ರ, ಕಲಾ ನಿರ್ದೇಶಕ ಶಶಿಧರ ಅಡಪ, ಅಮೆರಿಕ ಹಾಗೂ ಚೀನಾದೇಶಗಳ ಮಾಜಿ ರಾಯಭಾರಿ ಶ್ರೀಮತಿ ನಿರುಪಮಾ ರಾವ್ ಹಾಗೂ ಮಾಜಿ ಮುಖ್ಯ ಕಾರ್ಯದರ್ಶಿ ಸುಧಾಕರರಾವ್ ಅವರುಗಳು ಭಾಗವಹಿಸಿದ್ದರು. ಕರ್ನಾಟಕ ಲೇಖಕಿಯರ ಸಂಘದ ಸದಸ್ಯರು ಲಿಂಗ ಸಮಾನತೆ ಕುರಿತಂತೆ ಅಸ್ಸಾಂನ ನಿರ್ದೇಶಕಿ ರಜನಿ ಬಸುಮತಾರಿ ಅವರೊಂದಿಗೆ ನಡೆಸಿದ ಸಂವಾದ ಕಾರ್ಯಕ್ರಮ ವಿಶೇಷವಾಗಿತ್ತು.

ಇದೇ ಸಮಯದಲ್ಲಿ ಕನ್ನಡ ಚಿತ್ರರಂಗಕ್ಕೆ 90 ತುಂಬಿದ ಸಂಭ್ರಮವನ್ನೂ ಆಚರಿಸಲಾಯಿತು. ಕನ್ನಡ ಚಿತ್ರರಂಗದ ಮಹತ್ವವನ್ನು ಪ್ರತಿನಿಧಿಸುವ 25 ಚಲನಚಿತ್ರಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಮಾರ್ಚ್ 3 ಕನ್ನಡದ ಮೊದಲ ವಾಕ್‌ಚಿತ್ರ ಬಿಡುಗಡೆಯಾದ ದಿನ. ಈ ಸುದಿನವನ್ನು ಆಚರಿಸಲು ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ ಹಿರಿಯ ಚಲನಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ, ಗಿರಿಜಾ ಲೋಕೇಶ್, ಡಾ.ಕೆ.ಪುಟ್ಟಸ್ವಾಮಿ, ವಿತರಕ ಸುರೇಶ್, ಮೊದಲಾದವರು ಮಾತನಾಡಿದರು.

ಚಲನಚಿತ್ರೋತ್ಸವದ ಮುಖ್ಯಘಟ್ಟವೆಂದರೆ ಚಿತ್ರೋತ್ಸವದ ಸ್ಪರ್ಧಾತ್ಮಕ ವಿಭಾಗ. ಏಷಿಯನ್, ಇಂಡಿಯನ್ ಹಾಗೂ ಕನ್ನಡ ಸಿನಿಮಾ ವಿಭಾಗಗಳಲ್ಲಿ ಸ್ಪರ್ಧಾತ್ಮಕ ಚಲನಚಿತ್ರಗಳು ಪೈಪೋಟಿ ನಡೆಸುತ್ತವೆ. ಈ ವಿಭಾಗಕ್ಕೆ ಈ ಸಲ 319 ಚಲನಚಿತ್ರಗಳು ಭಾಗವಹಿಸಲು ಅರ್ಜಿ ಸಲ್ಲಿಸಿದ್ದು, ಆಯ್ಕೆ ಕಠಿಣವೆನಿಸಿದರೂ ಆಯ್ಕೆದಾರರು, ಸಲಹಾ ಸಮಿತಿ ಸದಸ್ಯರು ಅತ್ಯಂತ ಶ್ರಮವಹಿಸಿ ಮೌಲ್ಯಮಾಪನದ ಮೂಲಕ ಮೂರೂ ವಿಭಾಗಗಳಲ್ಲಿ ಉತ್ತಮ ಆಯ್ಕೆ ಮಾಡಿದ್ದಾರೆ. ಹೆಸರಾಂತ ರಂಗಕರ್ಮಿ, ಸಿನಿಮಾ ನಿರ್ದೇಶಕ ಎಂ. ಎಸ್. ಸತ್ಯು ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಿದ್ದು ಈ ವರ್ಷದ ವಿಶೇಷ ಘಟನೆ.

ಒಟ್ಟಿನಲ್ಲಿ 15 ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಅದರ ಉದ್ದೇಶದಲ್ಲಿ ಅತ್ಯಂತ ಯಶಸ್ವಿಯಾಗಿದೆ. ಚಲನಚಿತ್ರಗಳ ಕಥಾವಸ್ತುವಿನ ಆಯ್ಕೆ, ಗುಣಮಟ್ಟ ಎಲ್ಲದರಲ್ಲೂ ಉನ್ನತಿ ಮೆರೆದಿದೆ. ಬೆಂಗಳೂರಿನಲ್ಲಿ ಜಗತ್ತು ಎಂಬ ಚಿತ್ರೋತ್ಸವದ ಘೋಷವಾಕ್ಯವನ್ನು ಉಳಿಸಿಕೊಂಡೇ ಈ ಯಶಸ್ಸಿನ ಹಾದಿಯಲ್ಲಿ ಮುಂದಿನ ಚಲನಚಿತ್ರೋತ್ಸವದ ಆವೃತಿ ಇನ್ನೂ ಉತ್ತಮವಾಗಿರುತ್ತದೆ ಎನ್ನುವ ಭರವಸೆ ನೀಡುತ್ತಿದ್ದೇವೆ. ಚಲನಚಿತ್ರ ಮಾರುಕಟ್ಟೆ, ಚಿತ್ರಕಥಾ ಕೇಂದ್ರಗಳು, ಪ್ರೊಡಕ್ಷನ್ ಲ್ಯಾಬ್‌ಗಳ ವಿಷಯದಲ್ಲಿ ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಮುಂದೆ ದಾರಿಗಳಿವೆ. ಆ ನಿಟ್ಟಿನಲ್ಲಿ ಕರ್ನಾಟಕದ ಯುವ ನಿರ್ದೇಶಕ, ಸಿನಿಮಾಸಕ್ತರಿಗೆ ಉತ್ತಮ ಅವಕಾಶಗಳು ಒದಗಿ ಬರಲಿವೆ.


Downloaded From:www.kpscvaani.com



# ಪುಸ್ತಕ ಸಂಸ್ಕೃತಿ ಸುಂದರ ಬದುಕಿನ ಆಕೃತಿ

ಸಂಗಮನಾಥ ರೇವತಗಾಂವ

> **ಪುಸ್ತಕ ಓದುವ ಸಂಸ್ಕೃತಿಯನ್ನು ಬೆಳೆಸಿದಾಗಲಷ್ಟೇ ವಿಶ್ವ ಪುಸ್ತಕ ದಿನಾಚರಣೆಗೊಂದು ಅರ್ಥ.**

ಪುಸ್ತಕಗಳು ಸಾಹಿತ್ಯ, ಸಂಸ್ಕೃತಿಗಳ ಆಗರವಾಗಿವೆ. ಇಂಥ ಶ್ರೀಮಂತ ಗರ್ಭದ ಚಿಲುಮೆಗಳಿಂದಲೇ ಸಾಹಿತ್ಯ, ಸಂಸ್ಕೃತಿ, ದೇಶಪ್ರೇಮದ ಸೆಲೆಯೊಡೆದು ತೊರೆಯಾಗಿ, ಹಳ್ಳವಾಗಿ ಹರಿದು, ಅಮೃತ ವಾಹಿನಿಯಾಗಿ ನಾಡಿನ ಜನತೆಯನ್ನು ಸಚೇತನಗೊಳಿಸಿ, ಜಾಗೃತವಾಗಿರಿಸಿ, ನಮ್ಮ ಸಂಸ್ಕೃತಿಯನ್ನು ಶ್ರೀಮಂತವಾಗಿಸುತ್ತವೆ. ಪುಸ್ತಕಗಳ ಬಗ್ಗೆ ಇಟ್ಟ ಆಸಕ್ತಿ ಮತ್ತು ಶ್ರದ್ಧೆಗಳ ಮೇಲೆ ರಾಷ್ಟ್ರದ ಪ್ರಗತಿಯು ಅವಲಂಬಿಸಿರುತ್ತದೆ.


ಯುನೆಸ್ಕೋ ಸಹಯೋಗದಲ್ಲಿ 1972 ರ ಏಪ್ರಿಲ್ 23 ರಂದು 'ವಿಶ್ವ ಪುಸ್ತಕ ದಿನ' ಎಂದು ಮೊದಲ ಬಾರಿಗೆ ಆಚರಿಸಲಾಯಿತು. ಅದಾದ 23 ವರ್ಷಗಳ ನಂತರ ಪ್ರತಿವರ್ಷ ಏಪ್ರಿಲ್ 23 ನೇ ದಿನವನ್ನು ಜಾಗತಿಕ ಮಟ್ಟದಲ್ಲಿ ಪುಸ್ತಕ ದಿನವನ್ನಾಗಿ ಆಚರಿಸಲಾಗುತ್ತಿದೆ.

'ಪುಸ್ತಕ ದಿನ'ದ ಆಚರಣೆ ಕೇವಲ ಗ್ರಂಥಾಲಯಗಳು, ಬುಕ್ ಕ್ಲಬ್‌ಗಳು, ಸಾಹಿತ್ಯ, ಸಂಘ-ಸಂಸ್ಥೆಗಳ ಸ್ಥಾಪನೆಗೆ ಮಾತ್ರ ಸೀಮಿತವಾಗಬಾರದು. ಅಲ್ಲದೆ ಎಲ್ಲ ವರ್ಗದ ಓದುಗರಿಗೆ ತಲುಪುವಂತಹ ಪುಸ್ತಕಗಳು ಪ್ರಕಟವಾಗಬೇಕು. ಪುಸ್ತಕಗಳು ಸಾಮಾನ್ಯರಿಗೂ ಎಟಕುವ ಬೆಲೆಯಲ್ಲಿದ್ದು, ಸರಳ ಭಾಷೆಯಲ್ಲಿರಬೇಕು.





Downloaded From:www.kpscvaani.com



ಪುಸ್ತಕಗಳ ಅಂದ-ಚಂದ, ಮುದ್ರಣ, ವಿನ್ಯಾಸ, ಬೈಂಡಿಂಗ್, ಉಪಯೋಗಿಸುವ ಕಾಗದ ಇವೆಲ್ಲವೂ ಆಕರ್ಷಕವಾಗಿರಬೇಕಾಗುತ್ತದೆ. ಅದರಂತೆ ಅವುಗಳಲ್ಲಿನ ಬರಹ, ವಿಷಯ ನಿರೂಪಣೆ ಉನ್ನತಮಟ್ಟದ್ದಾಗಿರಬೇಕು. ಅನೇಕ ಕನ್ನಡ ಪುಸ್ತಕಗಳಲ್ಲಿ ಇವುಗಳ ನ್ಯೂನತೆ ಇನ್ನೂ ಕಾಡುತ್ತಿದೆ. ನಮ್ಮಲ್ಲಿ ಎಲ್ಲ ಕನ್ನಡ ಪುಸ್ತಕಗಳು ಒಂದೆಡೆ ಮಾರಾಟಕ್ಕೆ ದೊರೆಯುವಂತಹ ಪುಸ್ತಕದ ಅಂಗಡಿಗಳು ಕಡಿಮೆಯಾಗುತ್ತಿವೆ.

ದೂರದರ್ಶನ ಮತ್ತು ವಿವಿಧ ಚಾನಲ್‌ಗಳ ಪ್ರಭಾವದಿಂದ ಯುವಕರು-ಯುವತಿಯರು ಪುಸ್ತಕದ ಓದಿನಿಂದ ವಿಮುಖರಾಗುತ್ತಿದ್ದಾರೆ. ಅದರಲ್ಲೂ ಫೇಸ್‌ಬುಕ್ ಹಾಗೂ ವ್ಯಾಟ್ಸ್‌ಆ್ಯಪ್‌ಗಳ ಸಹವಾಸದಿಂದ ಓದು ಕಡೆಗಣಿಸುವಂತಾಗಿದೆ.



ಹಾಗಾಗಿ ಯುವಜನರಲ್ಲಿ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಬೇಕು. ಆದ್ದರಿಂದ ಓದುಗರನ್ನು ಆಕರ್ಷಿಸಬೇಕಾಗಿರುವ ಗ್ರಂಥಾಲಯದ ಪರಿಸರ ಮುಕ್ತವಾಗಿಯೂ, ಆಕರ್ಷಕವಾಗಿಯೂ, ಆನಂದದಾಯಕವಾಗಿಯೂ ಇರಬೇಕಾದುದು ಅಗತ್ಯ.

'ದೇಶ ಸುತ್ತಿ ತಿಳಿ ಅಥವಾ ಕೋಶ ಓದಿ ತಿಳಿ' ಎಂಬ ನಾಣ್ಣುಡಿಯನ್ವಯ, ಈ ಯಾಂತ್ರಿಕ ಯುಗದಲ್ಲಿ ದೇಶ ಸುತ್ತುವುದಂತೂ ಅಸಾಧ್ಯ. ಕೊನೆಯ ಪಕ್ಷ ಓದಿನ ಮೂಲಕ ಬೌದ್ಧಿಕ ವಿಕಾಸವನ್ನು ಹೊಂದಬಹುದು. ಪುಸ್ತಕ ಒಂದು ಮುದ್ರಿತ ವಸ್ತು. ಅದನ್ನು ನೀಡುವ, ಪಡೆಯುವ ಮೂಲಕ ಜನರು ಅಸಾಧ್ಯವಾದುದನ್ನು ಸಾಧಿಸುತ್ತಾರೆ. ಅಸಾಮಾನ್ಯತೆಯನ್ನು ಗಳಿಸುತ್ತಾರೆ. ವಿ. ಸ್ಟಾರೇಟ್ ಹೇಳುವಂತೆ "ಸುಖವನ್ನು ಸಂಗ್ರಹಿಸಬೇಕಾದರೆ ಪುಸ್ತಕಗಳನ್ನು ಸಂಗ್ರಹಿಸಬೇಕು."

ತರಂಗ ಸಂವಹನ ಯುಗದಲ್ಲಿ ಬದಕುತ್ತಾ ಇದ್ದರೂ, ಶೇ.60 ರಷ್ಟು ಜನರು ಇನ್ನೂ ಪುಸ್ತಕಗಳನ್ನೇ ಸರಿಯಾಗಿ ಬಳಸುತ್ತಿಲ್ಲ. ಶಾಲಾ-ಕಾಲೇಜು ಗ್ರಂಥಾಲಯಗಳು ನಮ್ಮ ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗಗಳೆಂದು ನಾವು ಪರಿಗಣಿಸಬೇಕು ಮತ್ತು ಅವುಗಳ ಸಮರ್ಪಕ ಕಾರ್ಯನಿರ್ವಹಣೆಯಾಗಬೇಕು.

ಇಂದು ಶಾಲಾ-ಕಾಲೇಜು ಗ್ರಂಥಾಲಯದ ಪರಿಕಲ್ಪನೆಗಳು ಬದಲಾಗುತ್ತಿವೆ. ಚೀನಾ, ಜಪಾನ್, ರಷ್ಯಾ ಮತ್ತು ಅಮೆರಿಕಾ ಇನ್ನಿತರ ದೇಶಗಳಲ್ಲಿ ಅಲ್ಲಿನ ಸರ್ಕಾರ, ಸಾರ್ವಜನಿಕರು, ಸ್ವಯಂ ಸೇವಾ ಸಂಸ್ಥೆಗಳು ಶಾಲಾ-ಕಾಲೇಜು ಗ್ರಂಥಾಲಯಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಅಲ್ಲಿನ ಪುಸ್ತಕ ಪ್ರಕಟಣೆಯು ಅತ್ಯಾಧುನಿಕವಾದ ರೀತಿಯಲ್ಲಿ ನಡೆದಿದೆ. ನಮ್ಮ ದೇಶದಲ್ಲಿ ಆಕರ್ಷಕವಾದ ಪುಸ್ತಕ ಪ್ರಕಟಣೆ ಕಾರ್ಯ ನಡೆಯಬೇಕಿದೆ. ನಮ್ಮ ಮಕ್ಕಳನ್ನು ನಾವು ನಿಜವಾಗಿ ಪ್ರೀತಿಸುತ್ತೇವೆ ಎಂದಾದರೆ


Downloaded From:www.kpscvaani.com

ನಾವು ಅವರಿಗೆ ಉತ್ತಮ ಪುಸ್ತಕಗಳನ್ನು ಕೊಡಬೇಕು. ಆ ಮೂಲಕ ಅವರು ಭವ್ಯ ಭಾರತದ ಉತ್ತಮ ಪ್ರಜೆಗಳಾಗಲು ನೆರವಾಗೋಣ. ಮನೆಗೆ ಗೃಹಿಣಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಓದುಗರಿಗೊಂದು ಪುಸ್ತಕ. ಹೂವಿಲ್ಲದೆ ಬಳ್ಳಿ ಹೇಗೆ ಶೋಭಿಸುವುದಿಲ್ಲವೋ, ಹಾಗೆಯೇ ಪುಸ್ತಕಗಳು ಇಲ್ಲದೆ ಮನೆಗೆ ಶೋಭೆಯಿಲ್ಲ.

**"ಮಾತನಾಡಲು ಜೊತೆಯು ಬೇಕು**
**ಪ್ರೀತಿ ಮಾಡಲು ಹೃದಯ ಬೇಕು**
**ಪಾಠ ಹೇಳಲು ಜ್ಞಾನ ಬೇಕು**
**ಉತ್ತಮ ಸಂಸ್ಕೃತಿ ಎನಿಸಿಕೊಳ್ಳಲು**
**ಪುಸ್ತಕಗಳು ಇರಲೇಬೇಕು."**

ಆದರೆ, ನಮ್ಮಲ್ಲಿನ ಪುಸ್ತಕ ಸಂಸ್ಕೃತಿ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಗಮನಿಸಿದರೆ ವಸ್ತು ಸ್ಥಿತಿಯ ಅರಿವಾಗುತ್ತದೆ. ಕೆಲವು ಕಾಲೇಜುಗಳಲ್ಲಿ ಪ್ರತ್ಯೇಕ ಗ್ರಂಥಾಲಯ ಕೊಠಡಿಯೇ ಇರುವುದಿಲ್ಲ. ಪುಸ್ತಕಗಳು ಪ್ರಾಚಾರ್ಯರ ಕಚೇರಿಯಲ್ಲೋ, ಅಧ್ಯಾಪಕರ ಕೊಠಡಿಯೋ, ಅಥವಾ ದಾಸ್ತಾನು ಕೊಠಡಿಯಲ್ಲೋ ಮೂಲೆಗುಂಪಾಗಿ ಬಿದ್ದಿರುತ್ತವೆ. ಅವನ್ನು ವಿದ್ಯಾರ್ಥಿಗಳಿರಲಿ, ಅಧ್ಯಾಪಕರೇ ಓದಿರುವುದಿಲ್ಲ.

ವೈವಿಧ್ಯಮಯ ಪುಸ್ತಕಗಳ ಜೊತೆಗೆ ದಾರಿ ತಪ್ಪಿಸುವ ಪುಸ್ತಕಗಳೂ ಇರುತ್ತವೆ. ನಮ್ಮನ್ನು ಗೊಂದಲಕ್ಕೀಡು ಮಾಡುವ ಪುಸ್ತಕಗಳು ಹೇರಳವಾಗಿ ಇಂದು ಲಭ್ಯವಿವೆ. ಮಕ್ಕಳು ಅವುಗಳಿಂದ ದೂರವಿರಲು ನಾವು ಎಚ್ಚರಿಸಬೇಕಾಗುತ್ತದೆ.

**ಶಾಲಾ-ಕಾಲೇಜಿನ ಪಠ್ಯ ವಿಷಯವು ಕಬ್ಬಿಣದ ಕಡಲೆಯಾಗಿ, ಜೊತೆಗೆ ಪರೀಕ್ಷೆಯಲ್ಲಿ ಕೇಳಿದ್ದನ್ನು ಕಕ್ಕಿ ಪಾಸಾಗುವುದೇ ಮುಖ್ಯವಾಗಿ, ವಿದ್ಯಾರ್ಥಿಗಳು ಗೈಡ್‌ಗಳ ಮೊರೆಹೋಗುವ ಕೆಟ್ಟ ಪರಿಸ್ಥಿತಿ ನಮ್ಮಲ್ಲಿ ನಿರ್ಮಾಣವಾಗಿಬಿಟ್ಟಿದೆ.**

ಹಾಗಾದರೆ ಪುಸ್ತಕಗಳು ತಮ್ಮ ಸ್ವರೂಪವನ್ನು ಕಳೆದುಕೊಳ್ಳುತ್ತವೆಯೇ? ಖಂಡಿತ ಇಲ್ಲ, ಏಕೆಂದರೆ ಪುಸ್ತಕಗಳು ಈಗಿನ ರೂಪದಲ್ಲಿ ನಮಗೆ ತುಂಬ ಪ್ರಿಯವಾದವು. ನಿಧಾನವಾಗಿ, ಬೇಕಾದಾಗ ಓದಿ, ಮತ್ತೆ ಮತ್ತೆ ಖುಷಿಯಾದಾಗ ತಿರುವಿಹಾಕಿ ಸಂತೋಷಪಡುವ ವಸ್ತುಗಳು. ಪುಸ್ತಕಗಳು ನಮ್ಮ ಆಪ್ತ ಸಂಗಾತಿ.

ಗ್ರಂಥೋದ್ಯಮದ ಸ್ವರೂಪ, ರೀತಿ-ನೀತಿಗಳು, ಧೋರಣೆಗಳು ಇವುಗಳಲ್ಲಿ ಮಾರ್ಪಾಟುಗಳು ಭವಿಷ್ಯದಲ್ಲಿ ಕಂಡುಬರುವುದಾದರೂ ಮೂಲಭೂತವಾದ ಹೂರಣದಲ್ಲಿ ಮಹತ್ತರ ವ್ಯತ್ಯಾಸ ಕಂಡು ಬರಲಾರದೆನಿಸುತ್ತದೆ. ಹಾಗಾಗಿ ಕನ್ನಡ ಗ್ರಂಥೋದ್ಯಮವನ್ನು ವ್ಯವಸ್ಥಿತವಾಗಿ, ದೃಢವಾಗಿ, ಅಚ್ಚುಕಟ್ಟಾಗಿ, ಮೌಲ್ಯಾಧಾರಿತವಾಗಿ, ಸಮಾಜಕ್ಕೆ ಉಪಯೋಗಿಯಾಗಿ ಬೆಳೆಸುವ ಗಂಭೀರವಾದ ಹೊಣೆಗಾರಿಕೆ ಲೇಖಕರು, ಪ್ರಕಾಶಕರು, ಮಾರಾಟಗಾರು ಹಾಗೂ ಓದುಗರ ಮೇಲೆ ಗುರುತರ ಜವಾಬ್ದಾರಿಯಿದೆ.

ಉತ್ತಮ ಸ್ನೇಹಿತರನ್ನು ಆರಿಸಿಕೊಳ್ಳುವಂತೆಯೇ ಉತ್ತಮ ಪುಸ್ತಕಗಳನ್ನು ಆರಿಸಿಕೊಳ್ಳಬೇಕು. ಕೆಲವು ಸ್ನೇಹಿತರಿಂದ ಭ್ರಷ್ಟಗೊಳ್ಳುವಂತೆ ನಾವು ಕೆಲವು ಪುಸ್ತಕಗಳಿಂದಲೂ ಭ್ರಷ್ಟಗೊಳ್ಳುತ್ತೇವೆ. ವಿವೇಚನೆ ಇರಿಸಿಕೊಂಡು ಒಳ್ಳೆಯ ಪುಸ್ತಕಗಳನ್ನು ಆರಿಸಿಕೊಳ್ಳಬೇಕು. ಮನುಷ್ಯನ ಮನಸ್ಸು ಕಂಡದ್ದನ್ನೆಲ್ಲ ತಂದು ತುಂಬಿಕೊಳ್ಳುವ ಕಸದ ತೊಟ್ಟಿ ಅಲ್ಲ. ಫ್ರ್ಯಾನ್ಸಿಸ್ ಬೇಕನ್ ಹೇಳುವಂತೆ 'ಕೆಲ ಪುಸ್ತಕಗಳ ರುಚಿಯನ್ನು ನೋಡಿ ಬಿಡಬಹುದು. ಇನ್ನು ಕೆಲ ಪುಸ್ತಕಗಳನ್ನು ನುಂಗಬಹುದು. ಮತ್ತೆ ಕೆಲ ಪುಸ್ತಕಗಳನ್ನು ಅಗಿದು ತಿಂದು ಜೀರ್ಣಿಸಿಕೊಳ್ಳಬಹುದು'.

ಮನುಷ್ಯನ ಜೀವನಕ್ಕೆ ಕಾಲ ಪರಿಮಿತಿ ಇದೆ. ಆದರೆ ಪುಸ್ತಕಗಳಿಗೆ ಕಾಲ ಪರಿಮಿತಿ ಇಲ್ಲ. ಒಂದು ಕಾಲದಲ್ಲಿ ಬರೆದ ಪುಸ್ತಕ, ಕಾಲಾತೀತವಾಗಿ ಎಲ್ಲ ಕಾಲಗಳಿಗೂ ಸೇರಿರುತ್ತದೆ. ಒಬ್ಬ ಪ್ರತಿಭಾವಂತನು ಒಂದು ಪುಸ್ತಕವನ್ನು ರಚಿಸಿದರೆ ಅದು ಅವನ ಕಾಲಕ್ಕೆ ಸೀಮಿತವಾಗಿರುವುದಿಲ್ಲ. ಅವನು ಅದನ್ನು ಪೀಳಿಗೆಯಿಂದ ಪೀಳಿಗೆಗೆ ಮುಂದಿನ ಜನಾಂಗದವರಿಗೂ ಬಳುವಳಿಯಾಗಿ ನೀಡಿರುತ್ತಾನೆ. ಆ ಪುಸ್ತಕ, ಈಗ ಇರುವವರಿಗೆ ಮಾತ್ರವಲ್ಲ ಮುಂದಿನ ತಲೆಮಾರಿಗೂ ಮೀಸಲಾಗಿರುತ್ತದೆ.

ನೀವು ಯಾವುದೇ ಪುಸ್ತಕವನ್ನು ತೆರೆದರೂ ಅದರ ಬಗೆಗೆ ನಿಮ್ಮಲ್ಲಿ ಹಲವು ಬಗೆಯ ನಿರೀಕ್ಷೆಗಳಿರುತ್ತವೆ. ಅದನ್ನು ಓದಿ ಮುಗಿಸಿದಾಗ ಅದರಿಂದ ನಿಮಗೆ ಬಹಳಷ್ಟು ಪ್ರಸನ್ನತೆ ಬಂದು ನಿಮ್ಮ ಬದುಕಿಗೆ ಬಹಳಷ್ಟು ಲಾಭವಾಗಿರುತ್ತದೆ. ವ್ಯಕ್ತಿಯು ಪುಸ್ತಕಗಳೊಂದಿಗೆ ಇದ್ದರೆ ಅವನೆಂದೂ ಒಬ್ಬಂಟಿ ಆಗಿರುವುದಿಲ್ಲ. ಅವನು ತನ್ನ ಅಪೂರ್ಣತೆಯನ್ನು ಪುಸ್ತಕದ ಓದಿನ ಮೂಲಕ ನಿವಾರಿಸಿಕೊಳ್ಳಬಹುದು.


ಶಾಲಾ-ಕಾಲೇಜಿನ ಪಠ್ಯ ವಿಷಯವು ಕಬ್ಬಿಣದ ಕಡಲೆಯಾಗಿ, ಜೊತೆಗೆ ಪರೀಕ್ಷೆಯಲ್ಲಿ ಕೇಳಿದ್ದನ್ನು ಕಕ್ಕಿ ಪಾಸಾಗುವುದೇ ಮುಖ್ಯವಾಗಿ, ವಿದ್ಯಾರ್ಥಿಗಳು ಗೈಡ್‌ಗಳ ಮೊರೆಹೋಗುವ ಕೆಟ್ಟ ಪರಿಸ್ಥಿತಿ ನಮ್ಮಲ್ಲಿ ನಿರ್ಮಾಣವಾಗಿಬಿಟ್ಟಿದೆ. ಇದು ವಿದ್ಯಾರ್ಥಿಯ ಜ್ಞಾನವನ್ನು ದಿನೇ ದಿನೇ ಕ್ಷೀಣಗೊಳಿಸಿ, ಕೊನೆಗೆ ಅವರನ್ನು ನಿರುಪಯುಕ್ತನನ್ನಾಗಿ ಮಾಡಿಬಿಡುತ್ತದೆ. ವಿದ್ಯಾರ್ಥಿಗಳು ಗೈಡ್‌ಗಳ ಮೊರೆಹೋಗುವುದು ಮೊದಲು ತೊಲಗಬೇಕು. ಹಾಗಾಗಬೇಕಾದರೆ ನಮ್ಮಲ್ಲಿ ಪುಸ್ತಕ ಸಂಸ್ಕೃತಿಯು ಬಲಗೊಳ್ಳಬೇಕು.

"ಎಲ್ಲರೂ ಪುಸ್ತಕ ಓದುಬೇಕು, ಎಲ್ಲರ ಮನೆಯಲ್ಲಿಯೂ ಪುಸ್ತಕಗಳು ಇರಬೇಕು. ಪುಸ್ತಕಗಳಿಲ್ಲದ ಮನೆಯು ಕಿಟಕಿಯಿಲ್ಲದ ಕೋಣೆಯಿದ್ದಂತೆ". ಮನೆಯಲ್ಲಿ ಪುಸ್ತಕಗಳು ತುಂಬಿದ್ದರೆ, ಮಕ್ಕಳು ಪುಸ್ತಕದ ವಾತಾವರಣದಲ್ಲಿ ಬೆಳೆಯುತ್ತಾರೆ. ಪುಸ್ತಕಗಳು ಎದುರಿಗಿದ್ದರೆ ಮಕ್ಕಳು ಓದುವುದನ್ನು ಕಲಿಯುತ್ತಾರೆ. ಬಿಡುವಿನ ಸಮಯದಲ್ಲಿ ತಂದೆ-ತಾಯಿಗಳು ಪುಸ್ತಕಗಳನ್ನು ಓದುತ್ತಿದ್ದರೆ, ಮಕ್ಕಳ ಮನಸ್ಸಿನ ಮೇಲೆ ತಾವು ಓದಬೇಕೆನ್ನುವ ಪರಿಣಾಮ ಬೀರುತ್ತದೆ.

ಪುಸ್ತಕ ದಿನವನ್ನು ಹೆಸರಿಗೆ ಮಾತ್ರ ಆಚರಿಸಿದರೆ ಸಾಲದು. ಸಾಮಾನ್ಯ ಜನರಲ್ಲಿ ಪುಸ್ತಕ ಪ್ರೀತಿ ಹೆಚ್ಚಿಸುವಂತಹ ಕೆಲಸ ನಮ್ಮೆಲ್ಲರಿಂದಾಗಬೇಕು. ಅಂದಾಗ ಮಾತ್ರ ವಿಶ್ವ ಪುಸ್ತಕ ದಿನಾಚರಣೆಯು ಅರ್ಥಪೂರ್ಣವಾಗುತ್ತದೆ.


Downloaded From:www.kpscvaani.com

# ಪದಬಂಧ-53



ವಿದ್ಯಾ ಎ. ಹಾಲಭಾವಿ

## ಎಡದಿಂದ ಬಲಕ್ಕೆ

1. ಉದಾಹರಣೆ ನೀಡುವಾಗ ಆದ ಬಾಯಾರಿಕೆ(2)
3. ಧಾನ್ಯವನ್ನು ಸಂಗ್ರಹಿಸುವ ಸ್ಥಳ (3)
6. ದೇವತೆ ಮತ್ತು ರಾಕ್ಷಸರು ಒಟ್ಟಿಗಿದ್ದಾರೆ (4)
8. ಸೂಕ್ಷ್ಮವಾದುದು ಇದು (3)
9. ಹೆರಿಗೆಯ ಸೆತ್ತೆ (2)
10. ಮನದೊಳಗೆ ಓಟನ್ನು ನೀಡುವುದು! (4)
13. ಮನಸ್ಸಿನ ಬಯಕೆ (4)
15. ಮಾವನ ಹೆಂಡತಿ (2)
16. ಉದಾರಿ ತಿರುಗಿದ್ದಾನಲ್ಲಾ! (3)
17. ತುಸುವೆ ಬೀರಿದ ಮಂದಹಾಸ (4)
18. ಉತ್ತರದವರ ವಿಪುಲತೆ (3)
19. ಬುದ್ಧಿವಂತ ಇಲ್ಲಿ ಉಲ್ಟಾ ನಿಂತಿದ್ದಾನೆ (2)

## ಮೇಲಿಂದ ಕೆಳಕ್ಕೆ

2. ಕರುವಿನ ತಾಯಿಯ ಹತ್ತಿರವಿರುವ ಎಳೆಮಗು (4)
3. ಕರ್ತಾರನಿಗೆ ವಂದಿಸುವ ಕೈ (2)
4. ಮಂದಿಯ ಮನಸ್ಸು (4)
5. ನೀವಿರುವ ಜಾಗದಲ್ಲೇ ಜಲವನ್ನು ಹುಡುಕಿ! (2)
7. ಮಗನಿಗೆ ಇದು ಸಲೀಸು! (3)
9. ನೆನಪಿನಿಂದ ಮಾಸದ ತಿಂಗಳು (2)
11. ತವರಲ್ಲಿರುವ ಲೋಹ! (3)
12. ಗಾರ್ದಭ ಇಲ್ಲಿದೆ (2)
13. ಓಟು ಕೊಡುವವನು (4)
14. ಒಳ್ಳೆಯ ಹಾದಿ ಉಲ್ಟಾ ಕಾಣುತ್ತಿದೆಯಲ್ಲಾ! (3)
15. ಅವನ ಕೆಟ್ಟಗುಣ!(4)
16. ನೆತ್ತರು ಇಲ್ಲಿದೆ (2)
17. ನಡುಗುತ್ತಿರುವವಳ ಸೊಂಟ! (2)

## ಉತ್ತರ

**ಎಡದಿಂದ ಬಲಕ್ಕೆ**

1. ದಾಹ 3. ಕಣಜ 6. ಸುರಾಸುರ 8. ನವುರು 9. ಮಾಸು 10.ಮತದಾನ 13. ಮನೋರಥ 15. ಅತ್ತೆ 16. ದಾತಾರ 17. ನಸುನಗು 18. ರಗಡು 19. ಣಜಾ

**ಮೇಲಿಂದ ಕೆಳಕ್ಕೆ**

2. ಹಸುಗೂಸು 3. ಕರ 4. ಜನಮನ 5. ನೀರು 7. ಸುಗಮ 9. ಮಾಸ 11. ತವರ 12. ಕತ್ತೆ 13. ಮತದಾರ 14. ಥಪಸು 15. ಅವಗುಣ 16. ರಕ್ತ 17. ನಡು

### -: ಸೂಚನೆ :-

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com







ಫೆಬ್ರವರಿ 17 ರಂದು ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ಬಿಬಿಎಂಪಿ ಮತ್ತು ಕಾವೇರಿ ಆಸ್ಪತ್ರೆಯವರ ಸಹಯೋಗದಲ್ಲಿ ಲೋಕಸಭಾ ಚುನಾವಣೆಯಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿ, ಮತದಾನ ಮಾಡುವಂತೆ ಜಾಗೃತಿ ಮೂಡಿಸಲು ಮಾರತಹಳ್ಳಿಯಲ್ಲಿ ಯೋಜಿಸಲಾಗಿದ್ದ ವಾಕಾಥಾನ್, ಬೈಕ್ ರೈಡಿಂಗ್ ಮತ್ತು ಸೈಕಲ್ ಜಾಥಾವನ್ನು ಏರ್ಪಡಿಸಲಾಗಿದ್ದ ಸಂದರ್ಭ.

Downloaded From:www.kpscvaani.com

RNI No. KAR/KAN/2017/75029


Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

ಚುನಾವಣಾ ಪರ್ವ
ದೇಶದ ಗರ್ವ
ಲೋಕಸಭಾ ಚುನಾವಣೆ 2024

ಮುಖ್ಯ
ಚುನಾವಣಾಧಿಕಾರಿ
ಕರ್ನಾಟಕ

ಒಳಗೊಳ್ಳುವ, ಸುಗಮ, ನೈತಿಕ ಮತ್ತು ಭಾಗವಹಿಸುವ ಚುನಾವಣೆ

# ಸಾರ್ವತ್ರಿಕ ಲೋಕಸಭಾ ಚುನಾವಣೆ 2024




ಮತದಾನದ ದಿನ
— ಮಂಗಳವಾರ —
**07**
**ಮೇ**

| PS | 3RD PHASE |
|---|---|
| 1 | Chikkodi |
| 2 | Belgaum |
| 3 | Bagalkot |
| 4 | Bijapur |
| 5 | Gulbarga |
| 6 | Raichur |
| 7 | Bidar |
| 8 | Koppal |
| 9 | Bellary |
| 10 | Haveri |
| 11 | Dharwad |
| 12 | Uttara Kannada |
| 13 | Davanagere |
| 14 | Shimoga |

ಮತದಾನದ ದಿನ
— ಶುಕ್ರವಾರ —
**26**
**ಏಪ್ರಿಲ್**

| PS | 2ND PHASE |
|---|---|
| 15 | Udupi Chikmagalur |
| 16 | Hassan |
| 17 | Dakshina Kannada |
| 18 | Chitradurga |
| 19 | Tumkur |
| 20 | Mandya |
| 21 | Mysore |
| 22 | Chamarajanagar |
| 23 | Bangalore Rural |
| 24 | Bangalore North |
| 25 | Bangalore Central |
| 26 | Bangalore South |
| 27 | Chikkballapur |
| 28 | Kolar |

Downloaded From:www.kpscvaani.com